ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಜುಲೈ 27, 2011 ಪುಟ 20 ರೂ. 14/-

ಸ್ವರ್ಣವಲ್ಲಿ ಸ್ವಾಮಿಯ ಭಗವದ್ಗೀತಾ ಭಾನಗಡಿ



ೋಸ್ಕೋ ಪಲಾಯನ


ಜನರ ಗೆಲುವು

'ಇದು ಲಿಂಗಾಯತರ ಸರ್ಕಾರವಲ್ಲ, ಬ್ರಾಹ್ಮಣರ ಸರ್ಕಾರ'

-ತೋಂಟದಾರ್ಯ ಸ್ವಾಮಿ

ಡ್ಡಿ ಸೋಮನ ಡಿ ತಮ್ಮ

ಮಂಡ್ಯ ಮಹಿಳೆಯರ ಮಾರಾಟಕ್ಕೆ ಪೋಲೀಸರ ಸಾಥ್!



ಈಶ್ವರಪ್ಪನ ಕಳ್ಳ ಆಸ್ತಿ ಎಷ್ಟು?

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

ನೋ ಕಾಮೆಂಟ್ಸ್

"ಪ್ರಪಂಚದಲ್ಲೇ ಅತ್ಯಧಿಕ ಸಂಖ್ಯೆಯ ಹಸಿವಿನಿಂದ ಪೀಡಿತರು ಇರುವ ದೇಶವೊಂದು ಕೆಲವರ ಉಪವಾಸ ಸತ್ಯಾಗ್ರಹಕ್ಕೆ ಮಾತ್ರ ಬೆಚ್ಚಿಬೀಳುವುದು ಸೋಜಿಗದ ವಿಷಯ."

- ಡಾ. ಆನಂದ್ ತೇಲ್‌ತುಂಬ್ಡೆ

"ಭೂಮಿ ಕಾಮಧೇನು ಇದ್ದಂತೆ. ಅದಕ್ಕೆ ಹಣವನ್ನು ಮೀರಿ ನಿಲ್ಲಬಲ್ಲ ಶಕ್ತಿ ಇದೆ. ಅನ್ನ ನೀಡುವ ಭೂಮಿಯನ್ನು ಹಣಕ್ಕೆ ಮಾರದಿರಿ"

- ಮೇಧಾ ಪಾಟ್ಕರ್

"ಸಾಹಿತಿಗಳು ಭ್ರಷ್ಟಾಚಾರದ ವಿರುದ್ಧ ಪೆನ್ನು ಬಳಸಬೇಕು. ರೈತರಿಗೆ ಧಕ್ಕೆಯಾದರೆ ಜೈಲಿಗೆ ಹೋಗಲು ಸಿದ್ಧರಿರಬೇಕು. ಇಂಥಾ ವೇಳೆ ಮೌನವಾಗಿರುವ ಲೇಖಕನನ್ನು ಗಲ್ಲಿಗೇರಿಸಬೇಕು."

- ಕುಂ.ವೀರಭದ್ರಪ್ಪ

"ಇತ್ತೀಚಿನ ದಿನಗಳಲ್ಲಿ ರೋಲ್‌ಕಾಲ್ ಮತ್ತು ಜಾತಿ ವ್ಯವಸ್ಥೆಯಿಂದಾಗಿ ಕನ್ನಡ ಚಳವಳಿ ಕಾವು ಕುಗ್ಗಿದೆ."

- ಜಾಣಗೆರೆ ವೆಂಕಟರಾಮಯ್ಯ

"ಜಾಗತೀಕರಣದ ನಂತರದ ಹೆಚ್ಚಿನ ಸಂದರ್ಭಗಳಲ್ಲಿ ಮಧ್ಯಮ ವರ್ಗ ತಮಗೆ ಅವಶ್ಯವಾದ ಬೇಡಿಕೆಗಳನ್ನು ಬಹಳ ಸುಲಭವಾಗಿ ಸಾಮಾನ್ಯೀಕರಿಸಿ ಅವರ ಬೇಡಿಕೆಗಳೇ ಸಮಾಜದ ಉಳಿದೆಲ್ಲಾ ಜನರ ಬೇಡಿಕೆಗಳೆಂಬಂತೆ ಪ್ರತಿಬಿಂಬಿಸುತ್ತವೆ. ಈ ವರ್ಗ ಎಂದಿಗೂ ಕೆಳವರ್ಗದ ಬೇಕು-ಬೇಡಗಳ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಲಕ್ಷಾಂತರ ಮಕ್ಕಳು ಕಲಿಯುತ್ತಿರುವ ಸರ್ಕಾರಿ ಶಾಲೆಗಳಲ್ಲಿ ಭೌತಿಕ ಸೌಲಭ್ಯ ಶಿಕ್ಷಣದ ಗುಣಮಟ್ಟ ಮತ್ತು ಕಲಿಕೆಯ ಬಗ್ಗೆ ಎಂದಿಗೂ ತಲೆ ಕೆಡಿಸಿಕೊಳ್ಳದ ಇವರು ಇದ್ದಕ್ಕಿದ್ದಂತೆಯೇ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ನೀಡಿದರೆ ಎಲ್ಲವೂ ಸರಿಹೋಗುತ್ತದೆ ಎಂಬ ಭ್ರಮೆಯನ್ನು ಹುಟ್ಟುಹಾಕಿ ಆ ಮೂಲಕ ಸವಲತ್ತುಗಳನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುತ್ತಾರೆ."

- ಡಾ. ನಿರಂಜನಾರಾಧ್ಯ

ನಂಬಿದ್ರೆನಂಬಿ ಬಿಟ್ರೆಬಿಡಿ

"ನನಗಂತೂ ಇವತ್ತಿನ ದಲಿತ ಸಾಹಿತ್ಯ ಮತ್ತು ಚಳವಳಿಗಳ ಬಗ್ಗೆ ಯಾವುದೇ ಆಸಕ್ತಿ ಉಳಿದಿಲ್ಲ. ಆ ಅಧ್ಯಾಯವನ್ನು ನನ್ನ ನೆನಪಿನಿಂದಲೇ ಅಳಿಸಿ ಹಾಕಿಬಿಡಬೇಕು ಎಂದುಕೊಂಡಿದ್ದೇನೆ. ನನ್ನ ಪ್ರಕಾರ ಇಲ್ಲಿ ಮಾಡ್ತಿರೋದೆಲ್ಲಾ ಶವಸಂಸ್ಕಾರಕ್ಕೆ ಸಮಾನವಾದದ್ದು. ದಲಿತ ಸಂಘಟನೆ ಎಂದೋ ಸತ್ತು ಹೋಗಿದೆ...ಇಂದು ದಲಿತ ನಾಯಕತ್ವ ಅಂತ ಏನಿದೆಯಲ್ಲಾ ಅದು ಡಕಾಯಿತರ ತಂಡ..ದುಡ್ಡು ವಸೂಲಿಗೆ ಇಳಿದಿರುವವರು..ಇದರ ಬಗ್ಗೆ ಹೆಚ್ಚು ನನ್ನ ಕೇಳದೇ ಇರುವುದೇ ಒಳ್ಳೆಯದು."

-ಕೆ. ರಾಮಯ್ಯ

ಬೌದ್ಧಿಕ ದಲ್ಲಾಳಿತನ!

"ಶ್ರೀ ಅನಂತಪದ್ಮನಾಭಸ್ವಾಮಿ ದೇವಸ್ಥಾನದಲ್ಲಿ ಸಿಕ್ಕ ಸಂಪತ್ತಿಗೆ ಒಡೆಯರು ಈ ಪೀಳಿಗೆಯಲ್ಲ. ಇದು ಹಿಂದಿನ ಪೀಳಿಗೆ ಭಕ್ತರು ಕೊಟ್ಟಿದ್ದು ಅದು ಹಾಗೆ ರಹಸ್ಯವಾಗಿ ಮುಂದಿನ ಪೀಳಿಗೆಗೆ ಹಸ್ತಾಂತರವಾಗಬೇಕು. ಇದು ಹಕ್ಕುಬದ್ಧವಾಗಿ ಭಗವಾನ್ ಕೃಷ್ಣನಿಗೇ ಸೇರಬೇಕು. ಆತನೇ ಈ ಸಂಪತ್ತಿನ ನಿಜವಾದ ಒಡೆಯ. ಈ ಸತ್ಯವನ್ನು ನಾವು ಒಪ್ಪಿಕೊಳ್ಳಬೇಕು."

- ಪ್ರೊ. ಆರ್. ವೈದ್ಯನಾಥನ್,
ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್
ಮೇನೇಜ್‌ಮೆಂಟ್

ಬುದ್ಧಿಜೀವಿಗೆ ಬುದ್ಧಿನಿಂತ ಕ್ಷಣ!


"ಎಚ್.ಡಿ. ಕುಮಾರಸ್ವಾಮಿಯವರು ಪ್ರಸ್ತುತ ರಾಜ್ಯ ರಾಜಕಾರಣದಲ್ಲಿ ನಿರ್ಭಯವಾಗಿ ಮಾತನಾಡುವ ಯುವ ರಾಜಕಾರಣಿ. ಮಾಡಿದ ತಪ್ಪನ್ನು ಬಹಿರಂಗವಾಗಿ ಒಪ್ಪಿಕೊಳ್ಳುವ ಮನಸ್ಸುಳ್ಳವರು. ಕುಮಾರಸ್ವಾಮಿಯವರು ಹಿಂದೆ ಅಧಿಕಾರದಲ್ಲಿದ್ದಾಗ ಮುಖ್ಯಮಂತ್ರಿಯ ಕಾರ್ಯಶೈಲಿಯನ್ನೇ ಬದಲಾಯಿಸಿದ್ದರು. ಇವರು ಜನರಲ್ಲಿ ಮೂಡಿಸಿರುವ ಭರವಸೆಗಳು ಸಾಕಾರಗೊಳ್ಳಬೇಕಾದರೆ ಅವರ ಜೀವ ಉಳಿಯಬೇಕು. ದೇವರು ಕೊಟ್ಟ ದೇಹವನ್ನು ದಂಡಿಸುವ ಅಧಿಕಾರ ನಿಮಗಿಲ್ಲ. ಅನ್ಯಾಯದ ವಿರುದ್ಧ ಪ್ರತಿಭಟನೆಗೆ ಮಾತ್ರ ದೇಹದಂಡನೆಯ ಮಾರ್ಗ ಹಿಡಿಯಬಹುದು. ನಿಮ್ಮ ಅಭಿಮಾನಿಯಾಗಿ ಕೇಳಿಕೊಳ್ಳುತ್ತಿದ್ದೇನೆ. ಉಪವಾಸ ಕೈಬಿಡಿ."

- ಯು.ಆರ್. ಅನಂತಮೂರ್ತಿ

ಗದಗದಿಂದ ಕಾಲ್ಕಿತ್ತ ಪೋಸ್ಕೋ

ರೈತಾಪಿಯ ಜಯದ ಬಗ್ಗೆ ಸಂಭ್ರಮವಿರಲಿ-ಬಿಜೆಪಿಯ ರಾಜತಂತ್ರದ ಬಗ್ಗೆ ಎಚ್ಚರವಿರಲಿ

"ಪ್ರಾಣವನ್ನಾದರೂ ಕೊಡುತ್ತೇವೆ, ಭೂಮಿಯನ್ನು ಕೊಡುವುದಿಲ್ಲ" ಎಂದು ಹಳ್ಳಿಗುಡಿಯ ರೈತರು ಕಳೆದ ಜುಲೈ 8ರಂದು ಉಸ್ತುವಾರಿ ಮಂತ್ರಿ ಸಿ.ಸಿ. ಪಾಟೀಲ್‌ಗೆ ಸ್ಪಷ್ಟ ಮಾತಿನಲ್ಲಿ ಹೇಳಿದಾಗಲೇ ಇಲ್ಲಿ ಪೋಸ್ಕೋ ಕಂಪನಿಗೆ ಭೂಮಿ ವಶಪಡಿಸಿಕೊಳ್ಳುವುದು ಕಷ್ಟ ಎಂದು ಸರ್ಕಾರಕ್ಕೆ ಅರ್ಥವಾಗಿತ್ತು ಅನಿಸುತ್ತದೆ. ಅಂದು ಮಂತ್ರಿ ಪಾಟೀಲರು ಸಾರ್ವಜನಿಕರ ಅಭಿಪ್ರಾಯ ಸಂಗ್ರಹಣೆಯ ಹೆಸರಲ್ಲಿ ಪೋಸ್ಕೋಗೆ ಭೂಮಿ ಕೊಡಲು ಜನರನ್ನು ಮನಒಲಿಸಲು ಅಲ್ಲ ಒತ್ತಾಯಿಸಲು ಬಂದಿದ್ದರು ಮೂರು ಪೊಲೀಸ್ ವ್ಯಾನುಗಳೊಂದಿಗೆ. ಹಳ್ಳಿಗುಡಿಯ ಬಸವಣ್ಣನ ಗುಡಿಯ ಜಗುಲಿಯ ಮೇಲೆ ನಡೆದ ಈ ಒಡ್ಡೋಲಗದಲ್ಲಿ ಮೂವರು ಬಿಜೆಪಿ ಕಾರ್ಯಕರ್ತರನ್ನು ಬಿಟ್ಟರೆ ಇಡೀ ಹಳ್ಳಿ ಒಂದಿಂಚೂ ಭೂಮಿ ಬಿಟ್ಟುಕೊಡುವುದಿಲ್ಲವೆಂದು ಸ್ಪಷ್ಟ ಮಾತಿನಲ್ಲಿ ಹೇಳಿತು. ಅದರಲ್ಲೂ ಸಭೆಯಲ್ಲಿ ಮಾತಾಡಿದ ಪ್ರತಿ ರೈತ ಹೆಣ್ಣುಮಗಳು ಸುತ್ತ ಹತ್ತೂರಿನ ಜನ ಸರ್ಕಾರದ ವಿರುದ್ಧ ದಂಗೆ ಏಳಲು ಕರೆನೀಡಿದರಲ್ಲದೇ ಭೂಮಿ ಕೊಡಲು ಸಿದ್ಧವೆಂದು ಹೇಳಿದವರ ಬೆವರ ನೀರಿಳಿಸಿದರು. ಹಳ್ಳಿಯ ಹಿರಿಜನರಂತೂ ನಯವಾಗಿ ಆದರೆ ದೃಢವಾಗಿ ಸರ್ಕಾರ ಹಳ್ಳಿಗೆ ಏನು ಮಾಡದಿದ್ದರೂ ಪರವಾಗಿಲ್ಲ, ನಮ್ಮನ್ನು ನಮ್ಮ ಪಾಡಿಗೆ ಬಿಟ್ಟುಬಿಟ್ಟರೆ ಸಾಕೆಂದು ಸ್ಪಷ್ಟ ಮಾತುಗಳಲ್ಲಿ ಎಚ್ಚರಿಕೆ ನೀಡಿದರು. ಯುವ ಜನರು ಈ ಸಭೆಯ ಅಗತ್ಯವೇ ಇಲ್ಲವೆಂದೂ ಸರ್ಕಾರ ದೂಸರಾ ಮಾತಾಡದೆ ಯೋಜನೆಯನ್ನು ಕೈಬಿಡಬೇಕೆಂದೂ ಇಲ್ಲದಿದ್ದರೆ ಮುಂಡರಗಿ ಭೀಮರಾಯನ ಮಕ್ಕಳಾದ ನಾವು ಯಾವುದೇ ಉಗ್ರ ಹೋರಾಟಕ್ಕೂ ಸಿದ್ಧರೆಂದೂ ಸಂಗ್ರಾಮದ ಧ್ವನಿ ಮೊಳಗಿಸಿದರು. ಹೀಗಾಗಿ ಜನರನ್ನು ಒಪ್ಪಿಸಬಹುದೆಂಬ ನಿರೀಕ್ಷೆಯಿಂದ ಬಂದಿದ್ದ ಉಸ್ತುವಾರಿ ಮಂತ್ರಿಗಳು ಬಂದದಾರಿಗೆ ಸುಂಕವಿಲ್ಲವೆಂದು ಹಿಂತಿರುಗಬೇಕಾಯಿತು. ಆದರೆ ವಾಪಸ್ ತೆರಳುವ ಮುನ್ನ ತಾನು ರೈತಪರ ಸರ್ಕಾರದ ಪ್ರತಿನಿಧಿಯಾದ್ದರಿಂದ ಜನರನ್ನು ಸಂಪರ್ಕಿಸಲು ಬಂದಿದ್ದೇನೆಂದೂ, ಜನರು ಇಷ್ಟು ಹಠ ಹಿಡಿದರೆ ತಾವು ವಿಧಾನಸೌಧದಲ್ಲೇ ಎಲ್ಲಾ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ ಎಂದೂ ಹೇಳಿದಾಗ ಹಳ್ಳಿಗುಡಿಯ ಜನತೆ ತೀವ್ರವಾಗಿ ಪ್ರತಿಭಟಿಸಿದರು. ಇದೆಲ್ಲದರಿಂದ ಕೂಡಲೇ ತನ್ನ ಒಡ್ಡೋಲಗವನ್ನು ಬರ್ಖಾಸ್ತ್ ಮಾಡಿದ ಮಂತ್ರಿಗಳು ಹಳ್ಳಿಯಿಂದ ಕಂಬಿಕೀಳಬೇಕಾಯಿತು.





ಅವರು ಹಳ್ಳಿಯನ್ನು ಬಿಡುವ ವೇಳೆಗೆ ಮೇಧಾ ಪಾಟ್ಕರ್ ಮತ್ತು ಇತರ ಪ್ರಗತಿಪರ ಸಂಘಟನೆಗಳ ನಾಯಕರು ಹಳ್ಳಿಯನ್ನು ಪ್ರವೇಶಿಸುತ್ತಿದ್ದದ್ದು ಅರ್ಥಪೂರ್ಣ ರೂಪಕವಾಗಿಬಿಟ್ಟಿತು. ನಂತರ ಅದೇ ಜಾಗದಲ್ಲಿ ಮೇಧಾ ಪಾಟ್ಕರ್ ಅವರು ಹಳ್ಳಿಯ ಜನತೆಯನ್ನು ಉದ್ದೇಶಿಸಿ ಪೋಸ್ಕೋ ಕಂಪನಿಯ ನರಭಕ್ಷಕ ಸ್ವರೂಪವನ್ನೂ, ಭೂಮಿ ಕೊಟ್ಟು ಬೀದಿಪಾಲಾದ ಇತರ ರೈತರ ಕಥೆಗಳನ್ನೂ, ದೇಶಾದ್ಯಂತ ರೈತಾಪಿ ಭೂಮಿಗಾಗಿ ನಡೆಸುತ್ತಿರುವ ಹೋರಾಟವನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿ ಹೇಳಿದರು. ಇಡೀ ಹಳ್ಳಿಯ ಜನ ಮೇಧಾ ಅವರ ಮಾತನ್ನ ಭಾಷೆಯ ಹಂಗಿಲ್ಲದೆ ಮೈಯೆಲ್ಲಾ ಕಿವಿಯಾಗಿ ಕೇಳಿಸಿಕೊಂಡರಲ್ಲದೆ ಪ್ರಾಣ ಕೊಟ್ಟರೂ ಭೂಮಿ ಕೊಡೆವೆಂಬ ತಮ್ಮ ನಿರ್ಧಾರವನ್ನು ಮತ್ತಷ್ಟು ದೃಢವಾಗಿಸಿಕೊಂಡದ್ದು ಅವರ ಪ್ರತಿಕ್ರಿಯೆಯಲ್ಲೇ ಕಾಣುತ್ತಿತ್ತು.

ಇದಕ್ಕೆ ಕೆಲವು ದಿನಗಳ ಮೊದಲಿನಿಂದಲೂ ಹಳ್ಳಿಗುಡಿ ರೈತರ ಈ ಹೋರಾಟಕ್ಕೆ ಇಡೀ ರಾಜ್ಯಾದ್ಯಂತ ಬೆಂಬಲವು ನಿಧಾನವಾಗಿ ರೂಪುಗೊಳ್ಳಲು ಪ್ರಾರಂಭವಾಯಿತು. ರಾಜ್ಯದ ವಿವಿಧ ಕಡೆ ಜನಪರ ಸಂಘಟನೆಗಳು ಈ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿ ವಿವಿಧ ಬಗೆಯ ಹೋರಾಟಗಳನ್ನು ರೂಪಿಸಲು ಪ್ರಾರಂಭಿಸಿದ್ದರು. ಗದಗದಲ್ಲಿ ತೋಂಟದಾರ್ಯ ಸ್ವಾಮಿಗಳ ನೇತೃತ್ವದಲ್ಲಿ ಜಿಲ್ಲೆಯ ಪ್ರಗತಿಪರ ವ್ಯಕ್ತಿಗಳು, ಸಿಪಿಐ, ಕರ್ನಾಟಕ ಜನಶಕ್ತಿ ಹಾಗೂ ರಾಜ್ಯದ ಇತರ ಜನಪರ ಸಂಘಟನೆಗಳು ಒಂದು ಹೋರಾಟ ಸಮಿತಿಯನ್ನೂ ರೂಪಿಸಿದವು. ಅದಕ್ಕೂ ಪೂರ್ವಭಾವಿಯಾಗಿ ತೋಂಟದಾರ್ಯ ಸ್ವಾಮಿಗಳು ಮತ್ತು ಅನ್ನದಾನೀಶ್ವರ ಸ್ವಾಮಿಗಳ ನೇತೃತ್ವದಲ್ಲಿ ಪ್ರಗತಿಪರ ಸಂಘಟನೆಗಳು ಸಂತ್ರಸ್ತ ಹಳ್ಳಿಗಳಿಗೆ ಭೇಟಿಕೊಟ್ಟು ಯಾವ ಕಾರಣಕ್ಕೂ ಭೂಮಿಕೊಡಬಾರದೆಂದೂ ತಾವು ಜನರ ಹೋರಾಟಕ್ಕೆ ಸಂಪೂರ್ಣವಾಗಿ ಬೆಂಬಲಿಸುವುದಾಗಿ ಹೇಳಿದ್ದು ಹತಾಶ ಜನತೆಗೆ ಸ್ಫೂರ್ತಿ ತಂದಿದ್ದು ಮಾತ್ರವಲ್ಲದೆ ಅವರ ಹೋರಾಟಕ್ಕೆ ಕಸುವು ಕೊಟ್ಟಿತು. ಮೇಧಾ ಪಾಟ್ಕರ್ ಬಂದುಹೋದ ಮೇಲೆ ಮಾಧ್ಯಮಗಳು ಸಹ (ಕೆಲವೇ ಕೆಲವು ಪತ್ರಿಕೆಗಳನ್ನು ಹೊರತುಪಡಿಸಿ) ಈ ಹೋರಾಟಕ್ಕೆ ರಾಜ್ಯವ್ಯಾಪಿ ಪ್ರಚಾರವನ್ನು ಕೊಟ್ಟು ಜನತೆಯ ಆಕ್ರೋಶದ ಬಿಸಿ ವಿಧಾನಸೌಧವನ್ನು ತಟ್ಟುವಂತೆ ಮಾಡಿದವು. ಮತ್ತೊಂದು ಕಡೆ ಗದಗದಲ್ಲಿ ಪೋಸ್ಕೋ ವಿರೋಧಿ ಹೋರಾಟಕ್ಕೆ ರೂಪುಗೊಂಡಿದ್ದ ಸಮಿತಿ 15ನೇ ತಾರೀಖು ವಲಯದ ಎಲ್ಲಾ ಮಠಾಧೀಶರ ಸಭೆಯನ್ನೂ, ಜುಲೈ 18ರಿಂದ ಹಳ್ಳಿಗುಡಿಯಿಂದ ಗದಗಕ್ಕೆ ಪಾದಯಾತ್ರೆಯನ್ನೂ, ಮತ್ತು 25ಕ್ಕೆ ಗದಗದಲ್ಲಿ ಬೃಹತ್ ಭೂ-ಆಕ್ರಮಣ ವಿರೋಧಿ ಸಮಾವೇಶವನ್ನು ಘೋಷಿಸಿತ್ತು, ಇದಕ್ಕೆ ರಾಜ್ಯದೆಲ್ಲೆಡೆಯಿಂದ ಬೆಂಬಲದ ಮಹಾಪೂರವೇ ಹರಿದುಬರತೊಡಗಿತ್ತು. ಈ ಅಲೆಯನ್ನು ಅರ್ಥಮಾಡಿಕೊಂಡ ವಿರೋಧ ಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿಎಸ್‌ಗಳೂ ಸಹ ಹಳ್ಳಿಗುಡಿಗೆ ಭೇಟಿಕೊಟ್ಟು ರೈತಾಪಿಯ ಹೋರಾಟಕ್ಕೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದವು.

ಹೀಗೆ ಜನರ ಕಣ್ಣಿಗೆ ಮಣ್ಣೆರಚಿ ಪೋಸ್ಕೋಗೆ ಜಮೀನು ವಶಪಡಿಸಿಕೊಳ್ಳಬಹುದು ಎಂದು ಭಾವಿಸಿದ್ದ ಬಿಜೆಪಿ ಸರ್ಕಾರದ ಲೆಕ್ಕಾಚಾರ ಉಲ್ಟಾ ಹೊಡೆಯಿತು. ಅತ್ಯಂತ ಪ್ರಮುಖವಾಗಿ "ಪ್ರಾಣ ಹೋದರೂ ಭೂಮಿ ಕೊಡಲಾರೆವು" ಎಂಬ ಹಳ್ಳಿಗುಡಿ ರೈತರ ದೃಢ ತೀರ್ಮಾನ, ಅವರ ಹೋರಾಟದ ಛಲ, ರಾಜ್ಯಾದ್ಯಂತ ಅವರ ಹೋರಾಟಕ್ಕೆ ವ್ಯಕ್ತವಾದ ಬೆಂಬಲ, ಈ ಹೋರಾಟವನ್ನು ವ್ಯವಸ್ಥಿತವಾಗಿ ಮುಂದಕ್ಕೆ ತೆಗೆದುಕೊಂಡು ಹೋಗಲು ಮಠಾಧೀಶರನ್ನೂ ಒಳಗೊಂಡಂತೆ ಸಿದ್ಧವಾದ ಭೂಮಿಕೆ, ವಿರೋಧ ಪಕ್ಷಗಳು ಈ ಅವಕಾಶವನ್ನು ಬಳಸಿಕೊಳ್ಳಲು ಮುಂದಾದದ್ದು ಇವೆಲ್ಲವೂ ಬಿಜೆಪಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದವು.

ಇದಲ್ಲದೆ ಮೊನ್ನೆ ಪೇಜಾವರ ಸ್ವಾಮೀಜಿಗಳ ನಿರಶನ ಬೆದರಿಕೆಗೆ ಮುಂದಾಗಿ ನಾಗಾರ್ಜುನ ಯೋಜನೆಗೆ ಭೂಸ್ವಾಧೀನವನ್ನು ಕೈಬಿಡುವುದಾಗಿ ಸರ್ಕಾರವು ಮಾಡಿದ ಘೋಷಣೆ ಜಾತಿ ಲೆಕ್ಕಾಚಾರದಲ್ಲೇ ಅಧಿಕಾರ ನಡೆಸುತ್ತಿರುವ ಬಿಜೆಪಿಗೆ ಪೋಸ್ಕೊ ಯೋಜನೆಗೂ ಭೂಸ್ವಾಧೀನವನ್ನು ಕೈಬಿಡುವ ಅನಿವಾರ್ಯತೆಯನ್ನು ಹುಟ್ಟುಹಾಕಿಬಿಟ್ಟಿತು. ಬ್ರಾಹ್ಮಣ ಸ್ವಾಮೀಜಿಯ ಬೆದರಿಕೆಗೆ ಬಗ್ಗಿದ ಸರ್ಕಾರ ಲಿಂಗಾಯತ ಸ್ವಾಮೀಜಿಗಳ ಹೋರಾಟಕ್ಕೆ ಮಾನ್ಯತೆ ಕೊಡದೇ ಇರುವುದು ಹೇಗೆ?

—ಶಿವಸುಂದರ್—



ಚಾರ್ವಾಕ

ಈ ಎಲ್ಲಾ ಸಂಗತಿಗಳು ಒಟ್ಟಾಗಿ, ಎಲ್ಲಕ್ಕಿಂತ ಮುಖ್ಯವಾಗಿ ಜನತೆಯ ಹೋರಾಟದ ಕಾವು ಏರತೊಡಗಿದ ಸೂಚನೆ ಕಂಡ ಬಿಜೆಪಿ ಸರ್ಕಾರ ಈಗ ಅನಿವಾರ್ಯವಾಗಿ ಪೋಸ್ಕೋಗಾಗಿ ಮಾಡುತ್ತಿದ್ದ ಭೂಸ್ವಾಧೀನವನ್ನು ಕೈಬಿಟ್ಟಿದೆ. ಇದು ಖಂಡಿತವಾಗಿ ಹಳ್ಳಿಗುಡಿಯ ರೈತಾಪಿಯ ಪ್ರತಿರೋಧಕ್ಕೆ ಮತ್ತು ರಾಜ್ಯದ ಎಲ್ಲಾ ಪ್ರಗತಿಪರ ಶಕ್ತಿಗಳಿಗೆ ಸಿಕ್ಕ ಜಯವೇ ಆಗಿದೆ. ಜನರು ದೃಢವಾದ ತೀರ್ಮಾನ ತೆಗೆದುಕೊಂಡರೆ ಮತ್ತು ಪ್ರಗತಿಪರಶಕ್ತಿಗಳು ಒಂದಾದರೆ ಏನನ್ನು ಬೇಕಾದರೂ ಸಾಧಿಸಬಹುದೆಂಬುದಕ್ಕೆ ಇದು ಒಂದು ಉದಾಹರಣೆ. ಆದ್ದರಿಂದ ಇದು ನಿಜಕ್ಕೂ ಜನಪರರೆಲ್ಲರಿಗೂ ಸಂಭ್ರಮದ ಕ್ಷಣವೇ.

ಆದರೆ ಈ ಸಂಭ್ರಮವನ್ನು ಅನುಭವಿಸುತ್ತಿರುವ ಕ್ಷಣದಲ್ಲಿ ಈ ತೀರ್ಮಾನದ ಹಿಂದಿರುವ ಬಿಜೆಪಿಯ ರಾಜತಂತ್ರದ ಬಗ್ಗೆ ಖಂಡಿತಾ ಎಚ್ಚರ ತಪ್ಪಬಾರದು. ಸರ್ಕಾರ ತನ್ನ ಹೇಳಿಕೆಯಲ್ಲಿ ಸ್ಪಷ್ಟಪಡಿಸಿರುವುದು ಗದಗ ಜಿಲ್ಲೆಯಲ್ಲಿ ಪೋಸ್ಕೋಗೆ ಜಮೀನು ವಶಪಡಿಸಿಕೊಳ್ಳುವುದಿಲ್ಲವೆಂದೇ ವಿನಃ ಕರ್ನಾಟಕದಲ್ಲಿ ಜಾಗ ಕೊಡುವುದಿಲ್ಲ ಎಂದಲ್ಲ. ವಾಸ್ತವವಾಗಿ ಕೈಗಾರಿಕಾ ಮಂತ್ರಿ ಮುರುಗೇಶ್ ನಿರಾಣಿ "ಜನ ಗದಗದಲ್ಲಿ ಬೇಡ ಎಂದರೆ ಬಾಗಲಕೋಟೆ ಅಥವಾ ಬಿಜಾಪುರಕ್ಕೆ ಯೋಜನೆಯನ್ನು ಸ್ಥಳಾಂತರಿಸಲು ಸಿದ್ಧ" ಎಂದು ಮೊದಲಿನಿಂದಲೂ ಹೇಳುತ್ತಲೇ ಬಂದಿದ್ದರು. ಯಡಿಯೂ[ರಪ್ಪ]ನವರು ಸಹ ಗದಗದಲ್ಲಿ ಭೂಸ್ವಾಧೀನವನ್ನು ಕೈಬಿಡು[ವ] ಘೋಷಣೆಯನ್ನು ಮಾಡುವಾಗಲೇ ರೈತರಿಂದ ಬಲವಂತವಾ[ಗಿ] ಭೂಮಿಯನ್ನು ಕಿತ್ತುಕೊಳ್ಳುವುದಿಲ್ಲವೆಂದು, ಎಲ್ಲಿ ರೈತ[ರು] ಸ್ವಸಂತೋಷದಿಂದ ಒಣಭೂಮಿಯನ್ನು ಕೊಡಲು ಮುಂ[ದೆ] ಬರುತ್ತಾರೋ ಅಲ್ಲಿ ಯೋಜನೆಯನ್ನು ಸ್ಥಾಪಿಸುವುದಾಗಿಯ[ೂ] ಹೇಳಿದ್ದಾರೆ. ಹಳ್ಳಿಗುಡಿಯಲ್ಲಿ ಜಮೀನು ವಶಪಡಿಸಿಕೊ[ಳ್ಳು]ವಾಗಲೂ ಇದನ್ನೇ ಹೇಳಿದ್ದರು. ಹಳ್ಳಿಗುಡಿಯಲ್ಲಿ ಸ್ವಸಂತೋ[ಷ]ದಿಂದ ಜಮೀನು ಕೊಡದ ರೈತಾಪಿಗೆ ಹಲವು ರೀತಿ[ಯ] ವ್ಯವಸ್ಥಿತ ಕಿರುಕುಳವನ್ನು ನೀಡತೊಡಗಿದ್ದರು. ಕೆಐಎಡಿಬಿಯಿ[ಂದ] ಭೂಸ್ವಾಧೀನ ನೋಟಿಸು ಕೊಡಿಸಿದ್ದು ಮಾತ್ರವಲ್ಲದೆ ರೈತ[ರು] ಭೂಮಿ ಕೊಡುವುದಿಲ್ಲ ಎಂದು ಲಿಖಿತ ಮನವಿ ಸಲ್ಲಿಸಿದ್ದ[ರೂ] ಭೂಸ್ವಾಧೀನದ ಅಂತಿಮ ನೋಟಿಸಿನ ಹಂತಕ್ಕೆ ಪ್ರಕ್ರಿಯೆಗ[ಳನ್ನು] ನಡೆಸಿದ್ದವು.

ಎಲ್ಲಕ್ಕಿಂತ ಹೆಚ್ಚಾಗಿ ರೈತರು ದುಡಿ[ಮೆ] ಮಾಡುತ್ತಿರುವ ಜಮೀನನ್ನು ಸರ್ಕಾರ ಒಣಭೂ[ಮಿ] ಎಂದು ಕರೆದಿದ್ದರ ಹಿಂದಿನ ಉದ್ದೇಶವೇ ಅ[ದನ್ನು] ನಿರುಪಯುಕ್ತ ಎಂದು ಘೋಷಿಸಲು. ವಾಸ್ತವ[ದಲ್ಲಿ] ಹಳ್ಳಿಗುಡಿಯಲ್ಲಿ ಸರ್ಕಾರ ಯಾವ ಭೂಮಿಯ[ನ್ನು] ನಿರುಪಯುಕ್ತ ಎಂದು ಕರೆದಿದೆಯೋ ಅಲ್ಲಿ ರೈತ[ರು] ಒಂದು ಮಳೆ ಬಂದರೆ ಎರಡು ಬೆಳೆ ತೆಗೆ[ಯುತ್ತಾರೆ]. ಕ್ವಿಂಟಾಲ್‌ಗಟ್ಟಲೆ ಉಳ್ಳಾಗಡ್ಡಿ, ಶೇಂಗಾ, ಹೆಸ[ರು], ಬಿಳಿ ಜೋಳ, ಸೂರ್ಯಪಾನ, ಕಡಲೆ, ಹತ್ತಿಯ[ನ್ನು] ಬೆಳೆಯುತ್ತಾರೆ. ಕಳೆದ ವರ್ಷ ಹಳ್ಳಿಗುಡಿ[ಯ] ರೈತರು ಇದೇ ಒಣಭೂಮಿಯಲ್ಲಿ 4 ಕೋ[ಟಿ] ರೂ.ಗಳಿಗೂ ಹೆಚ್ಚಿನ ಮೌಲ್ಯದ ಈರುಳ್ಳಿಯ[ನ್ನು] ಬೆಳೆದಿದ್ದಾರೆ. ವಾಸ್ತವವಾಗಿ ಒಣಭೂಮಿ ಇ[ದ್ದರೆ] ಸರ್ಕಾರ ಅದಕ್ಕೆ ನೀರಾವರಿ ಹೇಗೆ ಒದ[ಗಿಸ]ಬಹುದು ಎಂದು ಯೋಚಿಸಬೇಕೆ ವಿನಃ ಜನರನ್ನು ಅಲ್ಲಿ[ಂದ] ಒಕ್ಕಲೆಬ್ಬಿಸಲು ನೆಪವಾಗಿ ಬಳಸಬಾರದು. ಆದರೆ ಬಿಜೆ[ಪಿ] ಸರ್ಕಾರ (ಹಾಗೆ ನೋಡಿದರೆ ಎಲ್ಲಾ ಸರ್ಕಾರಗಳ[ೂ]) ಅನುಸರಿಸುತ್ತಿರುವುದೇ ಈ ರೈತ ವಿರೋಧಿ ನೀತಿಯನ[್ನು].

ಹೀಗಾಗಿ ಪೋಸ್ಕೋದ ಕತ್ತಿ ಗದಗ ರೈತರ ನೆತ್ತಿ[ಯ] ಮೇಲಿಂದ ತೆಗೆಯಲಾಗಿದ್ದರೂ ಉತ್ತರ ಕರ್ನಾಟಕದ ಜನತೆ[ಯ] ನೆತ್ತಿಯ ಮೇಲೆ ತೂಗುತ್ತಲೇ ಇದೆ. ಇದಲ್ಲದೆ ಕೇ[ಂದ್ರ] ಬಿಜೆಪಿ ಒರಿಸ್ಸಾದಲ್ಲಿ ಬಿಜೆಡಿಯೊಂದಿಗೆ ಅಧಿಕಾರ ಹಂ[ಚಿ]ಕೊಂಡ ಸಂದರ್ಭದಲ್ಲೇ ಪೋಸ್ಕೋ ಒರಿಸ್ಸಾಗೆ ಬಂದ[ದ್ದು]. ಆದರೆ ಈಗ ಬಿಜೆಡಿಯೊಂದಿಗಿಲ್ಲದ ಬಿಜೆಪಿ ಜನತೆ[ಯ] ಹೋರಾಟವನ್ನು ಗಮನಿಸಿ ಕೇಂದ್ರ ಬಿಜೆಪಿ ಒರಿಸ್ಸಾದ[ಲ್ಲಿ] ಪೋಸ್ಕೋ ವಿರೋಧಿ ಹೋರಾಟಕ್ಕೆ ಬೆಂಬಲ ಸೂಚಿಸುತ್ತಿ[ದೆ]. ಹೀಗಾಗಿ ಕರ್ನಾಟಕದಲ್ಲಿ ಅದಕ್ಕೆ ಇಕ್ಕಟ್ಟು.

ಅಲ್ಲದೆ ಈಗ ಅನುಮತಿ ನೀಡಿದರೂ ಸಹ ಕೂಡ[ಲೇ] ಜಮೀನು ಕೈವಶವಾಗಿ ರೈತಾಪಿಯನ್ನು ಒಕ್ಕಲೆಬ್ಬಿಸಲಾಗು[ವು]ದಿಲ್ಲ. ಅದಾಗಬೇಕೆಂದರೆ ಪೋಸ್ಕೋ ಕಂ[ಪನಿ] ಕೇಂದ್ರದಿಂದ ಪರಿಸರ ಅನುಮತಿ ಎಲ್ಲವ[ನ್ನೂ] ಪಡೆಯಬೇಕು. ಅದಕ್ಕೆ ಏನಿಲ್ಲವೆಂದರ[ೂ] ಎರಡು ವರ್ಷಗಳು ತಗಲುತ್ತದೆ. ಒರಿಸ್ಸಾದ[ಲ್ಲಿ] ಐದು ವರ್ಷಗಳಾಯಿತು. ಅಲ್ಲಿಯತನಕ ಜ[ನರ] ಹೋರಾಟವೂ ಮುಂದುವರೆದರೆ ಮುಂ[ದಿನ] ಎರಡು ವರ್ಷಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾ[ರಗಳ] ಚುನಾವಣೆ ಎದುರಾಗುತ್ತದೆ. ಬಿಜೆಪಿಯ ಪ್ರಧಾನ ಓ[ಟು] ಕೋಟೆಯೇ ಉತ್ತರ ಕರ್ನಾಟಕದ ಲಿಂಗಾಯತ ಸಮುದಾ[ಯ]. ಪೋಸ್ಕೋ ಯೋಜನೆಯಲ್ಲಿ ಸಂತ್ರಸ್ತರಾಗುವುದು ಮ[ತ್ತು] ಹೋರಾಟಕ್ಕೆ ಧುಮುಕಿರುವುದು ಪ್ರಧಾನವಾಗಿ ಇದೇ ಸಮು[]ದಾಯವೇ. ಅಲ್ಲದೆ ರೈತ ವಿರೋಧಿ ಎಂಬ ಹಣೆಪಟ್ಟಿಯ[ನ್ನು] ಕಟ್ಟಿಕೊಂಡು ಚುನಾವಣೆ ಎದುರಿಸುವುದು ಕಷ್ಟ.

ಈ ತತ್‌ಕ್ಷಣದ ಅಧಿಕಾರಸ್ಥ ಅವಕಾಶವಾದಿ ರಾ[ಜಕೀಯ] ಕಾರಣವೂ ಸಹ ಬಿಜೆಪಿ ಸರ್ಕಾರ ಪೋಸ್ಕೋ ಯೋಜ[ನೆಯ] ಭೂಸ್ವಾಧೀನವನ್ನು ಹಿಂತೆಗೆದುಕೊಳ್ಳುವಂತೆ ಮಾಡಿದೆ. ಇ[ದು] ಸರ್ಕಾರದ ನೀತಿಯಲ್ಲಿ ಆಗಿರುವ ಬದಲಾವಣೆ ಅ[ಲ್ಲ]. ಪೋಸ್ಕೋ ಭೀತಿ ಪೂರ್ತಿಯಾಗಿ ಕರ್ನಾಟಕವನ್ನು ತೊರೆ[ದಿ]ಲ್ಲ. ಆದ್ದರಿಂದ ತತ್‌ಕ್ಷಣದ ಜಯವನ್ನು ಸಂಭ್ರಮಿಸುತ್ತ[ಲೇ] ಬಿಜೆಪಿಯ ರಾಜತಂತ್ರವನು ಅರ್ಥಮಾಡಿಕೊಂಡು ಪೋಸ್[ಕೋ]ವನ್ನು ಕರ್ನಾಟಕದಿಂದ ಮತ್ತು ದೇಶದಿಂದಲೇ ಒಡ್ಡೋಡಿಸ[ುವ] ಹೋರಾಟಕ್ಕೆ ಜನ ಮುಂದಾಗಬೇಕಿದೆ. ಅದೇ ಪ್ರಕ್ರಿಯೆಯ[ಲ್ಲಿ] ಸರ್ಕಾರದ ರೈತ ವಿರೋಧಿ ಹಾಗೂ ಕಾರ್ಪೋರೇಟ್ ಕೈಗಾರಿ[ಕಾ]ಪರ ನೀತಿಗಳನ್ನು ಸಂಪೂರ್ಣವಾಗಿ ಬದಲಾಯಿಸಲೂ [ಸಹ] ಹೋರಾಟಗಳನ್ನು ಕಟ್ಟಲು ಕರ್ನಾಟಕದ ಜನತೆ ಸಿದ್ಧ[ರಾಗ]ಬೇಕಿದೆ.

ಉಸಿರು ನಿಲ್ಲಿಸಿದ ಪತ್ರಿಕೆ ಸತ್ಯ ಉಸುರುತ್ತಿದೆ




ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ರೂಪರ್ಟ್ ಮರ್ಡಾಕ್ ಎಂಬ ಹುಂಬನಿಗೆ ಕೊನೆಗೂ ಮುಖಭಂಗವಾಗಿದೆ. ಜಗತ್ತಿನ ಅತಿ ಬಲಿಷ್ಠ ವ್ಯಕ್ತಿಗಳಲ್ಲಿ ತಾನೊಬ್ಬನಾಗಿರುವುದರಿಂದ ತಾನು ಯಾವ ಸರ್ಕಾರವನ್ನಾದರೂ ಚಿಟಿಕೆ ಹೊಡೆದಂತೆ ಉರುಳಿಸಬಹುದು, ಯಾವುದೇ ದೇಶದ ನೀತಿಗಳನ್ನು ತನಗೆ ಅನುಕೂಲವಾಗುವಂತೆ ತಾನು ಬದಲಾಯಿಸಬಹುದು, ತನ್ನ ಒಡೆತನದ ಮಾಧ್ಯಮಗಳ ಮೂಲಕ ಒಂದು ದೇಶದ ಅಭಿಪ್ರಾಯವನ್ನು ರೂಪಿಸುವುದು ಮಾತ್ರವಲ್ಲ, ಇಡೀ ಜಗತ್ತಿನ ಒಂದು ತಲೆಮಾರಿನ ಮೇಲೆ ಪ್ರಭಾವ ಬೀರಬಹುದು ಎಂದು ಬೀಗುತ್ತಿದ್ದ ಮರ್ಡಾಕ್‌ನ ಮಾನ ಸಾರ್ವಜನಿಕವಾಗಿ ಹರಾಜಾಗಿದೆ.

ಪತ್ರಿಕೋದ್ಯಮವನ್ನು ತನ್ನ ಸಾಮಾಜಿಕ ಸ್ಥಾನಮಾನದ ವೃದ್ಧಿಗೆ ಉಪಯೋಗಿಸಿಕೊಂಡ, ಮಾಧ್ಯಮಗಳನ್ನೇ ತನ್ನ ಅಧಿಕಾರದ ಅಸ್ತ್ರವಾಗಿ ಬಳಸಿಕೊಂಡ ಮರ್ಡಾಕ್‌ನ ಸ್ವಪ್ರತಿಷ್ಠೆಗೆ ಕಳೆದ ವಾರ ಬ್ರಿಟನ್ನಿನ ಒಂದು ಐತಿಹಾಸಿಕ ಪತ್ರಿಕೆ ಬಲಿಯಾಗಿರುವುದು ಒಂದು ದುರಂತವೇ ಸರಿ. ಆದರೆ ಇವತ್ತಿನ ಕಾಲಘಟ್ಟದಲ್ಲಿ ಪತ್ರಿಕೋದ್ಯಮವೂ ಹೇಗೆ ಒಂದು



SUNDAY. ONE PENNY. JAN. 15, 1886

NEWS OF THE WORLD

EXTRAORDINARY RAID in STORNOWAY: ENCOUNTER WITH MILITARY

THE SUSPECTED MURDER OF MR. M'NEILL

TRIALS AT THE OLD BAILEY

SPEECH OF LORD SALISBURY ON THE SITUATION

EXECUTION OF DR. CROSS. CONFLICTS WITH BURGLARS

The Continued Fog: Serious Accidents and Loss of Life

HE IS MINE ENEMY: A New Tale. REPORTED PLOT AGAINST THE CZAR

ಪೈಪೋಟಿಯ ಜಗತ್ತಾಗಿದೆ. ಆದ್ದರಿಂದಲೇ ಇವತ್ತು ಮಾಧ್ಯಮಗಳು ಕೂಡ ಹೇಗೆ ಭ್ರಷ್ಟಗೊಂಡಿವೆ ಎಂಬುದನ್ನು ಮೊನ್ನೆ ಕಣ್ಣುಮುಚ್ಚಿದ 'ನ್ಯೂಸ್ ಆಫ್ ದ ವರ್ಲ್ಡ್' ಎಂಬ ಪತ್ರಿಕೆಯ ರೋಚಕ ಇತಿಹಾಸ ಮತ್ತು ಸಾವು ತೋರುತ್ತದೆ.

'ನ್ಯೂಸ್ ಆಫ್ ದ ವರ್ಲ್ಡ್' (ಅದನ್ನು ಸಂಕ್ಷಿಪ್ತವಾಗಿ 'ನಾ' ಎಂದು ಕರೆಯುವುದು ವಾಡಿಕೆ) ಎಂಬ ಪತ್ರಿಕೆ 1843ರಲ್ಲಿ ಬ್ರಿಟನ್ನಿನಲ್ಲಿ ಜನ್ಮವೆತ್ತಿದಾಗ ಅದರ ಮುಖ್ಯ ಗುರಿ ಸಾಕ್ಷರತೆಯನ್ನು ಪಡೆದಿದ್ದ ದುಡಿಯುವ ಜನರಾಗಿದ್ದರು. ಆದ್ದರಿಂದ ಆ ಪತ್ರಿಕೆಯಲ್ಲಿ ಆಗ ಹೆಚ್ಚಾಗಿ ಕ್ರೈಂ ಮತ್ತು ಸೆಕ್ಸ್ ಸುದ್ದಿಗಳೇ ಪ್ರಕಟಗೊಳ್ಳುತ್ತಿದ್ದವು. ಆದರೂ ಆ ಪತ್ರಿಕೆಗೆ ತನ್ನ ಸಾಮಾಜಿಕ ಜವಾಬ್ದಾರಿಯ ಅರಿವಿತ್ತು. ಆಗ ಈ ಪತ್ರಿಕೆ ಕಾರ್ಮಿಕರ ಹೋರಾಟಗಳ ಬಗ್ಗೆ, ಕೆಳವರ್ಗ ಸಮುದಾಯದ ಸಮಸ್ಯೆಗಳ ಬಗ್ಗೆ ವರದಿಗಳನ್ನೂ ಪ್ರಕಟಿಸುತ್ತಿತ್ತು, ಮಾತ್ರವಲ್ಲ, ಹಲವಾರು ಸಾಮಾಜಿಕ ಹೋರಾಟಗಳ ಮುಖಂಡತ್ವವನ್ನೂ ವಹಿಸಿತ್ತು.

ಬರೀ ಸಾಮಾಜಿಕ ಕಾಳಜಿಯನ್ನು ಬಿಂಬಿಸಿದರೆ ಜನರಿಗೆ ಬೋರ್ ಆಗುತ್ತದೆ, ಹಾಗೆಯೇ ಬರೀ ಕ್ರೈಂ ಮತ್ತು ಸೆಕ್ಸ್ ವರದಿಗಳನ್ನು ಮಾಡಿದರೆ ಪತ್ರಿಕೆಗೆ ಕೆಟ್ಟ ಹೆಸರು ಬರುತ್ತದೆ ಎಂದು ಅರಿತಿದ್ದ ಈ ಪತ್ರಿಕೆಯ ಸಂಪಾದಕರು ಅವೆರಡನ್ನೂ ಸಮಾನವಾಗಿ ಪ್ರಕಟಿಸಲು ಪ್ರಯತ್ನಿಸುತ್ತಿದ್ದರು. ಆದರೆ ಅದೆಷ್ಟು ಕಷ್ಟದ ಕೆಲಸ ಎಂಬುದನ್ನು ಈ ಪತ್ರಿಕೆಯ ಸಂಪಾದಕನೊಬ್ಬ ಒಮ್ಮೆ "ಛಾಯಾಗ್ರಾಹಕರೇ, ಈ ರೈಲ್ವೆ ಸಿಬ್ಬಂದಿಯ ಹೋರಾಟದೊಂದಿಗೆ ಪ್ರಕಟಿಸಲು ಯಾವುದಾದರೂ ನಗ್ನ ಯುವತಿಯ ಚಿತ್ರವಿದೆಯೇ?" ಎಂದು ಕೇಳಿದ ಪ್ರಶ್ನೆಯೇ ತೋರುತ್ತದೆ.

ಇಂಗ್ಲೆಂಡಿನ ಪತ್ರಿಕೋದ್ಯಮಕ್ಕೆ 'ನಾ' ಒಂದಿಷ್ಟು ಹೊಸತನ, ರಭಸ, ಚುರುಕು ಪರಿಚಯಿಸಿದ್ದರಿಂದ ಕೆಲವರ್ಷಗಳಲ್ಲೇ ಇದರ ಪ್ರಸಾರ ಸಂಖ್ಯೆ ಗಗನಕ್ಕೇರಲಾರಂಭಿಸಿತು. 1950ರ ದಶಕದಲ್ಲಿ ಈ ಪತ್ರಿಕೆ ಅದೆಷ್ಟು ಜನಪ್ರಿಯವಾಗಿತ್ತೆಂದರೆ ಎಲ್ಲ ಇಂಗ್ಲಿಷರು ಪ್ರತಿ ಭಾನುವಾರ ಇದನ್ನು ತಪ್ಪದೆ ಓದುತ್ತಿದ್ದರಿಂದ ಇದರ ಮುದ್ರಣ ಸಂಖ್ಯೆ 8.5 ಮಿಲಿಯನ್ ಮುಟ್ಟಿ ಜಗತ್ತಿನ ಅತಿದೊಡ್ಡ ಪತ್ರಿಕೆ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು.

ಬ್ರಿಟನ್ನಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಗುಹೋಗುಗಳನ್ನಲ್ಲದೆ, ರಾಜಕೀಯ, ಯುದ್ಧ, ವಿವಾದ ಇತ್ಯಾದಿಗಳನ್ನು ಕುರಿತು ವರದಿ ಮಾಡಿದ 'ನಾ' 1959ರಲ್ಲಿ ಪ್ರಥಮಬಾರಿಗೆ ಒಂದು ಕೆಟ್ಟ ಸಂಪ್ರದಾಯಕ್ಕೆ ನಾಂದಿ ಹಾಡಿತು. ಹಲವಾರು ಬಾರಿ ವಿವಾಹವಾಗಿದ್ದ ಅರೆ ಸೆಕ್ಸ್ ಸಿನಿಮಾಗಳಲ್ಲಿ ನಟಿಸುತ್ತಿದ್ದ ಡಯಾನ ಡೋರ್ಸ್ ಎಂಬಾಕೆಗೆ ಆಗಿನ ಕಾಲದಲ್ಲೇ ಬರೋಬ್ಬರಿ 35,000 ಪೌಂಡ್‌ಗಳನ್ನು ಕೊಟ್ಟು ತನ್ನ ಜೀವನಕತೆಯನ್ನು ಹೊರಗೆಡವಲು ಪ್ರೋತ್ಸಾಹಿಸಿತು. ಆ ಮೂಲಕ ದುಡ್ಡಿಗಾಗಿ ತಮ್ಮ ವೈಯಕ್ತಿಕ ಬದುಕನ್ನೇ ಮಾರಾಟಮಾಡುವ ಪ್ರವೃತ್ತಿಗೆ ಚಾಲನೆ ನೀಡಿತು. ಇಂತಹ ದುಷ್ಕೃತ್ಯಗಳ ನಡುವೆಯೂ ಹಲವಾರು ಭ್ರಷ್ಟಾಚಾರಗಳನ್ನು, ಕಪಟಿ ರಾಜಕಾರಣಿಗಳ ಹಗರಣಗಳನ್ನು ಬಯಲು ಮಾಡಿ ಶಹಭಾಸ್ ಎನಿಸಿಕೊಂಡಿತು. ಅದಕ್ಕೆಲ್ಲ ಕಲಶವಿಟ್ಟಂತೆ 1960ರ ದಶಕದಲ್ಲಿ ಪ್ರೊಪ್ಯೂಮೊ ಎಂಬ ಹಿರಿಯ ರಾಜಕಾರಣಿಯು ವೇಶ್ಯೆಯೊಬ್ಬಳೊಂದಿಗೆ ಅಕ್ರಮ ಸಂಬಂಧ ಹೊಂದಿದ್ದನ್ನು ಬಯಲು ಗೊಳಿಸುವ ಮೂಲಕ ಅಂದಿನ ಪ್ರಧಾನಿ ಹಾರೋಲ್ಡ್ ಮ್ಯಾಕ್‌ಮಿಲನ್ ತಮ್ಮ ಹುದ್ದೆಗೇ ರಾಜೀನಾಮೆ ಕೊಡುವಂತೆ ಮಾಡಿತು.

ಹೊಗಳಿಕೆ ಮತ್ತು ತೆಗಳಿಕೆ - ಎರಡನ್ನೂ ಪಡೆಯುತ್ತಿದ್ದ 'ನಾ' ಪತ್ರಿಕೆಯನ್ನು ಆಸ್ಟ್ರೇಲಿಯಾ ಮೂಲದ ರೂಪರ್ಟ್ ಮರ್ಡಾಕ್ 1969 ಖರೀದಿಸಲು ಮುಂದಾದ. ಅದೇ ಸಮಯದಲ್ಲಿ ರಾಬರ್ಟ್ ಮ್ಯಾಕ್ಸ್‌ವೆಲ್ ಎಂಬಾತನೂ ಇದನ್ನು ಖರೀದಿಸುವ ಇರಾದೆಯನ್ನು ತೋರಿದ. ಆದರೆ 'ನಾ' ಸಿಬ್ಬಂದಿಗೆ ತಮ್ಮ 'ಬ್ರಿಟಿಷ್' ತನವನ್ನು ಕಾಪಾಡಿಕೊಳ್ಳುವುದು ಆಗ ಮುಖ್ಯವಾಗಿದ್ದರಿಂದ ಅವರಿಗೆ ಜೆಕ್ ಮೂಲದ ಮ್ಯಾಕ್‌ವೆಲ್ ತಮ್ಮ ಪತ್ರಿಕೆಯ ಒಡೆತನ ಹೊಂದುವುದು ಇಷ್ಟವಿರಲಿಲ್ಲ. ಆಗ ಅವರಲ್ಲಿ ಹಲವರು ಮರ್ಡಾಕ್‌ನಿಂದ ತಮ್ಮ ಪತ್ರಿಕೆಯ ಷೇರುಗಳನ್ನು ತಾತ್ಕಾಲಿಕವಾಗಿ ಪಡೆದು ಯಾರು ತಮ್ಮ ಪತ್ರಿಕೆಯ ನೂತನ ಮಾಲೀಕರಾಗಬೇಕೆಂಬುದು ಸಭೆಯಲ್ಲಿ ಮರ್ಡಾಕ್ ಪರವಾಗಿ ಮತ ಚಲಾಯಿಸಿದರು. ಹೀಗೆ ಅಕ್ರಮವಾಗಿ 'ನಾ' ಪತ್ರಿಕೆಯನ್ನು ತನ್ನ ವಶಕ್ಕೆ ಪಡೆದುಕೊಂಡ ಮರ್ಡಾಕ್ ಮಾರನೆ ದಿನವೇ ಸಿಬ್ಬಂದಿಗೆ ಕೊಟ್ಟಿದ್ದ ಷೇರುಗಳನ್ನು ವಾಪಸ್ ಪಡೆದ.



'ನಾ' ಪತ್ರಿಕೆಯನ್ನು ತನ್ನ ಸಾಮ್ರಾಜ್ಯದ ಅಡಿಗಲ್ಲಾಗಿಸಿಕೊಂಡ ಮರ್ಡಾಕ್ ಆನಂತರ ಜಗತ್ತಿನಾದ್ಯಂತ ಹಲವಾರು ಪ್ರತಿಷ್ಠಿತ ಪತ್ರಿಕೆಗಳನ್ನು ಖರೀದಿಸಿದ, ಟಿವಿ ಚಾನೆಲ್‌ಗಳನ್ನು ಸ್ಥಾಪಿಸಿದ, ಕೇಬಲ್ ವ್ಯವಹಾರಕ್ಕೆ ಕೈಹಾಕಿದ, ಸಿನಿಮಾ ನಿರ್ಮಾಣಕ್ಕೂ ಇಳಿದ. ಅವೆಲ್ಲವನ್ನು 'ನ್ಯೂ ಕಾರ್ಪ್' ಎಂಬ ಸಂಸ್ಥೆಯಡಿ ತಂದ. ಇವತ್ತು 50 ದೇಶಗಳಲ್ಲಿ ಮರ್ಡಾಕ್‌ನ ಪತ್ರಿಕೆ-ಮಾಧ್ಯಮಗಳ ಬಿಲಿಯನ್ ಗಟ್ಟಲೆ ಸಾಮ್ರಾಜ್ಯ ಹರಡಿಕೊಂಡಿದೆ.

ಇಂತಹ ದೊಡ್ಡ ಮಾಧ್ಯಮ ಸಮೂಹವನ್ನು ಹೊಂದಿರುವುದರಿಂದ ಮರ್ಡಾಕ್ ಎಷ್ಟು ಬಲಿಷ್ಠನಾಗಿದ್ದಾನೆಂದರೆ ಆತನ ಬೆಂಬಲವಿಲ್ಲದೆ ಬ್ರಿಟನ್ನಿನ ಚುನಾವಣೆಗಳಲ್ಲಿ ಗೆಲ್ಲುವುದು ಅಸಾಧ್ಯ ಎಂಬ ನಂಬಿಕೆ ಅಲ್ಲಿನ ರಾಜಕೀಯಗಳಲ್ಲಿ ಬೇರು ಬಿಟ್ಟಿದೆ. ಅದಕ್ಕೆ ಮಾರ್ಗರೆಟ್ ಥ್ಯಾಚರ್‌ಳಿಂದ ಹಿಡಿದು ಹಾಲಿ ಪ್ರಧಾನಿ ಡೇವಿಡ್ ಕ್ಯಾಮರೂನ್ ತನಕ ಎಲ್ಲರೂ ಮರ್ಡಾಕ್‌ನೊಂದಿಗೆ ಸ್ನೇಹ ಬೆಳೆಸಿದ್ದಾರೆ, ಆತನ ಔತಣಕೂಟಗಳಲ್ಲಿ ಭಾಗವಹಿಸಿದ್ದಾರೆ, ಸರ್ಕಾರ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವ ಮುನ್ನ ಅವುಗಳ ಬಗ್ಗೆ ಆತನೊಂದಿಗೆ ಚರ್ಚಿಸಿದ್ದಾರೆ.

ಆದರೆ ಮರ್ಡಾಕ್‌ನ ಈ ಮಾಧ್ಯಮ ಸಮೂಹ ಯಾವ ಮೌಲ್ಯಗಳನ್ನು ಪ್ರಚಾರ ಮಾಡುತ್ತದೆ ಎಂಬುದಕ್ಕೆ, ಅಮೆರಿಕದಲ್ಲಿ ಆತ ಸ್ಥಾಪಿಸಿರುವ 'ಫಾಕ್ಸ್ ಚಾನೆಲ್' ಒಂದು ಉತ್ತಮ ಉದಾಹರಣೆ. ತೀವ್ರತೆರನಾದ ಬಲಪಂಥೀಯ ನಿಲುವನ್ನು ಹೊಂದಿರುವ ಫಾಕ್ಸ್ ಚಾನೆಲ್ ಪ್ರತಿಯೊಂದು ಸುದ್ದಿಯನ್ನು ಎಷ್ಟು ತಿರುಚುತ್ತದೆ ಎಂದರೆ ಜನರು "ಅದು ಯಾವತ್ತಾದರೂ ಸತ್ಯಸಂಗತಿಯನ್ನು ವರದಿ ಮಾಡಿದೆಯೇ" ಎಂದು ತಮಾಷೆ ಮಾಡುತ್ತಾರೆ.

ಆದರೀಗ ಫಾಕ್ಸ್ ಚಾನೆಲ್ ಅನ್ನೂ ಮೀರಿಸುವಂತೆ ಮರ್ಡಾಕ್ ಮಾಲೀಕತ್ವದಲ್ಲಿ ಐತಿಹಾಸಿಕ 'ನಾ' ಪತ್ರಿಕೆಯ ಸಿಬ್ಬಂದಿ ಅಪ್ಪಟ ಕ್ರಿಮಿನಲ್ ಕೃತ್ಯಗಳಲ್ಲಿ ತೊಡಗಿದ್ದು ಬಯಲುಗೊಂಡಿದೆ. 'ನಾ' ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸಲು, ಹೊಸಹೊಸ ಸುದ್ದಿಗಳನ್ನು ಪಡೆಯಲು ಈ ಪತ್ರಿಕೆಯ ಹಲವು ಸಿಬ್ಬಂದಿ ಯಾವ ಮಟ್ಟಕ್ಕೆ ಇಳಿದರೆಂದರೆ ಬ್ರಿಟನ್ನಿನ ಸಾವಿರಾರು ಗಣ್ಯರ ಫೋನ್‌ಗಳನ್ನು ಟ್ಯಾಪ್ ಮಾಡಿದರು, ರಾಜಕಾರಣಿಗಳ, ನಟನಟಿಯರ, ಆಟಗಾರರ ಮನೆ ಮತ್ತು ಆಫೀಸುಗಳಲ್ಲಿ ಗೌಪ್ಯ ಟಿವಿ ಕ್ಯಾಮೆರಾಗಳನ್ನು ಅಳವಡಿಸಿದರು, ಖಾಸಗಿ ತನಿಖಾಧಿಕಾರಿಗಳ ಸೇವೆ ಪಡೆದು ಜನರ ಖಾಸಗಿ ವಿವರಗಳನ್ನು ಪಡೆದರು... ಉದಾಹರಣೆಗೆ ಗ್ವೆನೆತ್ ಪಾಲ್ಟ್ರೋವ್ ಎಂಬ ನಟಿ ತನ್ನ ಮಗನಿಗೆ ಜನ್ಮನೀಡಿದಾಗ ಅದರ ಬಗ್ಗೆ ಆಕೆ ತನ್ನ ಸ್ನೇಹಿತರಿಗೆ ಏನೆಂದು ಹೇಳುತ್ತಾಳೆಂದು ತಿಳಿದುಕೊಳ್ಳಲು ಆಕೆಯ ಫೋನ್ ಅನ್ನು ಟ್ಯೂನ್ ಮಾಡಿ ಆಕೆಯ ಸಂಭಾಷಣೆಗಳನ್ನು ಕದ್ದಾಲಿಸಿದರು.

ಹಲವರು 'ನಾ' ಪತ್ರಿಕೆಯ ಇಂತಹ ಅಕ್ರಮಗಳ ವಿರುದ್ಧ ನ್ಯಾಯಾಲಯದ ಮೆಟ್ಟಿಲನ್ನು ಏರಿ ಈ ಪತ್ರಿಕೆಗೆ ತಮ್ಮ ಖಾಸಗಿ ಬದುಕನ್ನು ಬಯಲುಗೊಳಿಸುವ ಅಧಿಕಾರವಿಲ್ಲ ಎಂದು ದೂರಿದರು. ಅಂತಹ ಅದೆಷ್ಟೋ ಪ್ರಕರಣಗಳಲ್ಲಿ ದೂರು ನೀಡಿದವರಿಗೆ ಸಾವಿರಾರು ಪೌಂಡುಗಳನ್ನು ನೀಡಿ ಅವರ ಬಾಯಿ ಮುಚ್ಚಿಸಿ ಬಚಾವಾಗಿತ್ತು. ಹಾಗೆಯೇ ಹಲವೊಮ್ಮೆ ಪತ್ರಿಕೆಯ ಮಾಲೀಕ ಮರ್ಡಾಕ್ ಅಧಿಕಾರ ಹಿಡಿದ್ದ ರಾಜಕಾರಣಿಗಳೊಂದಿಗೆ ಗಳಸ್ಯಕಂಠಸ್ಯ ಸಂಬಂಧವನ್ನು ಹೊಂದಿದ್ದರಿಂದ ಪತ್ರಿಕೆಯ ಸಿಬ್ಬಂದಿ ಪೊಲೀಸರನ್ನೇ ಬಳಸಿಕೊಂಡು ದೂರು ನೀಡಿದ್ದವರನ್ನು ಬೆದರಿಸಿದ್ದರು.

ಇದನ್ನೆಲ್ಲ ಅದು ಹೇಗೋ ಜನ ಸಹಿಸಿಕೊಂಡಿದ್ದರು. ಆದರೆ ಯಾವಾಗ ಇದೆಲ್ಲಕ್ಕಿಂತ ಅನಾಹುತಕಾರಿ ಕೆಲಸಕ್ಕೆ ಈ ಪತ್ರಿಕೆಯ ಸಿಬ್ಬಂದಿ ಕೈಹಾಕಿದ್ದರು ಎಂದು ಗೊತ್ತಾಯಿತೋ ಆಗ ಜನ ಬೆಚ್ಚಿ ಬಿದ್ದರು. ಅದೇನೆಂದರೆ 2002ರಲ್ಲಿ ಮಿಲ್ಲಿ ಡೌಲರ್ ಎಂಬ ಬಾಲಕಿ ಅಪಹರಣವಾದಳು. ಅವಳನ್ನು ಪತ್ತೆಹಚ್ಚಲು ಪೊಲೀಸರು ಹಗಲುರಾತ್ರಿ ಶ್ರಮಿಸುತ್ತಿದ್ದರು. ಮಿಲ್ಲಿ ನಾಪತ್ತೆಯಾದಾಗ ಆಕೆಯ ಮೊಬೈಲ್ ಫೋನಿನ ಮೇಲ್ ಬಾಕ್ಸ್ ಭರ್ತಿಯಾಗಿತ್ತು. ಆಗ 'ನಾ' ಪತ್ರಿಕೆಯವರು ಏನು ಮಾಡಿದರೆಂದರೆ ಆಧುನಿಕ ತಂತ್ರಜ್ಞಾನವನ್ನು ಬಳಸಿ ಆಕೆಯ ಮೇಲ್ ಬಾಕ್ಸ್‌ನಲ್ಲಿದ್ದ ಕೆಲವು ಮೆಸೇಜ್‌ಗಳನ್ನು ಡಿಲೀಟ್ ಮಾಡಿದರು. ಅವರ ಉದ್ದೇಶ: ಆಕೆ ಯಾರಿಗಾದರೂ ಮೆಸೇಜ್ ಮಾಡಿದರೆ ಅಥವಾ ಯಾರಾದರೂ ಆಕೆಗೆ ಮೆಸೇಜ್ ಮಾಡಿದರೆ ಅದನ್ನೇ 'ಸ್ಕೂಪ್' ಎಂದು ವರದಿ ಮಾಡುವುದಾಗಿತ್ತು. ಆದರೆ ಏನಾಯಿತೆಂದರೆ, ಮಿಲ್ಲಿಯ ಮೆಸೇಜ್ ಬಾಕ್ಸ್‌ನಿಂದ ಕೆಲವು ಮೆಸೇಜ್‌ಗಳು ಡಿಲೀಟ್ ಆಗಿದ್ದರಿಂದ ಆಕೆಗೆ ಯಾವ ಅನಾಹುತವೂ ಆಗಿಲ್ಲ ಎಂಬ ಆಶಯವನ್ನು ಆಕೆಯ ತಂದೆತಾಯಲ್ಲಿ ಹುಟ್ಟಿಸಿತ್ತು. ಆದರೆ ವಾಸ್ತವವಾಗಿ ಮಿಲ್ಲಿ ಅಪಹರಣಗೊಂಡ ಕೆಲ ಗಂಟೆಗಳಲ್ಲೇ ಕೊಲೆಯಾಗಿದ್ದಳು.

ಸ್ಕೂಪ್ ಸುದ್ದಿಗಾಗಿ 'ನಾ' ಪತ್ರಿಕೆಯ ಸಿಬ್ಬಂದಿ ಇಂತಹ ಹೀನಮಟ್ಟಕ್ಕೆ ಇಳಿದಿದ್ದರು ಎಂದು ಇತ್ತೀಚೆಗೆ ಬಯಲಾದಾಗ ಪತ್ರಿಕೆಯ ಓದುಗರು ಬೆಚ್ಚಿಬಿದ್ದರು, ಈ ಪತ್ರಿಕೆಯ ಬಗ್ಗೆ ಹೇಸಿಗೆ ಪಟ್ಟರು. ಓದುಗರು ಮಾತ್ರವಲ್ಲ, ಈ ಪತ್ರಿಕೆಗೆ ದೊಡ್ಡಮಟ್ಟದಲ್ಲಿ ಜಾಹೀರಾತುಗಳನ್ನು ನೀಡುತ್ತಿದ್ದ ಕಂಪನಿಗಳೂ ಕೂಡ ತಾವು ಇಂತಹ ಪತ್ರಿಕೆಯನ್ನು ಬೆಂಬಲಿಸುವುದಿಲ್ಲ ಎಂದು ನಿರ್ಧರಿಸಿ ಎಲ್ಲಾ ಜಾಹೀರಾತುಗಳನ್ನು ರದ್ದು ಮಾಡಿದವು. 'ನಾ' ಪತ್ರಿಕೆಯ ಪ್ರಸಾರ ಸಂಖ್ಯೆ ಲಕ್ಷಗಟ್ಟಲೆ ಇದ್ದರೂ ಜಾಹೀರಾತುಗಳಿಲ್ಲದೆ ಅದನ್ನು ನಡೆಸುವುದು ಅಸಾಧ್ಯವಾದ್ದರಿಂದ ಕಳೆದ 168 ವರ್ಷಗಳಿಂದ ನಡೆದುಕೊಂಡು ಬಂದಿದ್ದ ಈ ಪತ್ರಿಕೆ ಮೊನ್ನೆ ತನ್ನ ಅಂತಿಮ ಸಂಚಿಕೆಯನ್ನು ಪ್ರಕಟಿಸಿ ಕಣ್ಣುಮುಚ್ಚಿತು.

'ನಾ' ಪತ್ರಿಕೆ ಅತಿಶ್ರೇಷ್ಠ ಪತ್ರಿಕೆ ಆಗಿರಲಿಲ್ಲ ನಿಜ. ಆದರೆ ಲಾಭವೇ ಮುಖ್ಯವಾದಾಗ, ಮರ್ಡಾಕ್‌ನಂತಹ ಧನಪಿಶಾಚಿಗಳಿಗೆ ಸರ್ಕಾರಗಳೇ ಬೆಂಬಲವಾಗಿ ನಿಂತಾಗ ಇಡೀ ವ್ಯವಸ್ಥೆಯೇ ಹೇಗೆ ಭ್ರಷ್ಟಗೊಳ್ಳುತ್ತದೆ ಎಂಬ ನೀತಿಪಾಠವನ್ನು 'ನಾ' ಪತ್ರಿಕೆಯ ಅಂತ್ಯ ಹೇಳಿದೆ. ಕೇಳಿಸಿಕೊಳ್ಳುವವರಿದ್ದಾರೆಯೇ? ❧

ಎಲ್ಲರ ಗಮನಕ್ಕೆ

ನಮ್ಮ ಪತ್ರಿಕೆಯ ಮತ್ತು ನಮ್ಮ ಸಿಬ್ಬಂದಿಯ ಹೆಸರು ಹೇಳಿಕೊಂಡು ಕೆಲವು ದುಷ್ಟರು ರಾಜಕಾರಣಿಗಳಿಂದ ಮತ್ತು ಅಧಿಕಾರಿಗಳಿಂದ ಹಣ ವಸೂಲಿ ಮಾಡಲು ಪ್ರಯತ್ನಿಸುತ್ತಿದ್ದಾರೆಂಬ ಸುದ್ದಿ ನಮ್ಮ ಗಮನಕ್ಕೆ ಬಂದಿದೆ. ಪತ್ರಿಕೆಯ ಹೆಸರನ್ನು ಹೇಳಿಕೊಂಡು ಯಾರೇ ಇಂತಹ ಕೃತ್ಯ ಎಸಗಲು ಬಂದರೆ ಅವರನ್ನು ಕೂಡಲೇ ಪೊಲೀಸರಿಗೆ ಒಪ್ಪಿಸಬೇಕೆಂದು ಎಲ್ಲರಲ್ಲಿ ವಿನಂತಿ.

-ಸಂ

ಸ್ವರ್ಣವಲ್ಲಿ ಸ್ವಾಮಿಯ ಭಗವದ್ಗೀತಾ ಭಾನಗಡಿ !




ಸ್ವರ್ಣವಲ್ಲಿ ಮಠಾಧೀಶರ ಈ ಕೋಮುವಾದಿ ಚಟುವಟಿಕೆಗೆ ಶಿಕ್ಷಣ ಇಲಾಖೆಯ ಪ್ರಭೃತಿಗಳು ಸಿಂಧುತ್ವದ ಸೀಲು ಒತ್ತಿಬಿಟ್ಟಿದ್ದಾರೆ. ಪ್ರತಿ ತಾಲ್ಲೂಕಿನ ಶಿಕ್ಷಣಾಧಿಕಾರಿ-ಶಾಲಾ ಮುಖ್ಯಸ್ಥರಿಗೆ ಸುತ್ತೋಲೆಯೊಂದನ್ನು ಕಳಿಸಿ ಸ್ವಾಮೀಜಿಯ ಭಗವದ್ಗೀತಾ (ಹಿಂದೂತ್ವ) ಅಭಿಯಾನಕ್ಕೆ ಸಹಕರಿಸುವಂತೆ ಕಟ್ಟುನಿಟ್ಟಿನ ನಿರ್ದೇಶನ ನೀಡಲಾಗಿದೆ. ಈ ಮತಾಂಧ ಮಸಲತ್ತಿಗೆ ಶಿಕ್ಷಕರನ್ನು ಸಾರಾಸಗಟಾಗಿ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಸಾಂವಿಧಾನಿಕ ಆಡಳಿತ ಇದೆಯಾ? ಅಥವಾ ಮನುಸಂಹಿತೆ ಸತ್ತೆಯೇನಾದರೂ ಶುರುವಾಗಿದೆಯಾ?


ಯಡ್ಡಿಯ ಚಡ್ಡಿ ಸರ್ಕಾರ ಅಸ್ತಿತ್ವಕ್ಕೆ ಬಂದ ಕೆಲವೇ ದಿನಗಳಲ್ಲಿ ಕಾಡಲಾರಂಭಿಸಿದ್ದ ಇಂಥದೊಂದು ಡೌಟ್ ಈಗೀಗ ಕ್ಲಿಯರ್ ಆಗುತ್ತಿದೆ! 'ಕೇಶವ ಕೃಪ'ದಿಂದ ಪ್ರತಿಕ್ಷಣವೂ ನಿಯಂತ್ರಿಸಲ್ಪಡುತ್ತಿರುವ ಯಡ್ಡಿಜೀ ಸರ್ಕಾರ ಹಿಂದೂತ್ವದ ಹಿಕಮತ್ತಿನ ದರ್ಬಾರನ್ನು ನಾಜೂಕಾಗಿ ನಡೆಸುತ್ತಿರುವುದು ಈಗ ಪಕ್ಕಾ ಆಗಿಹೋಗಿದೆ!! ರೈತರ ಮೇಲಿನ ದಾಳಿಯಿಂದ ಚರ್ಚ್-ಪಬ್ ದಾಳಿತನಕ, ಸಾಬರ ಹುಡುಗ-ಹಿಂದೂ ಹುಡುಗಿ (ಲವ್ ಜಿಹಾದ್) ಎಂಬ ಹುಸಿ ಪ್ರಹಸನದಿಂದ ಅನೈತಿಕ ಪೊಲೀಸ್‌ಗಿರಿವರೆಗೆ, ಮತಾಂತರದ ಹುಯಿಲಿನಿಂದ ದಲಿತ ಅನಾಥಮಕ್ಕಳ ಆಶ್ರಯತಾಣಗಳಿಗೆ ಲಗ್ಗೆವರೆಗೆ... ಪ್ರತಿ ಪ್ರಕರಣದಲ್ಲೂ ಬಿಜೆಪಿ ಸರ್ಕಾರ ಹಿಂದೂತ್ವದ ಹಿಡನ್ ಅಜೆಂಡಾವನ್ನು ಅಮಾನುಷವಾಗಿ ಪ್ರಯೋಗಿಸಿದೆ!!

ಅನಾಹುತಕಾರಿ ಹಿಂದೂತ್ವದವಾದಿ ವಿಶ್ವೇಶ್ವರ ಹೆಗಡೆ ಕಾಗೇರಿ ಎಂಬ ವಿದ್ಯಾಮಂತ್ರಿ ಶಿಕ್ಷಣವನ್ನು ಕೇಸರೀಕರಣ ಮಾಡಲು ಮಾಡಬಾರದ ಕರಾಮತ್ತೆಲ್ಲ ಮಾಡುತ್ತಿದ್ದಾನೆ. ಈ ನಾಜೂಕಯ್ಯ ಶಾಲೆ-ಕಾಲೇಜುಗಳನ್ನೇ ಹಿಂದೂ ಧರ್ಮ ಪ್ರಸಾರ ಕೇಂದ್ರ ಮಾಡುವ ಸ್ಕೆಚ್ ಹಾಕಿಕೊಂಡಿದ್ದಾನೆ. ಆರೆಸ್ಸೆಸ್‌ನ ರಾಷ್ಟ್ರೋತ್ಥಾನ ಪರಿಷತ್ ಎಂಬ ಹಿಂದೂತ್ವದ ಅಮಲೇರಿಸುವ ಸಾಹಿತ್ಯ ಪ್ರಕಟಿಸುವ ಪುರೋಹಿತಶಾಹಿ ಗ್ಯಾಂಗಿನ 300 ಪುಸ್ತಕಗಳನ್ನು ಪ್ರತಿ ಶಾಲೆಗೆ ಕಡ್ಡಾಯವಾಗಿ ಪೂರೈಸುವ ಕಾಗೇರಿ ಈಗ ಶಾಲೆ-ಕಾಲೇಜು-ಹೈಸ್ಕೂಲುಗಳಲ್ಲಿ ಹಿಂದೂ ಧರ್ಮಗ್ರಂಥ ಭಗವದ್ಗೀತೆಯ ಪಠಣ ಮಾಡಿಸುತ್ತಿದ್ದಾನೆ. ತಾನು ನಡೆದುಕೊಳ್ಳುವ ತನ್ನ ತವರೂರು ಶಿರಸಿಯ ಸ್ವರ್ಣವಲ್ಲಿ ಮಠದ ಗಂಗಾಧರೇಂದ್ರ ಸ್ವಾಮಿಯನ್ನು ಶಾಲೆ-ಕಾಲೇಜುಗಳಿಗೆ ಸಕಲ ಸರ್ಕಾರಿ ಮರ್ಯಾದೆಯಿಂದ ನುಗ್ಗಿಸಿ ಭಗವದ್ಗೀತಾ ಕಂಠಪಾಠ ಅಭಿಯಾನ ಮಾಡಿಸುತ್ತಿದ್ದಾನೆ ಕಾಗೇರಿ ಮಾಣಿ!!


ನಾರಾಯಣಸ್ವಾಮಿ

ಸ್ವರ್ಣವಲ್ಲಿ ಮಠಾಧೀಶರ ಈ ಕೋಮುವಾದಿ ಚಟುವಟಿಕೆಗೆ ಶಿಕ್ಷಣ ಇಲಾಖೆಯ ಪ್ರಭೃತಿಗಳು ಸಿಂಧುತ್ವದ ಸೀಲು ಒತ್ತಿಬಿಟ್ಟಿದ್ದಾರೆ. ಪ್ರತಿ ತಾಲ್ಲೂಕಿನ ಶಿಕ್ಷಣಾಧಿಕಾರಿ-ಶಾಲಾ ಮುಖ್ಯಸ್ಥರಿಗೆ ಸುತ್ತೋಲೆಯೊಂದನ್ನು ಕಳಿಸಿ ಸ್ವಾಮೀಜಿಯ ಭಗವದ್ಗೀತಾ (ಹಿಂದೂತ್ವ) ಅಭಿಯಾನಕ್ಕೆ ಸಹಕರಿಸುವಂತೆ ಕಟ್ಟುನಿಟ್ಟಿನ ನಿರ್ದೇಶನ ನೀಡಲಾಗಿದೆ. ಈ ಮತಾಂಧ ಮಸಲತ್ತಿಗೆ ಶಿಕ್ಷಕರನ್ನು ಸಾರಾಸಗಟಾಗಿ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಸುಮಾರು 20 ಜಿಲ್ಲೆಗಳಲ್ಲಿ ಈ ಭಗವದ್ಗೀತಾ ಅಭಿಯಾನ ಎಂಬ ಪರೋಕ್ಷವಾಗಿ ಹಿಂದೂ ಧರ್ಮಕ್ಕೆ ಮತಾಂತರ ಪ್ರಚೋದಿಸುವ ಅಥವಾ ಮುಗ್ಧ ವಿದ್ಯಾರ್ಥಿಗಳನ್ನು ಧರ್ಮಾಂಧರಾಗಿಸುವ 'ಕರ್ಮ' ಸ್ವರ್ಣವಲ್ಲಿ ಸ್ವಾಮಿ ಮಾಡಿ ಮುಗಿಸಿದ್ದಾರೆ.

ಕಳೆದ ಜುಲೈ 3ರಂದು ಹಿಂದೂತ್ವದ ಅಭಿಯಾನಕ್ಕೆಂದು ಕೋಲಾರಕ್ಕೆ ಸ್ವರ್ಣವಲ್ಲಿ ಸ್ವಾಮಿ ಹೋಗಿದ್ದರು. ಅಲ್ಲಿಯ ಸರ್ಕಾರಿ ಹೆಣ್ಮಕ್ಕಳ ಪದವಿಪೂರ್ವ ಕಾಲೇಜಿನಲ್ಲಿ ಸ್ವಾಮೀಜಿಯ ಭಗವದ್ಗೀತಾ ಪ್ರವಚನ ಏರ್ಪಡಿಸಲಾಗಿತ್ತು. ಸ್ವಾಮಿಯ ಗಿಂಡಿ ಮಾಣಿಗಳು-ಶಿಷ್ಯರು- ಒಡ್ಡೋಲಗ ಮತ್ತು ಸ್ಥಳೀಯ ಕೋಲಾರ ಜಿಲ್ಲಾ ಗೀತಾ ಅಭಿಯಾನದ ಅಧ್ಯಕ್ಷ ನಂಜುಂಡ ಶೆಟ್ಟಿ ಗ್ಯಾಂಗ್ 'ಧರ್ಮೋತ್ಸಾಹ'ದಿಂದ ಕಾಲೇಜಿನಲ್ಲಿ ಸೇರಿತ್ತು. ಜಾತ್ಯತೀತ ರಾಷ್ಟ್ರದ ಶಿಕ್ಷಣ ಸಂಸ್ಥೆಯಲ್ಲಿ ಇಂಥ ಹಿಂದೂತ್ವದ ಕಾರ್ಯಕ್ರಮ ತರವಲ್ಲವೆಂದು ಕೋಲಾರದ ದಲಿತ ಸಂಘಟನೆಗಳು-ಎಸ್‌ಎಫ್‌ಐ ಎಂಬ ಎಡಪಂಥೀಯ ವಿದ್ಯಾರ್ಥಿ ಬಳಗ ಮೊದಲೇ ಆಕ್ಷೇಪಿಸಿತ್ತು. ಆದರೆ ಸಾಕ್ಷಾತ್ ಸರ್ಕಾರವೇ ತಮ್ಮ ಅಭಿಯಾನಕ್ಕೆ ಬೆಂಗಾವಲಾಗಿರುವಾಗ ದಲಿತರು-ವಿದ್ಯಾರ್ಥಿಗಳೆಲ್ಲ ಯಾವ ಲೆಕ್ಕ ಎಂಬ ಅಹಂಕಾರದಲ್ಲೇ ಸ್ವರ್ಣವಲ್ಲಿ ಸ್ವಾಮಿ ಪರಿವಾರ ಕಾಲೇಜಿಗೆ ಬಿಜಯಂಗೈದಿದೆ!


ಕರ್ನಾಟಕ ಕೋಮು ಸೌಹಾರ್ದ ವೇದಿಕೆಯಿಂದ ಪ್ರತಿಭಟನೆ....

ಗೀತಾಪ್ರವಚನ ಬೇಡಬೇಡವೆಂದು ಎಸ್‌ಎಫ್‌ಐ ವಿದ್ಯಾರ್ಥಿಗಳು ಸಂಘಟಕರನ್ನು ಕೇಳಿಕೊಂಡಿದ್ದಾರೆ. ಸರ್ವಧರ್ಮದ ವಿದ್ಯಾರ್ಥಿಗಳಿರುವ ವಿದ್ಯಾ ಸಂಸ್ಥೆಯಲ್ಲಿ ಒಂದು ಧರ್ಮವನ್ನು ಶ್ರೇಷ್ಠ-ಅನುಕರಣೀಯ-ಪವಿತ್ರ ಎಂದೆಲ್ಲ ವೈಭವೀಕರಿಸುವುದು ಅಪರಾಧ ಎಂದು ಹೇಳಿದ್ದಾರೆ. ಇದಕ್ಕೆಲ್ಲ ಕಾವಿ ಪಡೆ ಕೇರ್ ಮಾಡದೆ ಪ್ರವಚನ ಶುರುವಿಟ್ಟುಕೊಂಡು ಭಗವದ್ಗೀತೆಯ ಪ್ರತಿಗಳನ್ನು ವಿದ್ಯಾರ್ಥಿಗಳಿಗೆ ಹಂಚಿದೆ. ಆಗ ಎಸ್‌ಎಫ್‌ಐ ಹುಡುಗರು-ಹುಡುಗಿಯರು ಪ್ರತಿಭಟಿಸಿದ್ದಾರೆ. ಇದನ್ನು ಸಹಿಸದ ಫ್ಯಾಸಿಸ್ಟ್ ಸಂಘಪರಿವಾರಿಗಳು ಜಗಳ... ನಿಂತಿದ್ದಾರೆ. ಸ್ವಾಮಿ ಪರಿವಾರದ ನಂಜುಂಡಯ್ಯ, ಶ್ರೇಷ್ಠ ಮುಂತಾದವರು ಹಲ್ಲೆಯನ್ನು ಮಾಡಿದ್ದಾರೆ. ಮನುಸಂಹಿತೆ ಆಳ್ವಿಕೆಯ ಪೊಲೀಸರು ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ಅಂಬರೀಷ್ ಮತ್ತಾತನ ಸಹಚರರ ಮೇಲೆ ಕೇಸು ಜಡಿದು ಎತ್ತಾಕಿಕೊಂಡು ಹೋಗಿ ಜೈಲಿಗಟ್ಟಿದ್ದಾರೆ. ಇತ್ತ ಸ್ವರ್ಣವಲ್ಲಿ ಸ್ವಾಮಿ ಪ್ರವಚ... ಬಿಟ್ಟು ಸೀದಾ ಸೋಂದಾ ಮಠ ಸೇರಿಕೊಂಡಿದ್ದಾರೆ. ಉಲ್ಟಾ ಕೇಸ್ ಹೊಡೆ... ಹೆದರಿಕೆಯಿಂದ ಓಡೋಡಿ ಊರಿಗೆ ಬಂದಿದ್ದಾರೆ.

ಇದಿಷ್ಟು ಕೋಲಾರದಲ್ಲಿ ನಡೆದ 'ಗೀತಾ ಪುರಾಣ'! ಆ ನಂತರ ಇದ... ಪಕ್ಕಾ ಧರ್ಮಕಾರಣದ ಖದರು ಬಂದುಬಿಟ್ಟಿತು. ಸ್ವರ್ಣವಲ್ಲಿ ಮಠದ ಶಿಷ್ಯನೂ ಆಗಿರುವ ಶಿಕ್ಷಣ ಮಂತ್ರಿ ಕಾಗೇರಿ ಮಾಣಿ ಮತ್ತು ಕೋಲಾರ ಮಂತ್ರಿ ಎ.ನಾರಾಯಣಸ್ವಾಮಿ ಸ್ವರ್ಣವಲ್ಲಿ ಸ್ವಾಮಿ ಪರವಹಿಸಿ ಸ್ಟೇಟ್‌ಮೆಂಟ್‌ಗಳನ್ನು ಒಗಾಯಿಸಿದರು. ಹಿಂದೂ ಸಂಘಟನೆಗಳು-ಎಸ್‌ಎಫ್‌ಐನ ವಿರೋಧಿ ಎಬಿವಿಪಿ ವಿಪ್ರರು 'ಗೀತಾ ಗಲಾಟೆ' ಬೆಂಬಲಿಸಿ ಬೀದಿಗಿಳಿದರು. ಉತ್ತರ ಕನ್ನಡದ ಶಿರಸಿ ಸೀಮೆಯ ಹೈಗರ ದಂಡಂತೂ ತಮ್ಮ 'ಗುರು'ಗೆ- ಧರ್ಮಪೀಠಕ್ಕೆ ಘೋರ ಅವಮಾನ ಮಾಡಲಾಗಿದೆ ಎಂದು ನೆಲ-ಮುಗಿಲು ಒಂದು ಮಾಡಿ...

ಸ್ವರ್ಣವಲ್ಲಿ ಲೀಲಾ ವಿನೋದ!

ಎಲ್ಲೋ ಚರ್ಚ್ ಒಂದರಲ್ಲಿ ಅಥವಾ ಹೋಲಿ ಕ್ರಾಸ್ ಇರುವ ಹಾಲ್‌ನಲ್ಲಿ ಒಂದಿಷ್ಟು ಜನ ಸೇರಿ ಬೈಬಲ್ ಇಲ್ಲವೇ ಯೋಹಾನನ ಸುವಾರ್ತೆ ಪಠಿಸಿದರೆ ಕ್ರಿಶ್ಚಿಯನ್ನರು ಮತಾಂತರ ಮಾಡುತ್ತಿದ್ದಾರೆಂದು ಹಿಂದೂತ್ವವಾದಿಗಳು ಬೊಬ್ಬೆ ಹೊಡೆಯುತ್ತಾರಲ್ಲವೇ? ಹಾಗಿದ್ದರೆ ಸ್ವರ್ಣವಲ್ಲಿ ಸ್ವಾಮಿ ಕಾವಿ ಯೂನಿಫಾರಂನಲ್ಲಿ ಸರ್ಕಾರಿ ಸಹಕಾರದಿಂದ ಹಾಡುಹಗಲೇ ಶಾಲೆ-ಕಾಲೇಜಿಗೆ ನುಗ್ಗಿ ಭಗವದ್ಗೀತೆ ಬೋಧಿಸಿದರೆ ಅದ್ಯಾಕೆ ಮತಾಂತರದ ಮಸಲತ್ತಾಗುವುದಿಲ್ಲ? ಈ ಸ್ವರ್ಣವಲ್ಲಿ ಸ್ವಾಮಿ ಪಕ್ಕಾ ಪುರೋಹಿತಶಾಹಿ ಹಿಂದೂ ಮತ ಪ್ರಚಾರಕನೆಂಬುದರಲ್ಲಿ ಡೌಟೇ ಇಲ್ಲ.

ಸ್ವರ್ಣವಲ್ಲಿ ಸ್ವಜಾತಿ ಹೈಗರಿಗೆ ಸರ್ಕಾರಿ ಯೋಜನೆಗಳಿಂದ ತೊಂದರೆ ಆಗುತ್ತದೆಂದಾಗ ಪರಿಸರವಾದಿ ಗೆಟಪ್ಪಿನಲ್ಲಿ ಕಳಾಯಿಸುವುದು ಬಿಟ್ಟರೆ ಒಂಥರಾ ಅಡ್ರೆಸ್ ಇಲ್ಲದ ಸ್ವಾಮಿಯಂತಿದ್ದರು. ಆದರೆ ಈಗೀಗ ಆತ ಸ್ವಜಾತಿ ಸೀನಿಯರ್ ಸ್ವಾಮಿಗಳಾದ ಪೇಜಾವರ, ರಾಘವೇಶ್ವರರಂಥವರಿಗೆ ಸೈಡ್ ಹೊಡೆಯುತ್ತಿದ್ದಾರೇನೋ ಎಂಬಷ್ಟು ಸುದ್ದಿ-ಸದ್ದು ಸರಣಿಯಾಗಿ ಮಾಡುತ್ತಿದ್ದಾರೆ.

ಅತಿ ವೇಗದಿಂದ ಓಡುವ ಕಾರಲ್ಲಿ ಪ್ರಯಾಣಿಸುವ ಖಯಾಲಿಯ ಸ್ವರ್ಣವಲ್ಲಿಯನ್ನು ಹಿಂಬಾಲಿಸುವುದು ಆತನ ಒಡ್ಡೋಲಗದ ವಾಹನಕ್ಕೂ ಕಷ್ಟವೇ. ಸ್ಪೀಡಾಗಿ ಕಾರು ಓಡಿಸುವಂತೆ ಕ್ಷಣ-ಕ್ಷಣವೂ ಡ್ರೈವರ್‌ಗೆ ಹುಸಲಾಯಿಸುವ ಸ್ವರ್ಣವಲ್ಲಿಯ ಬೆಂಗಾವಲು ವಾಹನ ಮೊನ್ನೆ ಕೋಲಾರಕ್ಕೆ ಹೋಗುವಾಗ ಹಾವೇರಿ ಬಳಿ ಅಪಘಾತಕ್ಕೀಡಾಗಿತ್ತು. ಆರಂಭದಲ್ಲೇ ಅಪಶಕುನವಾದರೂ ಕೋಲಾರಕ್ಕೆ ಹೋದ ಸ್ವರ್ಣವಲ್ಲಿ ಅಲ್ಲಿ ದೊಡ್ಡ ರಾದ್ಧಾಂತವನ್ನೇ ಮಾಡಿಕೊಂಡುಬಿಟ್ಟರು.

ಸ್ವರ್ಣವಲ್ಲಿಯ ಗೀತಾ ಪ್ರವಚನ ಏರ್ಪಾಡಾಗಿದ್ದ ಕೋಲಾರದ ಹೆಣ್ಣುಮಕ್ಕಳ ಪಿಯು ಕಾಲೇಜಿನಲ್ಲಿ ಆ ಹೊತ್ತಲ್ಲಿ ಸಪ್ಲಿಮೆಂಟರಿ ಮತ್ತು ಇಲಾಖಾ ಪರೀಕ್ಷೆಗಳು ನಡೆಯುತ್ತಿದ್ದವು. ಹಾಗಾಗಿ ಕಾಲೇಜಿನ ಸುತ್ತ ನಿಷೇಧಾಜ್ಞೆ ಜಾರಿಗೊಳಿಸಲಾಗಿತ್ತು. ತನ್ನ ಬೆಂಬಲಿಗರ ದಂಡಿನೊಂದಿಗೆ ಗೌಜಿ-ಗದ್ದಲ ಮಾಡುತ್ತ ಬಂದ ಸ್ವಾಮಿ ನಿಷೇಧಾಜ್ಞೆ ಉಲ್ಲಂಘಿಸಿ ಗೀತಾ ಪ್ರವಚನ ಶುರುಹಚ್ಚಿಕೊಂಡೇ ಬಿಟ್ಟಿದ್ದರು.

ಈ ಪರೋಕ್ಷ ಮತ ಪ್ರಚಾರ ಪ್ರತಿಭಟಿಸಿದ ಪ್ರಗತಿಪರ ವಿದ್ಯಾರ್ಥಿಗಳ ಜತೆ ಜಗಳವೂ ಸ್ವಾಮಿ ಪರಿವಾರ ಮಾಡಿ ರಂಪವೆಬ್ಬಿಸಿತ್ತು. ದಲಿತ ದೌರ್ಜನ್ಯದ ಕೇಸೂ ಸ್ವಾಮಿ ಮೇಲೆ ಬಿದ್ದಿದೆ. ಆದರೆ ಲಗುಬಗೆಯಲ್ಲಿ ಶಿರಸಿ ಮಠಕ್ಕೆ ಬಂದಿರುವ ಸ್ವಾಮೀಜಿ ಚಾತುರ್ಮಾಸ ವ್ರತಾಚರಣೆಗೆ ಕುಳಿತಿದ್ದಾರೆ. ವ್ರತನಿರತ ಸ್ವಾಮಿಯನ್ನು ಬಂಧಿಸುವ 'ಧರ್ಮಗೇಡಿ' ಕೆಲಸ ಚಡ್ಡಿ ಸರ್ಕಾರ ಮಾಡುವುದಿಲ್ಲ ಬಿಡಿ! ಸ್ವಾಮಿ ಕೇಸ್ ಇದ್ದರೂ ಕೇರ್ ಇಲ್ಲದಂತೆ ಹಾಯಾಗಿದ್ದಾರೆ.

ತೀರಾ ಈಚೆಗೆ ಸದ್ರಿ ಸ್ವಾಮಿಗೆ ಸರ್ಕಾರ ಪರಿಸರ ಪ್ರಶಸ್ತಿ ನೀಡಿ ಆತನ ಮಠದಲ್ಲೇ ಸನ್ಮಾನಿಸಿತು. ಪ್ರಶಸ್ತಿ ಕೊಡಿಸಿದ್ದು ಸ್ವಜಾತಿ ಮಾಣಿಗಳಾದ ಮಂತ್ರಿ ಕಾಗೇರಿ ಮತ್ತು ಪಶ್ಚಿಮಘಟ್ಟ ಕಾರ್ಯಪಡೆ ಅಧ್ಯಕ್ಷ ಅಧಿಕ ಪ್ರಸಂಗಿ ಅನಂತ ಆಶೀಸರ. ಸ್ವರ್ಣವಲ್ಲಿ ಮಠದ ಸುತ್ತಲಿನ ಆದಿವಾಸಿಗಳು ಗಂಗಾಧರೇಂದ್ರ ಸ್ವಾಮಿಗಿಂತ ನಿಷ್ಠೆ-ನಿಯತ್ತಿನಿಂದ ಪರಿಸರ ಸಂರಕ್ಷಿಸುತ್ತಿದ್ದಾರೆ. ಹೀಗಿರುವಾಗ ತಾನು ಸರ್ಕಾರಿ ಪ್ರಶಸ್ತಿಗೆ ಅರ್ಹನೇ ಎಂಬ ಆತ್ಮವಿಮರ್ಶೆ ಸ್ವಾಮಿ ಮಾಡಿಕೊಳ್ಳಲಿಲ್ಲ, ಆ ಪ್ರಶಸ್ತಿ ತನಗೆ ಬೇಡವೆಂದು ನೈತಿಕ ಸ್ಥೈರ್ಯ ತೋರಿಸಲಿಲ್ಲ.

ರಾಮಚಂದ್ರಾಪುರ ಮಠದ ರಾಘವನಿಗೆ ಗೋಕರ್ಣದ ಹಣವಂತ ಮಹಾಬಲೇಶ್ವರ ದೇವಸ್ಥಾನವನ್ನು ಸರ್ಕಾರ ಕೊಟ್ಟಾಗ ಈ ಸ್ವರ್ಣವಲ್ಲಿ ವಿರೋಧ ವ್ಯಕ್ತಪಡಿಸಿದ್ದರು. ಆದರೆ ಶಿಷ್ಯ ಕಾಗೇರಿಯೇ ಸ್ವರ್ಣವಲ್ಲಿ ಸ್ವಾಮಿಯ ಬೊಬ್ಬೆಗೆ ಬೆಲೆ ಕೊಡಲಿಲ್ಲ, ಯಾಕೆಂದರೆ ಕಾಗೇರಿಯ ಕ್ಷೇತ್ರದ ಸಿದ್ದಾಪುರದ ಹೈಗರು ರಾಮಚಂದ್ರಾಪುರ ಮಠದ ಅನುಯಾಯಿಗಳು. ರಾಜಕೀಯ ಲಾಭ-ನಷ್ಟದ ಲೆಕ್ಕಾಚಾರ ಹಾಕಿದ್ದ ಕಾಗೇರಿ ಸ್ವರ್ಣವಲ್ಲಿಯನ್ನು ಕಡೆಗಣಿಸಿ 'ಗುರು'ವಿನ ಮನಸ್ತಾಪಕ್ಕೆ ತುತ್ತಾಗಿದ್ದರು. ಅನಂತರ ಡ್ಯಾಮೇಜು ಕಂಟ್ರೋಲ್‌ಗೆ ಸ್ವರ್ಣವಲ್ಲಿ ಮಠಕ್ಕೆ ಕೋಟಿ ಕಾಸು ಕೊಟ್ಟರು. ಯಲ್ಲಾಪುರದಲ್ಲಿ ಅಗ್ನಿಶಾಮಕ ಠಾಣೆಗೆಂದು ಮೀಸಲಿಟ್ಟ ಜಾಗವನ್ನೇ ಸ್ವರ್ಣವಲ್ಲಿ ಮಠದ ಖಾಸಗಿ ಆಸ್ಪತ್ರೆ ಕಟ್ಟಲು ಬಳುವಳಿಯಾಗಿ ನೀಡಿದರು. ಪರಿಸರ ಪ್ರಶಸ್ತಿ ಕೊಡಿಸಿದರು. ಗೀತಾ ಅಭಿಯಾನಕ್ಕೆ ಸರ್ಕಾರಿ ಅನುಕೂಲ ಸುತ್ತೋಲೆ ಮೂಲಕವೇ ಕೊಟ್ಟು ಕೃತಾರ್ಥರಾದರು. ಆ ಮೂಲಕ ಶಿರಸಿ ಭಾಗದ ಸ್ವರ್ಣವಲ್ಲಿ ಮಠದ ಅನುಯಾಯಿಗಳ ಓಟು ಖಾತ್ರಿಪಡಿಸಿಕೊಳ್ಳಲು ಹವಣಿಸಿದರು.

ಅಡಿಕೆ ಬೆಳೆಗೆ ಕುತ್ತು ಬಂದಿದೆ. ಅಡಿಕೆಗೆ ಬೆಲೆಯೂ ಇಲ್ಲವೆಂದು ಬೊಬ್ಬೆ ಹೊಡೆಯುತ್ತ ಅಡಿಕೆ ಬೆಳೆಗಾರರ ದೊಡ್ಡದೊಂದು ಸಮಾವೇಶವನ್ನು ಸ್ವರ್ಣವಲ್ಲಿ ಸ್ವಾಮಿ ಕೆಲ ತಿಂಗಳ ಹಿಂದೆ ಶಿರಸಿಯಲ್ಲಿ ಭರ್ಜರಿಯಾಗೇ ಮಾಡಿದ್ದರು. ಈ ಸಮಾವೇಶ ಹೈಗರ ಮೇಳದಂತಿತ್ತು. ಅಡಿಕೆ ಬೆಳೆಗಾರರಲ್ಲಿ ಹೆಚ್ಚಿನವರು ಬ್ರಾಹ್ಮಣರೇ. ಈ ಅಡಿಕೆ ತೋಟಿಗರ 'ಆಸಾಮಿ ಸಾಲ' ಮನ್ನಾ ಮಾಡುವಂತೆ ಸರ್ಕಾರವನ್ನು ಮಣಿಸುವ ಮಸಲತ್ತಿನ ಸಮಾವೇಶ ಇದಾಗಿತ್ತು. ಸರ್ಕಾರ ಸಾಲ ಮನ್ನಾ ಮಾಡದಿದ್ದರೆ ಸಾಲ ತುಂಬ ಬೇಡಿ ಎಂದು ಸ್ವರ್ಣವಲ್ಲಿ ಸ್ವಾಮಿ ಪರೋಕ್ಷವಾಗಿ ಫರ್ಮಾನು ಹೊರಡಿಸಿದ್ದರು. ಹೀಗಾಗಿ ಈಗ ಶಿರಸಿ ಸೀಮೆಯ ಸಹಕಾರಿ ಸಂಘಗಳು ಸಾಲ ರಿಕವರಿ ಆಗದೆ ಎದುಸಿರುಬಿಡುವಂತಾಗಿದೆ! ಶಿರಸಿ ಸೀಮೆಯ ಆರ್ಥಿಕತೆ ನಿಂತಿರುವುದೇ ಅಡಿಕೆ ಮಾರುಕಟ್ಟೆ ಮೇಲೆ. ಅಡಿಕೆ ಮಾರ್ಕೆಟ್‌ಗೆ ಹೊಡೆತ ಬಿದ್ದಿದ್ದರೆ ಶಿರಸಿಯಲ್ಲಿ ಎರಡು ಡಜನ್‌ನಷ್ಟು ಇಸ್ಪೀಟು ಕ್ಲಬ್-ಬಾರ್‌ಗಳು ನಡೆಯಲು ಸಾಧ್ಯವಿತ್ತಾ? ಈ ಬಾರ್-ಕ್ಲಬ್‌ಗಳ ಆಟಗಾರ-ಮೋಜುಗಾರರಲ್ಲಿ ಬಹುತೇಕರು ಅಡಿಕೆ ತೋಟಿಗರಾದ ಹಣವಂತರು. ಇದು ತ್ರಿಕಾಲ ಜ್ಞಾನಿಗಳಾದ ಸ್ವರ್ಣವಲ್ಲಿ ಶ್ರೀಗೆ ಗೊತ್ತಾಗಿಲ್ಲವೆಂಬುದು ವಿಚಿತ್ರವಾದರೂ ಸತ್ಯ!

ಪಶ್ಚಿಮ ಘಟ್ಟದ ಶಿರಸಿ ಸುತ್ತಲಿನ ಏರಿಯಾ ಯುನೆಸ್ಕೋದ ವಿಶ್ವ ಪರಂಪರೆಯ ತಾಣವಾಗಬೇಕೆಂಬುದು ಸ್ವರ್ಣವಲ್ಲಿ ಸ್ವಾಮಿ ಇಚ್ಛೆ. ಶಿರಸಿ ಸೀಮೆ ಯುನೆಸ್ಕೋದ ಪಾರಂಪರಿಕ ತಾಣದ ಪಟ್ಟ ಸೇರಿದರೆ ಅಲ್ಲಿ ತಲತಲಾಂತರದಿಂದ ವಾಸವಾಗಿರುವ ವನವಾಸಿ ಬುಡಕಟ್ಟು ಮಂದಿಯ ಪಾಡೇನು? ಜನಾಗ್ರಹದ ಮೇರೆಗೆ ಪಶ್ಚಿಮ ಘಟ್ಟದಲ್ಲಿ ನಡೆಯುತ್ತಿರುವ ರೈಲುಮಾರ್ಗದ ಕತೆಯೇನು? ಇದಕ್ಕೆಲ್ಲ ಸ್ವಾಮೀಜಿ ಬಳಿ ಪರಿಹಾರವಿಲ್ಲ. ಪಶ್ಚಿಮ ಘಟ್ಟದ ವನವಾಸಿಗಳು ಶೂದ್ರರೆಂಬುದಷ್ಟೇ ಸ್ವಾಮಿಗೆ ಗೊತ್ತು. ಸ್ವಜಾತಿ ಬ್ರಾಹ್ಮಣರಿಗೆ ಸರ್ಕಾರಿ ಯೋಜನೆಗಳಿಂದ ಕಷ್ಟ-ನಷ್ಟವಾದರಷ್ಟೇ ಸ್ವರ್ಣವಲ್ಲಿ ಶ್ರೀ ಪರಿಸರಶ್ರೀ ಅಷ್ಟೇ!

ಹಾರಾಡಿದರು. ಚೆಡ್ಡಿ ಶೂದ್ರರೂ ಹವ್ಯಕರ ಸ್ವಾಮಿಗೆ ಭೋಪರಾಕ್ ಹಾಕಿ ಪುನೀತರಾದರು. ಇತ್ತ ಎಸ್‌ಎಫ್‌ಐ-ದಲಿತ ಸಂಘಟನೆಗಳು ಸಂವಿಧಾನ ಉಲ್ಲಂಘಿಸಿರುವ ಸ್ವಾಮಿ ಮತ್ತು ಗೂಂಡಾಗಿರಿ ಮಾಡಿರುವ ಸ್ವಾಮಿ ಬಳಗವನ್ನು ಬಂಧಿಸುವಂತೆ ಪ್ರತಿಭಟನೆಗಿಳಿದರು. ಬಂಧಿತ ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ಅಂಬರೀಷಂತೂ ಆರೋಪಿ ಸ್ವರ್ಣವಲ್ಲಿ ಸ್ವಾಮಿಯನ್ನು ಬಂಧಿಸುವಂತೆ ಆಗ್ರಹಿಸಿ ಜೈಲಲ್ಲೇ ಉಪವಾಸ ಸತ್ಯಾಗ್ರಹ ಕೂಡ ಮಾಡಿದರು.

ಉತ್ತರ ಕನ್ನಡದಲ್ಲಿ ಸ್ವರ್ಣವಲ್ಲಿ ಸ್ವಾಮಿ ಪರ ಸರಣಿ ಪ್ರತಿಭಟನೆಗಳು ನಡೆದರೆ ಅತ್ತ ಕೋಲಾರ-ಚಿಕ್ಕಬಳ್ಳಾಪುರದಲ್ಲಿ ಸ್ವಾಮಿಯ ಸೋಗಲಾಡಿತನದ ವಿರುದ್ಧ ಕೂಗೆದ್ದಿತು. ಸ್ವಾಮಿಯ 'ಮತಪ್ರಚಾರ'ದಿಂದ ಕೆರಳಿದ ಎಸ್‌ಎಫ್‌ಐ ಹೋರಾಟ ಅದೆಷ್ಟು ಪ್ರಬಲವಾಯ್ತೆಂದರೆ ಮಂತ್ರಿ ನಾರಾಯಣಸ್ವಾಮಿಯೇ ಪ್ಲೇಟು ಬದಲಿಸಿ "ಸ್ವರ್ಣವಲ್ಲಿ ಸ್ವಾಮಿ ಕಾನೂನು ಉಲ್ಲಂಘಿಸಿದ್ದಾರೆ" ಎಂದು ಹೇಳಿಕೆ ಕೊಡುವಂತಾಯ್ತು. ಅಷ್ಟೇ ಅಲ್ಲ ಜಿಲ್ಲಾಧಿಕಾರಿ ಮನೋಜ್‌ಕುಮಾರ್ "ಸ್ವರ್ಣವಲ್ಲಿ ಸ್ವಾಮಿ ವಿರುದ್ಧ ದಲಿತ ದೌರ್ಜನ್ಯದ ಕೇಸು ಹಾಕಲಾಗಿದೆ... ಆತನನ್ನು ಬಂಧಿಸುತ್ತೇವೆ" ಎಂದು ಹೇಳುವ ಪರಿಸ್ಥಿತಿ ಬಂತು! ಶಿಕ್ಷಣ ಇಲಾಖೆ ಕೋಲಾರ ಜಿಲ್ಲೆಯಲ್ಲಿ ಸ್ವಾಮಿಯ ಸರಣಿ 'ಗೀತಾಭಿಯಾನ'ವನ್ನು ಬ್ಯಾನ್ ಮಾಡಿ ಬಿಟ್ಟಿದೆ. ಈ ಅಪಮಾನ ಶಿರಸಿ ಸೀಮೆಯ ಸ್ವರ್ಣವಲ್ಲಿ ಸ್ವಾಮಿಯ ಶಿಷ್ಯ ವರ್ಗದಲ್ಲಿ ಪುರೋಹಿತಶಾಹಿ ಸ್ಪಿರಿಟ ಕೆರಳಿಸಿ ಬೀದಿಗಿಳಿಸಿಬಿಟ್ಟಿದೆ. ಪಾಪ!



ಸ್ವರ್ಣವಲ್ಲಿ ಸ್ವಾಮಿ ಮತ್ತವರ ಶಿಷ್ಯ ಕಂ ಶಿಕ್ಷಣ ಮಂತ್ರಿ ಕಾಗೇರಿ ಮಾಣಿಯ 'ಜಾಯಿಂಟ್ ವೆಂಚರ್' ಗೀತಾ ಅಭಿಯಾನ ಅವಾಂತರವು ಒಂದಿಷ್ಟು ಪ್ರಶ್ನೆಗಳನ್ನು ಎತ್ತಿದೆ. ಪ್ರಜಾಸತ್ತಾತ್ಮಕ ಗಣತಂತ್ರ ರಾಷ್ಟ್ರವಾದ ಭಾರತಕ್ಕೆ ಅದರ ಸಂವಿಧಾನವೇ ಧರ್ಮ! ಈ ಪ್ರಧಾನ ಧರ್ಮದ ನೀತಿ-ನಿಯಮದ ಚೌಕಟ್ಟಿನ ಒಳಗೇ ಇತರ 'ಧರ್ಮ-ಕರ್ಮ'ಗಳು ನಡೆಯಬೇಕು. ಸಂವಿಧಾನದ್ದು ಧರ್ಮ ನಿರಪೇಕ್ಷ ತತ್ವ. ಇದು ತ್ರಿಕಾಲಜ್ಞಾನಿಗಳಾದ ಸ್ವರ್ಣವಲ್ಲಿ ಸ್ವಾಮಿಗೆ ಗೊತ್ತಿಲ್ಲವಾ? ವಿವಿಧ ಮತ-ಧರ್ಮಗಳ ವಿದ್ಯಾರ್ಥಿಗಳಿರುವ ಶಿಕ್ಷಣ ಸಂಸ್ಥೆಗಳಲ್ಲಿ ಒಂದೇ ಮತ (ಹಿಂದೂ)ದ ಪ್ರವಚನ ನಡೆಸುವುದು ಅಪರಾಧವಲ್ಲವಾ? ಹಾಗೊಮ್ಮೆ ಹಿಂದೂ ಮಕ್ಕಳಿಗೆ 'ಗೀತೋಪದೇಶ' ಮಾಡಲೇಬೇಕೆಂಬ ಹಠ ಸ್ವರ್ಣವಲ್ಲಿ ಸ್ವಾಮಿ-ಕಾಗೇರಿ ಮಾಣಿಗಿದ್ದರೆ, ಅವರವರ ಮನೆ, ಮಠ, ಸಂಸ್ಕೃತ ಪಾಠಶಾಲೆಗಳಲ್ಲಿ ಈ 'ಧರ್ಮಕಾರ್ಯ' ಮಾಡಬಹುದಲ್ಲವಾ? ಈ ಸಂವಿಧಾನ ವಿರೋಧ ಭಗವದ್ಗೀತಾ ಅಭಿಯಾನ ಬಲವಂತ ಮತಾಂತರದ ಹುನ್ನಾರ ಅಲ್ಲವಾ?

ಇದೆಲ್ಲ ಗೊತ್ತಿದ್ದೂ ಚೆಡ್ಡಿ ಸರ್ಕಾರ-ಸ್ವರ್ಣವಲ್ಲಿ ಸ್ವಾಮಿ-ಮಂತ್ರಿ ಕಾಗೇರಿ ಮಾಣಿಗಳು ಬಹುಧರ್ಮೀಯ ವಿದ್ಯಾರ್ಥಿಗಳಿರುವಂಥ ಸರ್ಕಾರಿ ಶಿಕ್ಷಣ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಂಡು ಅಲ್ಲಿ ಹಿಂದೂಗಳ 'ಗೀತೆ' ಪಠಿಸುತ್ತಿರುವುದರ ಹಿಂದೆ ಶಿಕ್ಷಣ ಕೇಸರೀಕರಣ ಮಾಡುವ ಅನಾಹುತಕಾರಿ ಕಿತಾಪತಿ ಅಡಗಿರುವುದು ಎಂಥ ಗಾಂಪನಿಗೂ ಗೊತ್ತಾಗುತ್ತದೆ. ಭಗವದ್ಗೀತೆ ಓದುವವರಿಗೆ ಮತ್ತು ಅನುಸರಿಸುವವರಿಗೆ ಅದು ಖಾಸಗಿ ಸಂಗತಿ. ಇಂಥ 'ಗುಪ್ತ ಗೀತೆ'ಯನ್ನು ಸರ್ಕಾರಿ ಸೌಲಭ್ಯ-ಸವಲತ್ತು ಕೊಟ್ಟು ಮಠಾಧೀಶನೊಬ್ಬನಿಂದ ಶಾಲೆ-ಕಾಲೇಜಿನ ವಿದ್ಯಾರ್ಥಿಗಳಿಗೆ ಬಾಯಿಪಾಠ ಮಾಡಿಸುವುದು ಮರ್ಯಾದೆಗೇಡು. ರಾಜ್ಯದ ಶಾಲೆಗಳಲ್ಲಿ ಮೂಲಭೂತ ಸೌಲಭ್ಯಗಳೇ ಇಲ್ಲದೆ ವಿದ್ಯಾರ್ಥಿಗಳು ನರಳುತ್ತಿದ್ದಾರೆ. ಶೇಕಡ 58 ಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಶೌಚಾಲಯವಿಲ್ಲ. ಡೊನೇಷನ್-ಕ್ಯಾಪಿಟೇಶನ್ ಹಾವಳಿ ತಡೆಯಲು ಸರ್ಕಾರದಿಂದಾಗುತ್ತಿಲ್ಲ, ಚೆಡ್ಡಿ ಸರ್ಕಾರ ಈ ಜ್ವಲಂತ ಸಮಸ್ಯೆಗಳನ್ನೆಲ್ಲ ಕಡೆಗಣಿಸಿ ಶಾಲಾ-ಕಾಲೇಜುಗಳಲ್ಲಿ ಪುರೋಹಿತಶಾಹಿ ಶಿಕ್ಷಣ ಕೊಡಲು ಕರಾಮತ್ತು ನಡೆಸಿರುವುದು ಅಕ್ಷಮ್ಯವೇ ಸರಿ! ಸಂಘಪರಿವಾರದಲ್ಲಿ ಹಿಂದೂ ಹೀರೋ ಎಂಬ ಹೆಗ್ಗಳಿಕೆಗೆ ಹವಣಿಸುತ್ತಿರುವ ಕೇಸರಿ ಮೆದುಳಿನ ಕಾಗೇರಿ ಮಾಡಿಕೊಂಡಿರುವ ಲೇಟೆಸ್ಟ್ ಎಡವಟ್ಟು ಇದು!

• ನಹುಷ

ಮಂಡ್ಯ: ಹೆಣ್ಮಕ್ಕಳ ಮಾರಾಟ ಮಾಫಿಯಾಗೆ ಪೊಲೀಸರ ಸಾಥ್!

ಮಹಿಳೆಯರ ಮತ್ತು ಹೆಣ್ಣುಮಕ್ಕಳ ನಾಪತ್ತೆ ಪ್ರಕರಣಗಳು ಮಿತಿಮೀರಿವೆ. ಶಾಲೆಗೆ ಹೋಗುವ, ಕೆಲಸಕ್ಕೆ ಹೋಗುವ ಹೆಣ್ಣು ಮಕ್ಕಳು ಮತ್ತು ಮಹಿಳೆಯರು ಮನೆಗೆ ಹಿಂತಿರುಗಿ ಬರುವ ಖಾತರಿ ಇಲ್ಲ. ಮಹಿಳೆಯರ ಮಾನ, ಪ್ರಾಣಕ್ಕೆ ಇಲ್ಲಿ ರಕ್ಷಣೆಯೇ ಇಲ್ಲದಾಗಿದೆ. ಇವುಗಳ ಹಿಂದಿರುವವರು ಯಾರೆಂಬುದು ಪೊಲೀಸರಿಗೆ ಚೆನ್ನಾಗಿಯೇ ಗೊತ್ತಿದೆ. ಆದರೆ ಪೊಲೀಸ್ ಅಧಿಕಾರಿಗಳಿಗೆ ಹಣ ಕೊಟ್ಟರೆ ಇಂತಹ ಎಲ್ಲ ಪ್ರಕರಣಗಳ ದಿಕ್ಕುತಪ್ಪಿಸಿ ಆರೋಪಿಗಳ ರಕ್ಷಣೆಗೆ ನಿಲ್ಲುತ್ತಿದ್ದಾರೆ. ಇದೆಲ್ಲದರ ಮಧ್ಯೆ ಉನ್ನತ ಪೊಲೀಸ್ ಅಧಿಕಾರಿಗಳು 'ಜಿಲ್ಲೆಯಲ್ಲಿ ಅಪರಾಧ ನಿಯಂತ್ರಣದಲ್ಲಿದೆ, ಕ್ರೈಂ ರೇಟ್ ಕಡಿಮೆಯಾಗುತ್ತಿದೆ' ಅಂತೆಲ್ಲಾ ಕಥೆ ಕಟ್ಟುತ್ತಿರುತ್ತಾರೆ. ಇದು ರಾಜ್ಯದ ಗೃಹ ಮಂತ್ರಿ ಆರ್.ಅಶೋಕ್ ಮಹಾಶಯರು ಉಸ್ತುವಾರಿ ಹೊತ್ತಿರುವ ಮಂಡ್ಯ ಜಿಲ್ಲೆಯಲ್ಲಿ ನಡೆಯುತ್ತಿರುವ ಪ್ರಸ್ತುತ ವಿದ್ಯಮಾನ.

ಇತ್ತೀಚೆಗೆ ನಡೆದ ಒಂದು ಪ್ರಕರಣ ಹೀಗಿದೆ: ಮಂಡ್ಯ ತಾಲ್ಲೂಕಿನ ಮಲ್ಲಯ್ಯನದೊಡ್ಡಿ ಗ್ರಾಮದ ದಾಸಯ್ಯ ಮತ್ತು ರತ್ನಮ್ಮ ಎಂಬುವವರ ಪುತ್ರಿಯ ಹೆಸರು ಸುಮಾ. ಹದಿನಾರು ವರ್ಷ ವಯಸ್ಸಿನ ಈಕೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಿರುವ ಯುವತಿ. ಸುಮಾ ಏಪ್ರಿಲ್ 14ರಂದು ನಾಪತ್ತೆಯಾದವಳು ಇವತ್ತಿಗೂ ಪತ್ತೆಯಾಗಿಲ್ಲ. ಅವತ್ತು ಸರಸ್ವತಿ ಪೂಜೆಗೆಂದು ಸುಮಾ ಇದೇ ಗ್ರಾಮದ ಅಂಜಲಿಯ ಜೊತೆ ಹನಕೆರೆ ಪ್ರೌಢಶಾಲೆಗೆ ಹೋಗಿದ್ದಳು. ಆದರೆ ಅಂಜಲಿ ಮನೆಗೆ ವಾಪಸ್ ಬಂದರೂ ಸುಮಾ ಮತ್ತೆ ಮನೆಗೆ ಬರಲಿಲ್ಲ.

ಮನೆಗೆ ವಾಪಸಾಗಿರುವ ಅಂಜಲಿಯನ್ನು ಸುಮಾಳ ತಂದೆ ತಾಯಿ ವಿಚಾರಿಸಿದಾಗ ಆಕೆ ಯಾವ ಮಾಹಿತಿಯನ್ನೂ ನೀಡಲಿಲ್ಲ. ಆಗ ಸುಮಾ ತಮ್ಮ ನೆಂಟರ ಮನೆಗೆ ಹೋಗಿರಬಹುದೆಂದು ಭಾವಿಸಿ ದಾಸಯ್ಯ ಕುಟುಂಬ ನೆಂಟರಿಷ್ಟರ ಮನೆಯಲ್ಲೆಲ್ಲಾ ಹುಡುಕಾಡಿತು. ಮೂರ್ನಾಲ್ಕು ದಿನಗಳಾದರೂ ಮಗಳು ಪತ್ತೆಯಾಗಲಿಲ್ಲ. ಈ ಮಧ್ಯೆ ವಿಕಾಸ್ ಎಂಬಾತ ತಮ್ಮ ಮಗಳ ಪರಿಚಯ ಮಾಡಿಕೊಂಡಿದ್ದ ಎಂದು ಗೊತ್ತಾಗಿ ಆಕೆಯ ನಾಪತ್ತೆ ಹಿಂದೆ ಆತನ ಕೈವಾಡವಿರಬೇಕೆಂದು ಭಾವಿಸಿದರು. ಕೊನೆಗೆ ದಾಸಯ್ಯ ಕುಟುಂಬ ಈ ಬಗ್ಗೆ ಮಂಡ್ಯದ ಗ್ರಾಮಾಂತರ ಠಾಣೆಯ ಎಸ್‌ಐ ಬಾಲಕೃಷ್ಣರ ಬಳಿ ಬಂದು ಘಟನೆಯನ್ನು ವಿವರಿಸಿ ವಿಕಾಸ್ ಎಂಬಾತ ತಮ್ಮ ಮಗಳನ್ನು ಅಪಹರಣ ಮಾಡಿದ್ದಾನೆ ಎಂದು ದೂರು ನೀಡಿತು. ಆದರೆ ಇದನ್ನು ಅಪಹರಣ ಎಂದು ದಾಖಲಿಸಿಕೊಳ್ಳದ ಬಾಲಕೃಷ್ಣ ಇದನ್ನು ಕೇವಲ ಒಂದು 'ಕಾಣೆ' ಪ್ರಕರಣವನ್ನಾಗಿ ದಾಖಲಿಸಿಕೊಂಡದ್ದಲ್ಲದೆ ದಾಸಯ್ಯನಿಂದ ಹಣಕಿತ್ತುಕೊಂಡು ಅವರನ್ನು ವಾಪಸ್ಸು ಕಳುಹಿಸಿದ.




ಚೆನ್ನಬಸಣ್ಣ

ಇಲ್ಲಿಗೆ ಈ ಪ್ರಕರಣ ನಡೆದು ಒಂದೂವರೆ ತಿಂಗಳಾದರೂ ಬಾಲಕೃಷ್ಣ ಈ ಬಗ್ಗೆ ಕನಿಷ್ಠ ಎಫ್.ಐ.ಆರ್.ನ್ನೂ ದಾಖಲಿಸಿಕೊಂಡಿಲ್ಲ. ಆದರೆ ವಿಕಾಸ್ ಮೇಲೆ ದೂರು ನೀಡಿದ್ದರ ವಾಸನೆ ಹಿಡಿದ ಆತನ ತಾಯಿ ಹಳೆಬೂದನೂರಿನ ಲಲಿತ ಎಂಬಾಕೆ ದಾಸಯ್ಯ ಮತ್ತು ರತ್ನಮ್ಮ ಜೀವನೋಪಾಯಕ್ಕಾಗಿ ನಡೆಸುತ್ತಿದ್ದ ಪುಟ್ಟ ಹೋಟೆಲ್‌ಗೆ ಹೋಗಿ ತನ್ನ ಮಗನ ವಿರುದ್ಧದ ದೂರನ್ನು ವಾಪಸ್ ತೆಗೆದುಕೊಳ್ಳುವಂತೆ ಧಮಕಿ ಹಾಕಿದ್ದಾಳೆ. ಮಡಿವಾಳ ಸಮುದಾಯದ ದಾಸಯ್ಯ ಒಕ್ಕಲಿಗ ಸಮುದಾಯದ ಲಲಿತಾಳ ಮಾತಿಗೆ ಭಯಗೊಂಡು ಮೌನವಾಗಿದ್ದಾರೆ.

ಇಷ್ಟು ದಿನಗಳಾದರೂ ಪೊಲೀಸ್ ಇಲಾಖೆಯ ಯಾವ ಅಧಿಕಾರಿಗಳೂ ಈ ಪ್ರಕರಣದತ್ತ ತಲೆಯನ್ನೇ ಹಾಕಿಲ್ಲ. ಈ ಮಧ್ಯೆ ಅದ್ಯಾವುದೋ ಪ್ರಕರಣಕ್ಕೆ ಸಂಬಂಧಿಸಿದಂತೆ ಮಲ್ಲಯ್ಯನದೊಡ್ಡಿಗೆ ಹೋಗಿದ್ದ ಎಸ್‌ಐ ಬಾಲಕೃಷ್ಣ ಮತ್ತೆ ದಾಸಯ್ಯನಿಂದ ಹಣ ಕಿತ್ತುಕೊಂಡು ಬಂದಿದ್ದಾನಷ್ಟೆ. ಪರಿಣಾಮವಾಗಿ ದಾಸಯ್ಯ ನೀಡಿದ್ದ ದೂರು ಮಾತ್ರ ದೂರಾಗೆ ಉಳಿದಿದೆ.

ಗ್ರಾಮಾಂತರ ಠಾಣೆಯ ಬಾಲಕೃಷ್ಣ ಎಂತಹ ಕಡುಭ್ರಷ್ಟ ಅಂದರೆ ಠಾಣೆಗೆ ಬರುವ ಪ್ರತಿ ದೂರನ್ನು




ಸುಮಾ

ದಾಖಲಿಸಿಕೊಳ್ಳಲೂ ಲಂಚನೀಡಬೇಕೆಂದು ಕೈಯೊಡ್ಡುತ್ತಾನೆ. ಈ ಠಾಣೆಯಲ್ಲಿ ಈತನಷ್ಟೇ ಅಲ್ಲ, ಎಲ್ಲ ಪೊಲೀಸಪ್ಪಗಳೂ ಎಸ್‌ಐ ಬಾಲಕೃಷ್ಣನನ್ನು ಮೀರಿಸುತ್ತಾರೆ. ಟೋಟಲೀ ಈ ಠಾಣೆಯೇ ಕೆಟ್ಟು ಕೆರಹಿಡಿದು ಹೋಗಿದೆ. ಇಂತಹ ಪರಿಸ್ಥಿತಿಯಲ್ಲಿ ದಾಸಯ್ಯನ ಕುಟುಂಬಕ್ಕೆ ನ್ಯಾಯವಾದರೂ ಹೇಗೆ ಸಿಕ್ಕೀತು?

ಇಂತಹ ಭ್ರಷ್ಟ ವಾತಾವರಣದ ನಡುವೆಯೇ ಮಹತ್ವದ್ದೊಂದು ಘಟನೆ ನಡೆಯಿತು. ಸುಮಾ ನಾಪತ್ತೆಯಾಗಿದ್ದಾಳೆಂದು ದೂರು ನೀಡಿದ ನಂತರ ದಾಸಯ್ಯನವರ ಬಾಮೈದ ರಾಜಪ್ಪಾಜಿಯ ಮೊಬೈಲ್‌ಗೆ 07388510886 ನಂಬರ್‌ನಿಂದ ಕರೆ ಒಂದು ಬಂದಿತು. ಆಗ ಮಾತನಾಡಿದ ಸುಮಾ ತನ್ನನ್ನು ರೂಮೊಂದರಲ್ಲಿ ಕೂಡಿಹಾಕಲಾಗಿದ್ದು ತನ್ನನ್ನು ಬಿಡಿಸಿಕೊಂಡು ಹೋಗುವಂತೆ ಅಂಗಲಾಚಿದಳು. ಅಷ್ಟರಲ್ಲಿ ಸುಮಾಳ ಕೈಯಿಂದ ಮೊಬೈಲನ್ನ ಯಾರೋ ಕಿತ್ತುಕೊಂಡರು. ಈ ಬಗ್ಗೆ ರಾಜಪ್ಪಾಜಿ ಮತ್ತು ದಾಸಯ್ಯ ಕುಟುಂಬ ಎಸ್ಸೈ ಬಾಲಕೃಷ್ಣನಿಗೆ ತಿಳಿಸಿತು. ಇದಾದ ಎರಡು ದಿನಕ್ಕೆ ಇದು ಉತ್ತರಪ್ರದೇಶದಿಂದ ಬಂದ ಕರೆ ಎಂದ ಪೊಲೀಸರು ಆನಂತರ ಕೈತೊಳೆದುಕೊಂಡು ಸುಮ್ಮನಾದರು.

ಇದನ್ನು ನೋಡಿ ಆತಂಕಗೊಂಡ ದಾಸಯ್ಯ ಈ ವಿಚಾರದ ಬಗ್ಗೆ ಜನವಾದಿ ಮಹಿಳಾ ಸಂಘಟನೆಯ ಕುಮಾರಿ ಮತ್ತು ದೇವಿ ಎಂಬುವವರಿಗೆ ತಿಳಿಸಿದರು. ಆಗ ವಿಕಾಸ್ ಮತ್ತು ಆತನ ನಾಲ್ವರು ಸ್ನೇಹಿತರು ಸುಮಾಳಿಗೆ ಏ.14ರಂದು ಹನಕೆರೆಯ ಗೇಟ್ ಬಳಿ ಜ್ಯೂಸ್ ಕುಡಿಸುತ್ತಿದ್ದದ್ದನ್ನು ನೋಡಿದ್ದ ಶೇಖರ್ ಎಂಬುವರು ಜನವಾದಿ ಮಹಿಳಾ ಸಂಘಟನೆಗೆ ಸಾಥ್ ನೀಡಿದರು. ಸುಮಾ ಉತ್ತರಪ್ರದೇಶಕ್ಕೆ ಮಾರಾಟವಾಗಿದ್ದಾಳೆ ಅಥವಾ ವೇಶ್ಯಾವಾಟಿಕೆಗೆ ದೂಕಲ್ಪಟ್ಟಿದ್ದಾಳೆ ಎಂಬ ಅನುಮಾನಗಳು ಬಲವಾಗುತ್ತಿದ್ದಂತೆ ಜನವಾದಿ ಸಂಘಟನೆಯ ಮುಖಂಡರು ನೇರವಾಗಿ ಡಿವೈಎಸ್‌ಪಿ ಚನ್ನಬಸವಣ್ಣನವರಿಗೆ ಮುತ್ತಿಗೆ ಹಾಕಿದರು. ತನಗೆ ನಾಲ್ಕು ದಿನಗಳ ಸಮಯಕೊಡಿ ಎಂದು ಕೇಳಿಕೊಂಡ ಚನ್ನಬಸವಣ್ಣ ಪೊಲೀಸ್ ಇಲಾಖೆಯಿಂದ ನಡೆದಿರುವ ಲೋಪವನ್ನ ಒಪ್ಪಿಕೊಂಡರು.



ಬಾಲಕೃಷ್ಣ

ಅಸಲಿ ವಿಚಾರ ಏನೆಂದರೆ ವಿಕಾಸ್ ಎನ್ನುವವ ಹಳೆಬೂದನೂರಿನ ಲಲಿತಾಳ ಎಂಬಾಕೆಯ ಮಗ. ಈಕೆ ತಾನು ಬೆಂಗಳೂರಿನಲ್ಲಿ ಅದ್ಯಾವುದೋ ಕೆಲಸ ಮಾಡುತ್ತಿದ್ದೇನೆ ಎಂದು ಹೇಳುತ್ತಾಳೆ. ಆದರೆ ತನ್ನ ಗಂಡ ಸತ್ತ ಬಳಿಕ ಈಕೆ ಅಡ್ಡಹಾದಿ ಹಿಡಿದಿದ್ದಾಳೆ ಎಂಬ ಸುದ್ದಿ ಇದೆ. ಇದರ ಸುಳಿವು ಹಿಡಿದು ಆಕೆಯ ಬೆನ್ನುಹತ್ತಿದ ಪೊಲೀಸರ ತಂಡ ಆಕೆಯ ಜನ್ಮವನ್ನು ಜಾಲಾಡಿದ್ದಾರೆ. ಆಗ ಈಕೆ ತಲೆಹಿಡುಕಿ ಎನ್ನುವುದು ಮತ್ತು ಈಕೆಯ ಕುಲಪುತ್ರ ವಿಕಾಸ್ ಇದೇ ದಂಧೆಕೋರ ಎಂಬುದು ದಿಟವಾಗಿದೆ.



ಕುಶಾಲೇಂದ್ರ ಕುಮಾರ್

ಇದೆಲ್ಲಕ್ಕೆ ಪುಷ್ಟಿ ನೀಡುವಂತೆ ಬೂದನೂರು ಮತ್ತು ಕೆರಗೂಡಿನಲ್ಲಿರುವ ಲಲಿತಾ ಮತ್ತು ಈಕೆಯ ಸಹೋದರಿ ಸುನಿತಾಳ ಬ್ಯಾಂಕ್ ಅಕೌಂಟುಗಳಿಗೆ ಲಕ್ಷಗಟ್ಟಲೇ ಹಣ ಬಂದಿರುವುದು ಪತ್ತೆಯಾಗಿದೆ. ತಲೆ ಹಿಡುಕ ವಿಕಾಸ್ ಸುಮಾಳ ಸ್ನೇಹ ಬೆಳೆಸಲಿಕ್ಕಾಗಿ ಆಗಾಗ ಆಕೆಯ ತಂದೆ ನಡೆಸುತ್ತಿದ್ದ ಹೋಟೆಲ್‌ಗೆ ಬಂದು ಟೀ ಕುಡಿದು 100, 500 ನೋಟುಗಳನ್ನು ಕೊಟ್ಟು ಚಿಲ್ಲರೆ ಪಡೆಯದೇ ಹೋಗುತ್ತಿದ್ದದ್ದೂ ಗೊತ್ತಾಗಿದೆ. ಇದೆಲ್ಲದರಿಂದ ಈತ ಪಕ್ಕಾ ತಲೆಹಿಡುಕನೆಂಬುದು ಸಾಬೀತಾಗಿದೆ.

ಇದಕ್ಕೆ ಸರಿಯಾಗಿ ಬೂದನೂರಿನ ಸುತ್ತಮುತ್ತಲಿನ ಹಳ್ಳಿಗಳಿಂದಲೂ ಹತ್ತಾರು ಮಹಿಳೆಯರು ನಾಪತ್ತೆಯಾಗಿರುವುದು ದೃಢಪಟ್ಟಿದೆ. ಈ ಎಲ್ಲಾ ಪ್ರಕರಣಗಳಲ್ಲೂ ವಿಕಾಸನ ತಾಯಿ ಲಲಿತಾಳ ಕೈವಾಡವಿರುವ ಗುಮಾನಿ ಈಗ ದಟ್ಟವಾಗಿದೆ. ಆಕೆ ಎಸ್ಸೈ ಬಾಲಕೃಷ್ಣನನ್ನು ಭೇಟಿಯಾಗಿ ಆತನ ಕೈ ಬಿಸಿ ಮಾಡಿದ್ದಾಳೆನ್ನುವ ಸುದ್ದಿ ಪೊಲೀಸ್ ಇಲಾಖೆಯೊಳಗೇ ಹರಿದಾಡುತ್ತಿದೆ.

ಇಷ್ಟೇ ಅಲ್ಲದೇ ಸಿಎಂ ಯಡ್ಡಿಯ ತವರೂರಾದ ಬೂಕನಕೆರೆಯ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಕಳೆದ ಮೂರು ತಿಂಗಳಲ್ಲಿ ಎಂಟು ಮಹಿಳೆಯರು ನಾಪತ್ತೆಯಾಗಿದ್ದಾರೆ. ಇಲ್ಲಿ ಮಾನವ ಸಾಗಣೆಕೆಯ ರ್‍ಯಾಕೆಟ್ ಬಲವಾಗಿದೆ. ತೀರಾ ಹಿಂದುಳಿದ ಕೆ.ಆರ್.ಪೇಟೆ ತಾಲೂಕಿನಲ್ಲಿ ಮಹಿಳೆಯರನ್ನು ಬಾಂಬೆಗೆ ಮಾರಾಟ ಮಾಡುವ ದೊಡ್ಡ ಜಾಲವೇ ಇದೆ. ಇದೆಲ್ಲದರ ಹಿಂದೆ ಇರುವಾತ ರಾಜೇನಹಳ್ಳಿಯ ಯೋಗೀಶ್ ಬಿನ್ ಶಿವೇಗೌಡ ಎಂಬ ದೊಡ್ಡ ತಲೆಹಿಡುಕ. ಆತನ ಅಕ್ಕ ಮಂಗಳ ಸೇರಿದಂತೆ ಆತನ ಇಡೀ ಕುಟುಂಬವೇ ಈ ದಂಧೆಯಲ್ಲಿ ತೊಡಗಿದೆ. ತಲೆಹಿಡುಕ ಯೋಗೀಶ ಹಲವಾರು ಮಹಿಳೆಯರ ವಿಶ್ವಾಸಗಳಿಸುತ್ತಾ ಅವರನ್ನು ಇದ್ದಕ್ಕಿದ್ದಂತೆ ನಾಪತ್ತೆ ಮಾಡುತ್ತಿದ್ದಾನೆ. ಈ ದಂಧೆ ಕಳೆದ ಹಲವಾರು ವರ್ಷಗಳಿಂದ ನಡೆಯುತ್ತಾ ಬಂದಿದ್ದರೂ ಈತನನ್ನು ಹುಡುಕಿ ಒಂದುಗತಿ ಕಾಣಿಸುವ ಛಾತಿ ಪೋಲೀಸ್ ಇಲಾಖೆಗೆ ಇದ್ದಂತಿಲ್ಲ.

ಮದ್ದೂರು ತಾಲ್ಲೂಕಿನಲ್ಲಂತೂ ಮಹಿಳೆಯರ ಕೊಲೆಗಳು ಮಿತಿಮೀರಿವೆ. ಸೋಮನಹಳ್ಳಿಯ ಅನಿತಾ ಎಂಬಾಕೆ ಮೊನ್ನೆ ಅತ್ಯಾಚಾರಕ್ಕೊಳಗಾಗಿ ಕೊಲೆಯಾದಳು. ಮದ್ದೂರಿನ ಲಾಡ್ಜ್‌ಗಳಲ್ಲಿ ಹಲವಾರು ಅತ್ಯಾಚಾರ ಮತ್ತು ಕೊಲೆಗಳು ನಡೆಯುತ್ತಿದ್ದರೂ ಯಾವೊಬ್ಬ ಕ್ರಿಮಿನಲ್‌ಗಳೂ ಪತ್ತೆಯಾಗುತ್ತಿಲ್ಲ. ಹಡಹಳ್ಳಿಯಲ್ಲಿ ಮಾರಾಟ ದಂಧೆಕೋರರಿಂದ ನಡೆದ ವಿದ್ಯಾರ್ಥಿನಿಯ ಕೊಲೆ ಕೇಸನ್ನು ಸ್ವತಃ ಸಿಪಿಐ ಪ್ರಶಾಂತ್ ದಿಕ್ಕುತಪ್ಪಿಸಿದ್ದಾನೆ. ಈತ ಪಕ್ಕಾ ವಸೂಲಿ ಗಿರಾಕಿಯಾಗಿದ್ದು ಮದ್ದೂರಿನ ತುಂಬಾ ಈತನ ಹಾವಳಿಗಳು ಹೇಳತೀರದಾಗಿವೆ.

ಇಷ್ಟೆಲ್ಲಾ ನಡೆಯುತ್ತಿದ್ದರೂ ರಾಜ್ಯದ ಗೃಹ ಸಚಿವರಾದ, ಮಂಡ್ಯ ಜಿಲ್ಲಾ ಉಸ್ತುವಾರಿ ಹೊತ್ತಿರುವ ಆರ್.ಅಶೋಕ್ ಮಾತ್ರ ಇತ್ತ ಸುಳಿಯುತ್ತಲೂ ಇಲ್ಲ. ಜಿಲ್ಲೆಯಲ್ಲಿ ಅಪರಾಧಗಳ ಪ್ರಮಾಣ ದಿನದಿಂದ ದಿನಕ್ಕೆ ಏರುತ್ತಿದ್ದರೂ ಜಿಲ್ಲೆಯಲ್ಲಿ ಕ್ರೈಂ ರೇಟ್ ಕಡಿಮೆಯಾಗುತ್ತಿದೆ ಎಂದು ಪತ್ರಿಕಾಗೋಷ್ಠಿ ನಡೆಸುವ ಎಸ್‌ಪಿ ಕೌಶಲೇಂದ್ರ ಕುಮಾರ್ ಹೇಗೆ ಅಪರಾಧಗಳು ಕಡಿಮೆಯಾಗುತ್ತಿವೆ ಎಂಬುದಕ್ಕೆ ಉತ್ತರ ಕೊಡಬೇಕಿದೆ. ತಕ್ಷಣ ಕಾರ್ಯಾಚರಣೆಯನ್ನು ತೀವ್ರಗೊಳಿಸಿ ಸುಮಾಳನ್ನು ರಕ್ಷಿಸಿ, ತಲೆಹಿಡುಕ ವಿಕಾಸ್ ಮತ್ತು ಆತನ ದುಷ್ಟ ತಾಯಿ ಲಲಿತಾ ಹಾಗೂ ಇವರ ಜಾಲದಲ್ಲಿರುವ ಇತರೆ ದಂಧೆಕೋರರಿಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳುವ ಹೊಣೆ ದಕ್ಷ ಡಿವೈಎಸ್‌ಪಿ ಚನ್ನಬಸವಣ್ಣನವರ ಮೇಲಿದೆ.

• ಲಕ್ಷ್ಮಣ್ ಚೀರನಹಳ್ಳಿ

ಆನೇಕಲ್ ಬಿಜೆಪಿ ನಾಯಕನ ಹತ್ಯೆಯ ಹಿಂದೆ


ಸಾವು ಅದೆಲ್ಲಿ ಹೊಂಚಿ ಕುಳಿತಿತ್ತೋ? ರಾತ್ರಿ ಕತ್ತಲಲ್ಲಿ ಏನೋ ಕದಲಿದಂತಾಗಿ ತಿರುಗಿ ನೋಡುತ್ತಿದ್ದಂತೆಯೇ ಐದಾರು ಮಂದಿ ಪಡ್ಡೆ ಹುಡುಗರು ಸುತ್ತುವರೆದಿದ್ದೇ ಲಾಂಗ್ ಬೀಸಿದ್ದಾರೆ. ತಲೆ, ಮುಖ, ಕತ್ತು, ಎದೆ, ಹೊಟ್ಟೆ, ಕಾಲು ಯಾವುದನ್ನೂ ಬಿಡದೇ ಹುಡುಗರು ಹಿಡಿದು ಕತ್ತರಿಸುತ್ತಿದ್ದರೆ, ಗೋಪಾಲಕೃಷ್ಣ ಕಿಮಕ್ಕೆನ್ನದೇ ಹೆಣವಾಗಿ ಬಿದ್ದಿದ್ದ. ಕೊಂದವನು ಉಳಿಯಲಾರ ಎಂಬ ಭೂಗತಲೋಕದ ಜನ್ಮಸಿದ್ಧ ಕಟ್ಟಳೆಗೆ ಗೋಪಾಲಕೃಷ್ಣನೂ ಸೇರ್ಪಡೆಯಾಗಿ ಹೋಗಿದ್ದ!

• ರಾ.ಸೋಮನಾಥ್



ಹಂತಕ ಪ್ರಸನ್ನ

ರಿಯಲ್ ಎಸ್ಟೇಟ್‌ನ ಪಾಪ ಹೆಚ್ಚಿದಂತೆಲ್ಲ ನೆಲ ರಕ್ತ ಕುಡಿಯುತ್ತದೆ. ಆದರೆ ಸಮಾಜ ಕಲ್ಯಾಣ ಮಂತ್ರಿ ನಾರಾಯಣ ಸ್ವಾಮಿಯವರ ಆನೇಕಲ್‌ನ ಮಟ್ಟಿಗೆ ಇದಕ್ಕೆ ಜಿಗಣಿ ಇಂಡಸ್ಟ್ರಿಯಲ್ ಏರಿಯಾದ ದುಷ್ಟ ಚಾಳಿಯೂ ಕೈಜೋಡಿಸುತ್ತದೆ.



2010 ಅಕ್ಟೋಬರ್‌ನಲ್ಲಿ ಕೊಲೆಯಾದ ಚಿಟ್ಟಿ

ಮೊನ್ನೆ ಜುಲೈ 10ರ ರಾತ್ರಿ ತನ್ನ ಮನೆಯೆದುರೇ ಭೀಕರವಾಗಿ ಕೊಲೆಯಾದ ಬಿಜೆಪಿ ನಾಯಕ ಗೋಪಾಲಕೃಷ್ಣ ಈ ಪ್ರವೃತ್ತಿಯ ಎರಡನೇ ಬಲಿ!

ಮೊದಲು ಜೆಡಿಎಸ್ ನಾಯಕ ಚಿಟ್ಟಿ ಉರ್ಫ್ ಕುಮಾರಸ್ವಾಮಿ ಕೊಲೆಯಾದ. ಈಗ ಗೋಪಾಲಕೃಷ್ಣನನ್ನು ಚಿಟ್ಟಿಯ ಶಿಷ್ಯರು ಕೊಂದು ಮುಗಿಸಿದ್ದಾರೆ. ಕೊಂದವರೆಲ್ಲ ಇಪ್ಪತ್ತನ್ನೂ ಮೀರದ ಪಡ್ಡೆ ಹುಡುಗರು. ಚಿಟ್ಟಿಯಂತೆ ಬಿಜೆಪಿ ನಾಯಕ ಗೋಪಾಲಕೃಷ್ಣನೂ ಅನಾದಿಕಾಲದ ರೌಡಿಯೇ. ಜಿಗಣಿ ಇಂಡಸ್ಟ್ರಿಯಲ್ ಏರಿಯಾದಿಂದ ಹುಟ್ಟುವ ರೋಲ್‌ಕಾಲ್ ಮತ್ತು ಕಂಡೋರ ಸೈಟಿಗೆ ಕಾಂಪೌಂಡ್ ಹಾಕುವ ಹೀನಚಾಳಿ ಬೆಂಗಳೂರು ಸೆರಗಿನ ಆನೇಕಲ್, ಹೊಸೂರು ರಸ್ತೆ, ಜಿಗಣಿ ಕೈಗಾರಿಕಾ ಪ್ರದೇಶ, ಹೆಬ್ಬಗೋಡಿ, ಸರ್ಜಾಪುರ ಇತ್ಯಾದಿ ಏರಿಯಾಗಳನ್ನು ಎಂಥ ಅಪಾಯಕಾರಿ ಹಂತಕ್ಕೆ ತಂದಿಟ್ಟಿವೆ ಎಂಬುದಕ್ಕೆ ಗೋಪಾಲಕೃಷ್ಣನ ಕಗ್ಗೊಲೆಯೊಂದೇ ಸಾಕು.



ಚಿಟ್ಟಿ ಕೊಲೆಯಾದ ಸ್ಥಳ



ಚಿಟ್ಟಿ

ಜುಲೈ 10ರ ರಾತ್ರಿ ಜಿಗಣಿಯ ನಿರ್ಮಾಣ್ ಶೆಲ್ಟರ್ಸ್‌ನವರ ನಿಸರ್ಗ ಲೇಔಟ್‌ನ ತನ್ನ ಮನೆಯಿಂದ ಹೊರಬಿದ್ದು ನಿತ್ಯಾನಂದ ಸ್ಕೂಲ್ ಬಳಿಯಿದ್ದ ತನ್ನ ತಮ್ಮ ಶಿವರಾಮ್‌ನನ್ನು ಮಾತಾಡಿಸಲೆಂದು ಗೋಪಾಲಕೃಷ್ಣ ಏನಕ್ಕೋ ತನ್ನ ಗಾಡಿ ನಿಲ್ಲಿಸಿದ್ದಾನೆ. ಮೊಬೈಲ್‌ನಲ್ಲಿ ಏನೋ ಮಾತಾಡಲಾರಂಭಿಸುತ್ತಿದ್ದಂತೆ ಅದೆಲ್ಲಿದ್ದರೋ ಇದ್ದಕ್ಕಿದ್ದಂತೆ ಐದಾರು ಮಂದಿ ಹಂತಕರು ಉದ್ದದ ಲಾಂಗ್‌ಗಳಿಂದ ಗೋಪಾಲಕೃಷ್ಣನನ್ನು ಕತ್ತರಿಸಲಾರಂಭಿಸಿದ್ದಾರೆ. ಅರೆಕ್ಷಣದಲ್ಲೇ ಹೆಣವಾಗಿದ್ದಾನೆ ಗೋಪಾಲಕೃಷ್ಣ. ವಯಸ್ಸು ಬೇರೆ ಐವತ್ತಾಗಿತ್ತಲ್ಲ; ಕತ್ತರಿಸಿದ ಲಾಂಗೇಟುಗಳನ್ನು ತಾಳುವ ಜೀವವಲ್ಲ.

ಮಾಮೂಲು ಗುಮಾಸ್ತ

ಇಷ್ಟಾಗಿದ್ದೇ ಜಿಗಣಿ ಇಂಡಸ್ಟ್ರಿಯಲ್ ಏರಿಯಾ, ಹೊಸೂರು ರಸ್ತೆ ಮತ್ತು ನಟೋರಿಯಸ್ ಎಪಿಸಿ ಸರ್ಕಲ್‌ನಲ್ಲಿ ಅಘೋಷಿತ ಬಂದ್. ಆನೇಕಲ್‌ನ ಸಮಸ್ತ ಬಿಜೆಪಿ ಪಾಳಯವೇ ತತ್ತರಿಸಿ ಹೋಗಿದೆ. ಅತ್ತ ಬನ್ನೇರುಘಟ್ಟದ ಗೊಟ್ಟಿಗೆರೆ ಮಂಜನ ಅಡ್ಡೆಯಲ್ಲೂ ಮೌನ ಆವರಿಸಿತ್ತು, ಅದು ಮಂಜನ ಬಲಗೈ ಬಂಟ ಚಿಟ್ಟಿ ಅಲಿಯಾಸ್ ಕುಮಾರಸ್ವಾಮಿಯ ಹತ್ಯೆಗೆ ಪ್ರತೀಕಾರವಾಗಿ ನಡೆದ ಮೊದಲ ಕೊಲೆಯಾಗಿತ್ತು. ಜಿಗಣಿ ನಿಸರ್ಗ ಲೇಔಟಿನ ಗೋಪಾಲಕೃಷ್ಣ ಆನೇಕಲ್ ಮಟ್ಟಿಗೆ ಬಿಜೆಪಿಯ ಆಧಾರಸ್ತಂಭವಲ್ಲದಿದ್ದರೂ ಮಂತ್ರಿ ನಾರಾಯಣಸ್ವಾಮಿ ಪಾಲಿಗೆ ನಗಣ್ಯನೇನಲ್ಲ. ಮೊದಲು ಕಾಂಗ್ರೆಸ್‌ನಲ್ಲಿದ್ದ. ಕೆಲಕಾಲ ಜೆಡಿಎಸ್ ಪಾಳಯದಲ್ಲೂ ಓಡಾಡಿಕೊಂಡಿದ್ದ. ಬಿಜೆಪಿಗೆ ಅಧಿಕಾರ ಗಿಟ್ಟುತ್ತದೆ ಎಂದು ಗೊತ್ತಾಗಿದ್ದೇ ಆನೇಕಲ್ ಶಾಸಕ ನಾರಾಯಣಸ್ವಾಮಿಗೆ ಶರಣಾದ.



ಚಿಟ್ಟಿಯ ಪತ್ನಿ

ಮೊದಮೊದಲಿಗೆ ಕೇಶವ ಮೂರ್ತಿಗೆ ಪರಮಾಪ್ತನಂತೆ ಕಾಂಗ್ರೆಸ್‌ನಲ್ಲಿದ್ದ ಗೋಪಾಲಕೃಷ್ಣ 1993ರ ಹೊತ್ತಿಗೆ ತಾನು ಗುಮಾಸ್ತನಾಗಿದ್ದ ನಿತ್ಯಾನಂದ ಪ್ರೌಢಶಾಲೆಯ ಕೆಲಸ ಬಿಟ್ಟು ಫುಲ್‌ಟೈಂ ರಾಜಕೀಯಕ್ಕಿಳಿದ. ಜಾತಿಯಲ್ಲಿ ನಾಯಕ. ಜಿಗಣಿ ಗ್ರಾಮ ಪಂಚಾಯತಿಗೆ ತನ್ನ ಪತ್ನಿ ಪ್ರಮೀಳಾಳನ್ನೇ ನಿಲ್ಲಿಸಿ ಗೆಲ್ಲಿಸಿದ್ದ. ಅಧ್ಯಕ್ಷ ಸ್ಥಾನ ಪರಿಶಿಷ್ಟ ಬುಡಕಟ್ಟಿಗೆ ಮೀಸಲಾಗಿದ್ದರಿಂದ ಈತನ ಪತ್ನಿಯ ಹೊರತಾಗಿ ಅಧ್ಯಕ್ಷರಾಗಲು ಬೇರೆ ಯಾರೂ ಇರಲಿಲ್ಲ.

ಜೆಡಿಎಸ್-ಬಿಜೆಪಿ ಜಂಟಿ ಆಳ್ವಿಕೆಯಲ್ಲಿ ಕುಮಾರಸ್ವಾಮಿ ಮುಖ್ಯಮಂತ್ರಿಯಾಗುವತನಕ ಜಿಗಣಿ ಇಂಡಸ್ಟ್ರಿಯಲ್ ಏರಿಯಾದ ಮಟ್ಟಿಗೆ ಅನಭಿಷಕ್ತ ದೊರೆಯಂತೆ ಮೆರೆದವನು ಗೋಪಾಲಕೃಷ್ಣ. ಬೆಂಗಳೂರು ಹೊಸೂರು ರಸ್ತೆಯ ಜಿಗಣಿ ಕೈಗಾರಿಕಾ ಪ್ರದೇಶವೆಂದರೆ ಅದರ ಆಮದನಿಯ ಲೆಕ್ಕಾಚಾರವೇ ಬೇರೆ. ಇಲ್ಲಿನ ಸರಿಸುಮಾರು ಸಾವಿರದಷ್ಟು ಫ್ಯಾಕ್ಟರಿಗಳಲ್ಲಿ ಹೆಚ್ಚಿನವು ಗ್ರಾನೈಟ್ ಸಂಬಂಧಿ ಉದ್ದಿಮೆಗಳು. ಸಣ್ಣಪುಟ್ಟ ವ್ಯಾಜ್ಯ, ಕಾರ್ಮಿಕರ ವಿವಾದ , ಸ್ಟ್ರೈಕು, ರಾಜ್ಯೋತ್ಸವ, ಗಣೇಶ್, ಎಲೆಕ್ಷನ್ನು ಇತ್ಯಾದಿ ಯಾವುದೇ ಕಲೆಕ್ಷನಿಗೆ ಕೈಯಿಟ್ಟರೂ ಅದು ಲಕ್ಷಾಂತರದ ಮೊತ್ತವಾಗುತ್ತದೆ.

ಜಿಗಣಿ ಎಸ್ಟೇಟ್


ಪತ್ನಿ ಜಿಗಣಿ ಗ್ರಾಮ ಪಂಚಾಯತಿಗೆ ಅಧ್ಯಕ್ಷಳಾಗಿದ್ದನ್ನೇ ನೆಪಮಾಡಿಕೊಂಡು ಹಾವಳಿಗಿಳಿದವನು ಗೋಪಾಲಕೃಷ್ಣ. ಈತನ ಜೊತೆ ಎಂಜಿನಿಯರ್ ಸಂಪಂಗಿರಾಜು ಎಂಬ ಪುಢಾರಿಯೂ ಕೈಜೋಡಿಸಿದ. ಜೊತೆಗೊಂದು ರೌಡಿಗ್ಯಾಂಗೂ ಹುಟ್ಟಿಕೊಂಡಿತು. ಕಂಡೋರ ಜಮೀನಿಗೆ ಬೇಲಿ ಹಾಕುವುದು, ಜಿಗಣಿಯ ಗ್ರಾನೈಟ್ ಫ್ಯಾಕ್ಟರಿಗಳಿಂದ ವಸೂಲಿ ಮಾಡುವುದೇ ಗೋಪಾಲಕೃಷ್ಣನ ಕಸುಬಾಯಿತು. ಈತನ ತಮ್ಮ ಶಿವರಾಮ್ ಬಿಎಂಟಿಸಿಯಲ್ಲಿ ಕಂಡಕ್ಟರ್. ಮಕ್ಕಳಿರಲಿಲ್ಲ. ಒಂದಷ್ಟು ಮಂದಿ ಘಟವಾಣಿ ಹೆಂಗಸರ ಸಹವಾಸಕ್ಕೂ ಬಿದ್ದ ಗೋಪಾಲಕೃಷ್ಣ ಲಕ್ಷ್ಮೀನಾರಾಯಣ ನಿಸರ್ಗ ಲೇಔಟ್‌ನಲ್ಲಿ ಅದ್ದೂರಿಯ ಬಂಗಲೆಯೆಬ್ಬಿಸಿದ. ಇಂಡ್ಲವಾಡಿ ಸಮೀಪದ ಬಗ್ಗನದೊಡ್ಡಿಯಲ್ಲೊಂದು ತೋಟ ಖರೀದಿಸಿದ. ಐದು ವರ್ಷ ಪೂರ್ತಿ ಪತ್ನಿಯೇ ಜಿಗಣಿ ಪಂಚಾಯತ್‌ಗೆ ಅಧ್ಯಕ್ಷೆಯಾಗಿದ್ದರಿಂದ ಗೋಪಾಲಕೃಷ್ಣನ ಡಾನ್‌ಗಿರಿಗೆ ಯಾವುದೇ ಅಪಾಯವಿರಲಿಲ್ಲ.

ಆದರೆ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದೇ ಗೋಪಾಲಕೃಷ್ಣನ ಅದೃಷ್ಟದ ಅಕೌಂಟು ಖಾಲಿಯಾಗತೊಡಗಿತ್ತು. ಅದಕ್ಕೆ ಕಾರಣನಾದವನು ಗೊಟ್ಟಿಗೆರೆ ಮಂಜ. ಕುಮಾರಸ್ವಾಮಿಯ ಅತ್ಯಂತ ನಂಬಿಕಸ್ತ ಬಂಟರ ಪೈಕಿ ಓರ್ವನಾದ ಗೊಟ್ಟಿಗೆರೆ ಮಂಜ ಆನೇಕಲ್ ಮಟ್ಟಿಗೆ ಅನಭಿಷಕ್ತ ದೊರೆಯಂತಿದ್ದ ಕಾಲವದು. ಆನೇಕಲ್ ಸರ್ಕಲ್‌ಗೆ ಇನ್ಸ್‌ಪೆಕ್ಟರ್ ಆಗಿ ಬಂದಿದ್ದ ಮಲ್ಲಿಕಾರ್ಜುನನಿಗೆ ಮಂಜ ಹೇಳಿದ್ದೇ ವೇದವಾಕ್ಯ. ಬಿಜೆಪಿಯ ನಾರಾಯಣಸ್ವಾಮಿ ಹೆಸರಿಗಷ್ಟೇ ಎಮ್ಮೆಲ್ಲೆಯಾದರೂ ಆನೇಕಲ್ ಮಟ್ಟಿಗೆ ಜೆಡಿ ಎಸ್‌ನದ್ದೇ ದರ್ಬಾರಾಗಿತ್ತು. ಇಂಥ ಸ್ಥಿತಿಯಲ್ಲಿ ಗೋಪಾಲಕೃಷ್ಣನ ಜಿಗಣಿ ಸಾಮ್ರಾಜ್ಯಕ್ಕೊಬ್ಬ ಎದುರಾಳಿ ಹುಟ್ಟಿಕೊಂಡ.

ಕೊಲೆಯಾದ ಬಿಜೆಪಿ ನಾಯಕ ಎಂಥವನು?

ಆತನೇ ಚಿಟ್ಟಿ ಅಲಿಯಾಸ್ ಕುಮಾರಸ್ವಾಮಿ!

ಚಿಟ್ಟಿ ಗೊಟ್ಟಿಗೆರೆ ಮಂಜನ ಬಲಗೈ ಬಂಟ. ತನ್ನ ಪತ್ನಿ ವಿಜಯಲಕ್ಷ್ಮಿಯನ್ನು ಪಂಚಾಯತಿ ಚುನಾವಣೆಗೆ ನಿಲ್ಲಿಸಿ ಗೆಲ್ಲಿಸಿದ್ದ. ಜೆಡಿಎಸ್ ಪ್ರಾಬಲ್ಯ ಮತ್ತು ಗೊಟ್ಟಿಗೆರೆ ಮಂಜನ ರಿಯಲ್ ಎಸ್ಟೇಟ್ ಹಾವಳಿಗೆ ಚಿಟ್ಟಿ ಹೇಳಿಮಾಡಿಸಿದಂತಿದ್ದ. ಇಂಥ ಸೈಟನ್ನು ಆಕ್ರಮಿಸುವಂತೆ ಮಂಜ ಆದೇಶ ಕೊಟ್ಟನೆಂದರೆ ಚಿಟ್ಟಿ ಅದನ್ನು ಚಿಟಿಕೆ ಹೊಡೆಯುವುದರಲ್ಲಿ ಮುಗಿಸಿಬಿಡುತ್ತಿದ್ದ. ಇನ್ಸ್‌ಪೆಕ್ಟರ್ ಮಲ್ಲಿಕಾರ್ಜುನ ಬೇರೆ ಮಂಜನ ಆದೇಶಪಾಲಕನಾಗಿದ್ದರಿಂದ ಚಿಟ್ಟಿ ವಿರುದ್ಧ ಯಾರೇ ಫ್ಯಾಕ್ಟರಿ ಮಾಲೀಕ ಸೈಟುದಾರ ದೂರುಕೊಟ್ಟರೂ ದಾಖಲಾಗುತ್ತಿರಲಿಲ್ಲ.



ಗೊಟ್ಟಿಗೆರೆ ಮಂಜ

ಗೊಟ್ಟಿಗೆರೆ ಮಂಜ

ನಟೋರಿಯಸ್ ಎಪಿಸಿ ಸರ್ಕಲ್‌ನಲ್ಲೇ ಚಿಟ್ಟಿ ಆಫೀಸು ತೆರೆದ. ಜಿಗಣಿ ಸುತ್ತಮುತ್ತಲ ಯಾವುದೇ ಡೀಲು, ವ್ಯಾಜ್ಯ ಪಂಚಾಯತಿಯಿದ್ದರೂ ಅದು ಇತ್ಯರ್ಥವಾಗುತ್ತಿದ್ದದ್ದು ಚಿಟ್ಟಿಯ ಅಡ್ಡೆಯಲ್ಲೇ. ಆ ಹೊತ್ತಿಗೆ ಗೋಪಾಲಕೃಷ್ಣ ಮತ್ತು ಆತನ ಬಂಟ ಸಂಪಂಗಿರಾಜು ಆಕ್ಸಿಡೆಂಟ್‌ಗೆ ಸಿಲುಕಿ ಇಬ್ಬರೂ ಕಾಲು ಮುರಕೊಂಡು ಆಸ್ಪತ್ರೆ ಸೇರಿಕೊಂಡಿದ್ದು ಚಿಟ್ಟಿ ಪಾಲಿಗೆ ಮತ್ತಷ್ಟು ಅನುಕೂಲವಾಗಿತ್ತು. ಆದರೆ ಚಿಟ್ಟಿ ತನ್ನ ವೇಗಕ್ಕೆ ತಾನೇ ಬಲಿಪಶುವಾದ. ಅದೊಂದು ಮಾಮೂಲಿ ಲವ್‌ಕೇಸು.

ಸಂಪಿಗೆಹಳ್ಳಿಯ ಲಿಂಗಾಯತರ ಹುಡುಗನೊಬ್ಬ ಚಿಟ್ಟಿಯ ಸಂಬಂಧಿ ದಲಿತರ ಹುಡುಗಿಯನ್ನು ಪ್ರೀತಿಸುತ್ತಿದ್ದ. ಲಿಂಗಾಯತರ ಹುಡುಗ ಇದೇ ಜಿಗಣಿಯ ಹಳೇ ಕ್ರಿಮಿನಲ್ ಪ್ರಸನ್ನನ ಶಿಷ್ಯ. ಪ್ರಸನ್ನ ದೊಡ್ಡ ರೌಡಿಯಲ್ಲದಿದ್ದರೂ ಪಳಗಿದ ಕ್ರಿಮಿನಲ್. ಸಣ್ಣಪುಟ್ಟ ಹೊಡೆದಾಟದಲ್ಲಿ ಜೈಲಿಗೆ ಹೋಗಿ ಬಂದಿದ್ದ. ಜೈಲಲ್ಲಿ ಕುಖ್ಯಾತ ಪಾತಕಿ ಸೈಕಲ್ ರವಿಯ ಲಿಂಕನ್ನೂ ಬೆಳೆಸಿಕೊಂಡಿದ್ದ. ತನ್ನ ಸಂಬಂಧಿ ಹುಡುಗಿಯನ್ನು ಪಟಾಯಿಸಲು ಲಿಂಗಾಯತರ ಹುಡುಗನಿಗೆ ಪ್ರಸನ್ನನೇ ಕುಮ್ಮಕ್ಕು ಕೊಡುತ್ತಿದ್ದಾನೆಂದು ಚಿಟ್ಟಿ ಪ್ರಸನ್ನನನ್ನು ಬನ್ನೇರುಘಟ್ಟ ಸರ್ಕಲ್ಲಿನಲ್ಲೇ ಹಾಕಿ ಹೊಡೆದಿದ್ದ. ಅಷ್ಟಕ್ಕೂ ಪುಡಿರೌಡಿ ಪ್ರಸನ್ನ ಕೂಡ ಗೊಟ್ಟಿಗೆರೆ ಮಂಜನ ಶಿಷ್ಯನೆ!

ಅಷ್ಟೆಲ್ಲಾ ತಾಕತ್ತು, ಹುಡುಗರು, ಪೊಲೀಸ್ ಕುಮ್ಮಕ್ಕು ಎಲ್ಲಾ ಇದ್ದೂ 2010ರ ಅಕ್ಟೋಬರ್ 8ರಂದು ಚಿಟ್ಟಿ ಪ್ರಸನ್ನನ ಹಂತಕ ಪಡೆಯಿಂದ ಭಯಾನಕವಾಗಿ ಕೊಲೆಯಾದ.

ಜೆಡಿಎಸ್‌ಗೆ ಅಧಿಕಾರ ತಪ್ಪಿ, ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಆನೇಕಲ್‌ಗೆ ನಾರಾಯಣಸ್ವಾಮಿಯೇ ಹಾಕಿಸಿಕೊಂಡಿದ್ದ ಹೆಚ್.ಎಸ್.ವೆಂಕಟೇಶ್ ಇನ್ಸ್‌ಪೆಕ್ಟರ್ ಆಗಿ ಬಂದಿದ್ದ ಅನುಕೂಲವನ್ನು ಪ್ರಸನ್ನ ಬಳಸಿಕೊಂಡಿದ್ದ.

ದೊಡ್ಡಕಮ್ಮನಹಳ್ಳಿ ಅನಂತನೂ ಜೆಸಿಬಿ ಶಿಷ್ಯ ಕಟಿಂಗ್ ಸೀನನೂ

ರಿಯಲ್ ಎಸ್ಟೇಟ್ ಜಿದ್ದಾಜಿದ್ದಿಗೆ ಹೇಗೆ ನೆಲಮಂಗಲ ಕ್ರಿಮಿನಲ್‌ಗಳ ಹುತ್ತವಾಯಿತೋ ಹಾಗೆ ಆನೇಕಲ್ ಕೂಡ ಈಗ ಗ್ಯಾಂಗ್‌ವಾರ್‌ನ ರಣಾಂಗಣ. ಚಿಟ್ಟಿಯನ್ನು ಕೊಂದ ಪ್ರಸನ್ನನಿಗೆ ಸೈಕಲ್ ರವಿಯ ಬೆಂಬಲವಾದರೆ ಚಿಟ್ಟಿ ಗ್ಯಾಂಗಿನ ಹಿಂದೆ ಒಂಟೆ-ಸುನೀಲರ ನೆರಳಿದೆ. ಜೊತೆಗೆ ಮತ್ತೊಬ್ಬ ಪಾತಕಿ ಜೆಸಿಬಿ ನಾರಾಯಣನೂ ಆನೇಕಲ್ಲಿಗೆ ಕಾಲಿಟ್ಟಿದ್ದಾನೆ. ನಿನ್ನೆ ಮೊನ್ನೆಯ ತನಕ ಸರ್ಜಾಪುರವನ್ನೇ ತನ್ನ ಗುಹೆಯನ್ನಾಗಿ ಮಾಡಿಕೊಂಡಿದ್ದ ಜೆಸಿಬಿ ನಾರಾಯಣ ರಿಯಲ್ ಎಸ್ಟೇಟ್ ಕಾರಣಕ್ಕೆ ಒಂದಲ್ಲ ನಾಲ್ಕು ಕೊಲೆಗಳನ್ನೆಸಗಿದ.



ಸೈಕಲ್ ರವಿ

ಈ ಗ್ಯಾಂಗುಗಳಷ್ಟೇ ಅಲ್ಲದೆ ಇತ್ತೀಚೆಗೆ ದೊಡ್ಡಕಮ್ಮನಹಳ್ಳಿ ಅನಂತ ಎಂಬ ಮತ್ತೊಬ್ಬ ರೌಡಿ ತಲೆ ಎತ್ತಿದ್ದಾನೆ. ತನ್ನ ಎರಡೂ ಕೈನ ಹತ್ತು ಬೆರಳಿಗೂ ಗಜಗಾತ್ರದ ಚಿನ್ನದ ಉಂಗುರ ತೊಟ್ಟು ಹಾವಳಿಯಿಡುವ ಅನಂತನ ಹಾವಳಿ ಒಂದೆಡೆಯಾದರೆ ಮತ್ತೊಂದೆಡೆ ಸರ್ಜಾಪುರದ ಕಟಿಂಗ್ ಸೀನ ಎಂಬ ಮಗದೊಬ್ಬ ಪಾತಕಿಯೂ ಸಾಕಷ್ಟು ಬೆಳೆದಿದ್ದಾನೆ. ಸರ್ಜಾಪುರದಲ್ಲಿ ಉದ್ಭವಿಸಿ ಸದ್ಯ ಹೊಸೂರು ರಸ್ತೆಯುದ್ದಕ್ಕೂ ಉಪಟಳ ಶುರುವಿಟ್ಟ ಇನ್ನೂ ಒಬ್ಬ ರೌಡಿಯೆಂದರೆ ಆತ ಸದ್ದಾಮ್ ಅಲಿಯಾಸ್ ಶಂಭಯ್ಯ. ಈ ಪೈಕಿ ಅನಂತ, ಕಟಿಂಗ್ ಸೀನ ಮತ್ತು ಸದ್ದಾಂಗೆ ಜೆಸಿಬಿ ನಾರಾಯಣನ ಕುಮ್ಮಕ್ಕಿದೆ.


ಸದ್ಯ ಚಿಟ್ಟಿ ಗ್ಯಾಂಗ್ ಮತ್ತು ಪ್ರಸನ್ನನ ಪಡೆಗಳ ನಡುವಿನ ಜಿದ್ದಾಜಿದ್ದಿಯಲ್ಲಿ ಯಾವ್ಯಾವ ರೌಡಿ ಯಾವ ಗಳಿಗೆಯಲ್ಲಿ ಯಾರೊಂದಿಗೆ ಕೈಜೋಡಿಸುತ್ತಾನೋ ಏನು ಅನಾಹುತ ಕಾದಿದೆಯೋ ಗೊತ್ತಿಲ್ಲ. ಆನೇಕಲ್ ಶಾಸಕ ಮಂತ್ರಿ ನಾರಾಯಣಸ್ವಾಮಿ ತನ್ನ ಹುಟ್ಟೂರಿಗೆ ಬೇರೇನು ಮಾಡದೇ ಹೋದರೂ ಊರನ್ನು ಈ ಪಾತಕಿಗಳ ಕೈಗೊಪ್ಪಿಸದೇ ಉಳಿಸಿದರಷ್ಟೇ ಸಾಕು. ತವರಿನ ಋಣ ತೀರಿಸಲು ಇದಕ್ಕಿಂತ ಅವಕಾಶವುಂಟೆ?

ನಿತ್ಯಾನಂದ ಶಾಲೆ ಪಕ್ಕದ ತನ್ನ ಮನೆ ಮುಂದೆ ...ಬ್‌ನಲ್ಲಿ ಮಾತಾಡಿಕೊಂಡಿದ್ದಾಗಲೇ ಪ್ರಸನ್ನನ ಗ್ಯಾಂಗ್ ...ನ್ನು ಕತ್ತರಿಸಿಹಾಕಿತ್ತು. ಆವತ್ತು ಪ್ರಸನ್ನನ ಜೊತೆಗಿದ್ದದ್ದು ... ಸೈಕಲ್ ರವಿಯ ಹುಡುಗರು. ಪ್ರಸನ್ನ ಜೈಲು ...ಿ. ಅಲ್ಲಿಗೆ ಜಿಗಣಿಯ ಮಟ್ಟಿಗೆ ಗೊಟ್ಟಿಗೆರೆ ಮಂಜನ ... ಅರ್ಧ ಉಡುಗಿದಂತಾಗಿತ್ತು. ಆದರೆ ಚಿಟ್ಟಿ ...ಾಗುವುದಕ್ಕೂ ವರ್ಷದ ಮೊದಲೇ ಗೋಪಾಲಕೃಷ್ಣ ... ಸೇರಿಕೊಂಡಿದ್ದ.

ಪ್ರಸನ್ನನ ಸಖ್ಯ

...ಟ್ಟಿ ಕೊಲೆಯಾಗಿದ್ದೇ ತಡ, ಗೋಪಾಲಕೃಷ್ಣ ಮತ್ತೆ ...ತ್ತಿ ನಿಂತ. ಕೊಲೆಕೇಸಿನಲ್ಲಿ ಪ್ರಸನ್ನ ಜೈಲಿಗೆ ಹೋಗಿದ್ದೇ ...ಪ್ರತೀಕಾರಕ್ಕೆ ನಿಂತ ಚಿಟ್ಟಿಯ ಹುಡುಗರು ಆತನ ...ನ್ನು ಬಿಡದೇ ಹಾವಳಿಯಿಟ್ಟರು. ಎಷ್ಟೆಂದರೂ ...ಗೆ ಡಾನ್ ಆಗುವುದೆಂದರೆ ವರ್ಷಂಪ್ರತಿ ಅದು ...ಿರ ರೂಪಾಯಿಗಳ ಉತ್ಪತ್ತಿಯ ಬಾಬತ್ತು. ವಯಸ್ಸು ...ದರೂ ಅಪಘಾತದಲ್ಲಿ ಕಾಲೊಂದು ಐಬಾಗಿದ್ದರೂ ...ಗೆ ಅಧಿಕಾರವಿರುವಾಗ ಒಂದು ಕೈ ನೋಡೇ ...ಣ ಎಂದು ಸದ್ದಿಲ್ಲದೇ ತಲೆಯೆತ್ತಿದ ಗೋಪಾಲಕೃಷ್ಣ ...ವಿಲ್ಲದೇ ಅನಾಹುತವೊಂದಕ್ಕೆ ಕೈಹಾಕಿದ್ದ.

...ದು ಜೈಲಿನಲ್ಲಿದ್ದ ಪಾತಕಿ ಪ್ರಸನ್ನನ ಸಖ್ಯ. ಪದೇಪದೇ ... ಹೋಗಿ ಪ್ರಸನ್ನನಿಗೆ ಕಾಸು ಕೊಡುತ್ತಿದ್ದ ಸಂಗತಿ ...ೋ ಚಿಟ್ಟಿಯ ಹುಡುಗರ ಕಿವಿಗೆ ಬಿದ್ದಿದೆ. ಸಾಲದ್ದಕ್ಕೆ ...ಬ್‌ನ ವಕೀಲರೊಬ್ಬರಿಗೆ ಕೈತುಂಬಾ ಕಾಸುಕೊಟ್ಟು ...ನನ್ನು ಜೈಲಿಂದ ... ತರಲು ...ಪಾಲಕೃಷ್ಣ ...ತುತ್ತಿದ್ದದ್ದೂ ...ಬಾಗಿದೆ. ಇನ್ನು ... ಪ್ರಸನ್ನ ...ದ ...ಬಿದ್ದನೆಂದರೆ ...ಡೆ ...ಪಾಲಕೃಷ್ಣನ ...ಹಾಸು, ...ತ್ತಾಂದೆಡೆ


ಮಂತ್ರಿ ನಾರಾಯಣಸ್ವಾಮಿ

...ನ ಆರ್ಭಟ ಎರಡೂ ಮಿತಿಮೀರುತ್ತದೆ. ಬಿಜೆಪಿ ...ರದಲ್ಲಿರುವುದರಿಂದ ಇವರಿಬ್ಬರ ಹಾವಳಿಗೆ ಪೊಲೀಸ್ ...ಕ್ಕೂ ಸಿಕ್ಕಿತೆಂದರೆ ಅದು ಜಿಗಣಿ ಮತ್ತು ಆನೇಕಲ್ ...ಗೆ ದೊಡ್ಡ ಅನಾಹುತವೇ ಸರಿ.

...ಹಾಗಂತ ಲೆಕ್ಕ ಹಾಕಿದ ಚಿಟ್ಟಿಯ ಹುಡುಗರು ...ನ್ನನನ್ನು ಜೈಲಿನಿಂದ ಬಿಡಿಸಲು ಓಡಾಡುತ್ತಿದ್ದ ...ಪಾಲಕೃಷ್ಣನಿಗೆ ಮುಹೂರ್ತವಿಟ್ಟಿದ್ದಾರೆ. ಚಿಟ್ಟಿಯ ಹತ್ಯೆಗೆ ...ಿ ನಾಯಕ ಗೋಪಾಲಕೃಷ್ಣ ಮತ್ತು ಆತನ ಸಹಚರ ...ರೆಡ್ಡಿ ಸೇರಿಕೊಂಡು ಸುಪಾರಿ ಕೊಟ್ಟಿದ್ದಾರೆಂದೇ ಚಿಟ್ಟಿ ...ಗ್ ನಿರ್ಧರಿಸಿದೆ. ಆದರೆ ಗೋಪಾಲಕೃಷ್ಣ ಹುಂಬ. ... ಸಾವು ಇನ್ನೆಲ್ಲೋ ಹೆಪ್ಪುಗಟ್ಟುತ್ತಿದೆಯೆಂಬುದನ್ನು ...ಮುದೇ ಜುಲೈ 10 ರಾತ್ರಿ ತನ್ನ ತಮ್ಮ ಶಿವರಾಮನ ...ಗೆಂದು ಬಂದಿದ್ದಾನೆ. ಪಕ್ಕದ ನಿತ್ಯಾನಂದ ಸ್ಕೂಲ್ ... ಏನಕ್ಕೋ ಗಾಡಿ ನಿಲ್ಲಿಸಿದವನು ಅಪಾಯದ ...ವಿಲ್ಲದೇ ಯಾರೊಂದಿಗೋ ಮೊಬೈಲ್‌ನಲ್ಲಿ ಹರಟುತ್ತಾ ...ಬಿಟ್ಟಿದ್ದಾನೆ.

ಗುಡ್ಡುಮಂಜನ ಗ್ಯಾಂಗ್

... ಸಾವು ಅದೆಲ್ಲಿ ಹೊಂಚ ಕುಳಿತಿತ್ತೋ? ರಾತ್ರಿ ಕತ್ತಲಲ್ಲಿ ...ೋ ಕದಲಿದಂತಾಗಿ ತಿರುಗಿ ನೋಡುತ್ತಿದ್ದಂತೆಯೇ ...ಾರು ಮಂದಿ ಪಡ್ಡೆ ಹುಡುಗರು ಸುತ್ತುವರೆದಿದ್ದೇ ...ಗ್ ಬೀಸಿದ್ದಾರೆ. ತಲೆ, ಮುಖ, ಕತ್ತು, ಎದೆ, ಹೊಟ್ಟೆ ...ು ಯಾವುದನ್ನೂ ಬಿಡದೇ ಹುಡುಗರು ಹಿಡಿದು ...ಸುತ್ತಿದ್ದರೆ, ಗೋಪಾಲಕೃಷ್ಣ ಕಿಮಕ್ಕೆನ್ನದೇ ಹೆಣವಾಗಿ ...ದ್ದ. ಕೊಂದವನು ಉಳಿಯಲಾರ ಎಂಬ ...ಗತಲೋಕದ ಜನ್ಮಸಿದ್ಧ ಕಟ್ಟಳೆಗೆ ಗೋಪಾಲಕೃಷ್ಣನೂ ...ರ್ಬಲಿಯಾಗಿ ಹೋಗಿದ್ದ!


... ಬೆಂಗಳೂರಿನ ಪಾತಕ ಚಾಳಿ ಆನೇಕಲ್‌ಗೂ ಹೇಗೆ ...ರಿಸಿದೆಯೆಂದರೆ ಕೊಂದ ಮರುದಿನಕ್ಕೆ ನಾಲ್ವರು ಹಂತಕರು ...ಕೇರುಘಟ್ಟ ಪೊಲೀಸ್ ಠಾಣೆಗೆ ಬಂದು ಕೊಂದದ್ದು ...ದೇ ಎಂದು ಎದೆಯುಬ್ಬಿಸಿ ನಿಂತಿದ್ದರು. ಈ ಪೈಕಿ ...ಗ್ ಲೀಡರ್‌ನಂತಿದ್ದವನು ಜಿಗಣಿಯ ಗುಡ್ಡು ಮಂಜ ...ಯಾಸ್ ಮಂಜುನಾಥ. ಈತ ಚಿಟ್ಟಿಯ ಹುಡುಗ. ...ನ್ನು ಉರ್ಫ್ ಜೋಗಯ್ಯ, ಮುನಿಯೆಲ್ಲಪ್ಪ, ಮತ್ತೊಬ್ಬ ...ಂಜ ಈ ನಾಲ್ವರು ಆನೇಕಲ್ ಚಿಟ್ಟಿಯ ಶಿಷ್ಯರಂತೆ. ...ಮ್ಮ ಗುರುವನ್ನು ಸುಪಾರಿಕೊಟ್ಟು ಕೊಲ್ಲಿಸಿದ್ದಕ್ಕೆ, ನಾವು ...ಸೇಂಜ್ ತಗೊಂಡಿದ್ದೇವೆ ಎಂದು ಎಸ್.ಐ. ವಿಶ್ವನಾಥ್ ...ುಂದೆ ಹೇಳಿಕೆ ಕೊಟ್ಟಿದ್ದಾರೆ. ಯಾರಿಗೂ ವಯಸ್ಸು ...ಪ್ಪತ್ತು ಮೀರಿಲ್ಲ, ಕೊಲ್ಲುವ ವಯಸ್ಸೂ ಅಲ್ಲ, ...ೋಪಾಲಕೃಷ್ಣನಿಗೂ ಅದು ಕೊಲೆಯಾಗುವ ವಯಸ್ಸಲ್ಲ. ... ಆದರೆ ಜಿಗಣಿ ಇಂಡಸ್ಟ್ರಿಯಲ್ ಏರಿಯಾದ ...ಭಿವೃದ್ಧಿಯಲ್ಲ, ಜೊತೆಗೆ ರಿಯಲ್ ಎಸ್ಟೇಟ್ ಹಾವಳಿ ...ಟ್ಟಿಸೀಕಲ್ಲ, ಇನ್ನೆಷ್ಟು ತಲೆ ಉರುಳುತ್ತೋ ಗೊತ್ತಿಲ್ಲ.

ಮೈಸೂರು: ಶಿಕ್ಷಣ ಇಲಾಖೆಯಲ್ಲಿ ಭ್ರಷ್ಟರ ದಂಡು

ಮೈಸೂರು ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಇಲಿ ಹೆಗ್ಗಣಗಳೇ ತುಂಬಿಹೋಗಿವೆ. ಶಾಲಾ ಮಕ್ಕಳ ಶಿಕ್ಷಣ ಸುಧಾರಣೆಗೆ ಸರ್ಕಾರ ತರುತ್ತಿರುವ ಹೊಸ ಹೊಸ ಯೋಜನೆಗಳು ಇಲ್ಲಿನ ಅಧಿಕಾರಿಗಳ ತಿಜೋರಿ ತುಂಬುತ್ತಿವೆ. ಡಿಡಿಪಿಐ ಆಗಿ ಹಲವು ವರ್ಷಗಳಿಂದ ಮೈಸೂರಿನಲ್ಲೇ ಜಾಂಡ ಹೂಡಿರುವ ಕಡು ಭ್ರಷ್ಟ ಡಿಡಿಪಿಐ ನಾಗೇಂದ್ರ ಕುಮಾರ್‌ನ ಕಮಿಷನ್ ಪ್ರೋಗ್ರಾಂಗಳು ಎಗ್ಗಿಲ್ಲದೆ ಸಾಗಿವೆ. ಅಕ್ಷರ ದಾಸೋಹ, ಸರ್ವಶಿಕ್ಷಣ ಅಭಿಯಾನ, ಗ್ರೀನ್ ಬೋರ್ಡ್ ಯೋಜನೆಗಳ ಪ್ರತೀ ಟೆಂಡರ್‌ಗಳನ್ನು ವಿಳಾಸ ವಿಲ್ಲದ ಕಂಪನಿಗಳಿಗೆ ನೀಡಿ ಕೋಟ್ಯಾಂತರ ರೂಗಳನ್ನ ಡಿಡಿಪಿಐ ವಂಚಿಸಿ ಶಿಕ್ಷೆಯಿಂದ ತಪ್ಪಿಸಿಕೊಳ್ಳುತ್ತಿದ್ದಾನೆ!

ಮೈಸೂರು ಜಿಲ್ಲೆಗೆ ಡಿಡಿಪಿಐ ಆಗಿ ನಾಗೇಂದ್ರಕುಮಾರ್ ಯಾವಾಗ ವಕ್ಕರಿಸಿಕೊಂಡನೋ ಅಂದಿನಿಂದ ಮೈಸೂರಿನ ಇಡೀ ಶಿಕ್ಷಣ ಇಲಾಖೆಯೇ ಕೆಟ್ಟು ಕೆರಹಿಡಿದುಹೋಗಿದೆ. ಶಿಕ್ಷಣ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿಯ ಬೆಂಬಲದೊಂದಿಗೆ ಆಗಮಿಸಿದ ಈತ ಕಾಗೇರಿ ತನ್ನ ಸಂಬಂಧಿ ಎನ್ನುತ್ತಲೇ ಇಡೀ ಶಿಕ್ಷಣ ಇಲಾಖೆಯನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡ. ಆನಂತರ ಬಿಸಿ ಊಟ, ಸಿಲಿಂಡರ್ ಖರೀದಿ, ಕಂಪ್ಯೂಟರ್ ಖರೀದಿ, ಹಸಿರು ಬೋರ್ಡ್ ಹೀಗೆ ಪ್ರತೀ ಹಂತದಲ್ಲೂ ಹತ್ತಾರು ಹಗರಣ ನಡೆಸಿದ. ಈತ ಪದೇಪದೆ ಸಿಕ್ಕಿಬಿದ್ದರೂ ಕಾಗೇರಿ ಮತ್ತು ಮಂತ್ರಿ ರಾಮದಾಸ್‌ರ ಕೃಪಾಕಟಾಕ್ಷದಿಂದ ತಪ್ಪಿಸಿಕೊಳ್ಳುತ್ತಲೇ ಬಂದಿದ್ದಾನೆ.

ಡಿಡಿಪಿಐ ನಾಗೇಂದ್ರಕುಮಾರ್ ಮೂಲತಃ ಆರ್‌ಎಸ್‌ಎಸ್ ದುಷ್ಟಬುದ್ಧಿಯ ಚೆಡ್ಡಿ ಮನುಷ್ಯ. ಈತ ಮೈಸೂರಿಗೆ ಬಂದಾಗಿನಿಂದಲೂ ತನ್ನ ಕಚೇರಿಯಿಂದ ಹಿಡಿದು ಎಲ್ಲ ಕಡೆ ಬ್ರಾಹ್ಮಣ್ಯವನ್ನು ಹೊತ್ತು ಮೆರೆಯುತ್ತಿದ್ದಾನೆ. ಅನುದಾನ ವಿಭಾಗಕ್ಕೆ ಹಿಂದೆಯಿದ್ದ ನಂಜುಂಡಸ್ವಾಮಿಯನ್ನು ದಲಿತ ಎನ್ನುವ ಕಾರಣಕ್ಕೆ ವರ್ಗಮಾಡಿ ಮಧುಸೂದನ್ ಎಂಬ ಸ್ವಜಾತಿಯವನನ್ನು ತಂದು ಕೂರಿಸಲಾಗಿದೆ. ನಾಗೇಂದ್ರ ಕುಮಾರನ ಸ್ವಜಾತಿ ಪ್ರೇಮ ಎಷ್ಟಿದೆ ಎಂದರೆ ಕಂಪ್ಲೇಂಟ್ ವಿಭಾಗಕ್ಕೆ ಗಿರಿಜಾಂಬ ಎಂಬುವವರಿಗೆ, ಜಿ.ಪಿ.ಎಫ್ ವಿಭಾಗಕ್ಕೆ ಶಕುಂತಲಾ, ವೇತನ ನಿಗದಿ ವಿಬಾಗಕ್ಕೆ ನಾಗರತ್ನ ಎಂಬುವವರನ್ನು ಆಯಕಟ್ಟಿನ ಹುದ್ದೆಗಳಿಗೆ ಅನರ್ಹರಾಗಿದ್ದರೂ ತಂದು ಕೂರಿಸುತ್ತಾ ಇಡೀ ಡಿಡಿಪಿಐ ಕಚೇರಿಯನ್ನೇ ಬ್ರಾಹ್ಮಣಮಯ ಮಾಡಲು ಹೊರಟಿದ್ದಾನೆ. ಶಾಲೆಗಳಲ್ಲಿ ಬ್ರಾಹ್ಮಣ ಶಿಕ್ಷಕರನ್ನು ಮುಖ್ಯ ಹುದ್ದೆಗಳಿಗೆ ಕೂರಿಸುವುದರಿಂದ ಹಿಡಿದು ಅನುದಾನ ಕೊಡಿಸುವ ತನಕ ಈತನ ಜಾತಿ ಸೇವೆ ಮುಂದುವರೆದಿದೆ.


ರಾಮದಾಸ್

ಮೈಸೂರಿನ ಬ್ರಾಹ್ಮಣರ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಾದ ಮಹಜನ, ಮರಿಮಲ್ಲಪ್ಪ ಸದ್ವಿದ್ಯ ವಿದ್ಯಾವರ್ಧಕ ಸಂಸ್ಥೆಗಳಿಂದ ಹಿಡಿದು ಸುತ್ತೂರು ಸ್ವಾಮಿಗಳು ನಡೆಸುತ್ತಿರುವ ಜೆ.ಎಸ್.ಎಸ್. ಶಿಕ್ಷಣ ಸಂಸ್ಥೆಗಳಲ್ಲಿ ನೇಮಕಾತಿಯಲ್ಲಿ ರೋಸ್ಟರ್ ಪದ್ಧತಿಯನ್ನೇ ಪಾಲಿಸದಿದ್ದರೂ ಅನುದಾನ ಸರಾಗವಾಗಿ ಹರಿಯುವಂತೆ ಮಾಡಿದ್ದಾನೆ. ಡಿಡಿಪಿಐ ಕಚೇರಿಯಲ್ಲಿ ವರ್ಗಾವಣೆ ಮತ್ತು ಡೆಪ್ಯೂಟೇಷನ್ ಮಾಡಿಕೊಡಲು ಆರ್‌ಎಸ್‌ಎಸ್‌ನ ಚೆಡ್ಡಿಗಳಿಂದ ಶಿಫಾರಸ್ಸಿದ್ದರೆ ಮಾತ್ರ ಆ ಕೆಲಸಗಳು ಆಗುತ್ತವೆ. ಪ್ರತೀ ಕೆಲಸಗಳಿಗೆ ಇಂತಿಷ್ಟು ಎಂಬ ಮಾಮೂಲಿ ಎನ್ನುವ ಬೋರ್ಡ್ ಹಾಕುವುದಷ್ಟೇ ಬಾಕಿ ಉಳಿದಿದೆ.


ಜಂಟಿ ನಿರ್ದೇಶಕರ ಕಚೇರಿಯ ಎಫ್.ಡಿ.ಎ. ಬಿ.ಜಿ. ರಂಗೇಗೌಡನಂತೂ ಪಕ್ಕಾ ಫೋರ್ಜರಿ ಗಿರಾಕಿ. ಈತ ಹಾಸನದಲ್ಲಿದ್ದಾಗ ಅಲ್ಲಿಯೂ ಫೋರ್ಜರಿ ಮಾಡಿ, ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಮೈಸೂರಿಗೆ ವರ್ಗವಾಗಿ ಬಂದವ. ಈತ ಇಲ್ಲಿಯೂ ತನ್ನ ಹಳೇ ಕೆಲಸಗಳನ್ನ ಮುಂದುವರಿಸಿ ಕುಖ್ಯಾತನಾಗಿದ್ದಾನೆ. 1990ರಿಂದ 2006 ತನಕ ಏಳುನೂರಕ್ಕೂ ಹೆಚ್ಚು ಶಿಕ್ಷಕರಿಗೆ ನಕಲಿ ಅಂಕಪಟ್ಟಿಗಳನ್ನು ಮಾಡಿಸಿಕೊಟ್ಟು ಕೆಲಸಗಿಟ್ಟಿಸಲು ಅವಕಾಶ ಮಾಡಿಕೊಟ್ಟಿರುವ ಫೋರ್ಜರಿ ಆಸಾಮಿಯೀತ. ಅಷ್ಟೇ ಅಲ್ಲದೇ ಪ್ರೌಢಶಾಲಾ ಶಿಕ್ಷಕರ ನೇಮಕಾತಿಯಲ್ಲಿ ತನ್ನ ಸ್ವಂತ ಸಹೋದರ ವೆಂಕಟೇಶ್ ಎಂಬಾತನನ್ನು ಅಂಗವಿಕಲರ ಕೋಟಾದಲ್ಲಿ ನೇಮಕಾತಿ ಮಾಡಿದ್ದಾನೆ. ಅಸಲಿಗೆ ವೆಂಕಟೇಶ್ ಅಂಗವಿಕಲನೇ ಅಲ್ಲ! ಇಂಥಾ ವಂಚನೆಗಳಲ್ಲೇ ಈತ ಎರಡು ಕೋಟಿಯಷ್ಟನ್ನು ತನ್ನ ತಿಜೋರಿಗೆ ತುಂಬಿಕೊಂಡಿದ್ದಾನೆ.

ರಂಗೇಗೌಡನ ಈ ಹಗರಣವನ್ನು ಜೆಡಿಎಸ್‌ನ ಎಮ್ಮೆಲ್ಸಿ ಕೆ.ಟಿ.ಶ್ರೀಕಂಠೇಗೌಡ ವಿಧಾನ ಪರಿಷತ್‌ನಲ್ಲೂ ಚರ್ಚೆಗೆ ತಂದು ಅಮಾನತ್ತು ಮಾಡಲು ಒತ್ತಾಯಿಸಿದ ಪರಿಣಾಮ ಈತನ ಮೇಲೆ ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿ ಎಸ್.ಎನ್.ಪ್ರತಿಮಾರಿಂದ ತನಿಖೆ ನಡೆಸಿ ಸರ್ಕಾರಕ್ಕೆ ವರದಿ ನೀಡಲಾಯಿತು. ಈ ಹಗರಣದಲ್ಲಿ ರಂಗೇಗೌಡ ತಪ್ಪಿತಸ್ಥ ಎಂದು ಆರೋಪ ಸಾಬೀತಾಗಿದ್ದರೂ ಈತನಿಗೆ ಶಿಕ್ಷೆಯಾಗಿಲ್ಲ, ಬದಲಿಗೆ ಡಿಡಿಪಿಐ ಆಫೀಸಿಗೆ ಅಧೀಕ್ಷಕ ಹುದ್ದೆಗೆ ಬಡ್ತಿ ಪಡೆದಿದ್ದಾನೆ. ಈತ ಮೈಸೂರಿಗೆ ಬಂದು 25 ವರ್ಷಗಳಾಗಿವೆ. ಆದರೂ ಕನಿಷ್ಠ ವರ್ಗಾವಣೆಯೂ ಆಗಿಲ್ಲ. ಈತ ಹೆಚ್.ಡಿ.ರೇವಣ್ಣನ ಚೇಲನಾಗಿರುವುದರಿಂದ ಎಲ್ಲಾ ಶಿಕ್ಷೆಗಳಿಂದಲೂ ತಪ್ಪಿಸಿಕೊಂಡು ಫೋರ್ಜರಿ ಪರ್ವ ಮುಂದುವರೆಸಿದ್ದಾನೆ.


ನಾಗೇಂದ್ರಕುಮಾರ್

ನಾಗೇಂದ್ರ ಕುಮಾರ್ ಮತ್ತು ರಂಗೇಗೌಡ ಎಷ್ಟು ವೃತ್ತಿಪರ ದರೋಡೆಕೋರರೆಂದರೆ ಮೈಸೂರು ಜಿಲ್ಲೆಗೆ ಸರ್ವಶಿಕ್ಷಣ ಅಭಿಯಾನ ಯೋಜನೆಯಡಿ ಹರಿದುಬಂದ ಕೋಟ್ಯಾಂತರ ರೂಗಳನ್ನ ಸರ್ವಶಿಕ್ಷಣ ಯೋಜನಾಧಿಕಾರಿ ಎಂ.ಆರ್.ಶಿವರಾಂ ಎಂಬಾತನೊಂದಿಗೆ ಸೇರಿ ವಂಚಿಸಿದ್ದಾರೆ. ಇದರಲ್ಲಿ ಬೆಳಕಿಗೆ ಬಂದಿರುವ ಕೆಲವು ಸ್ಯಾಂಪಲ್‌ಗಳು ಇಲ್ಲಿವೆ. ಮೈಸೂರಿನ ಆಯ್ದ 20 ಶಾಲೆಗಳಿಗೆ ಈ ಯೋಜನೆಯಡಿ ಕಂಪ್ಯೂಟರ್‌ಗಳು, ಯುಪಿಎಸ್ ಮತ್ತು ಬ್ಯಾಟರಿಗಳನ್ನು ಒದಗಿಸಲು ಧರಪಟ್ಟಿ ಕರೆಯಲಾಗಿದೆ. ಇದರಲ್ಲೂ ಗೋಲ್‌ಮಾಲ್ ನಡೆಸಿ ಪ್ಯಾರಡೈಸ್ ಕನ್ಸಲ್‌ಟೆನ್ಸಿ ಎಂಬ ಸಂಸ್ಥೆಗೆ ಸಿಗುವಂತೆ ನೋಡಿಕೊಳ್ಳಲಾಗಿದೆ. ಅಸಲಿಗೆ ಇದು ಕಂಪನಿಯೂ ಅಲ್ಲ, ಅದು ಕಂಪ್ಯೂಟರ್‌ಗಳನ್ನೆ ಒದಗಿಸಿಲ್ಲ. ಆದರೂ 15 ಲಕ್ಷರೂ. ಖಾಲಿಯಾದಂತೆ ತೋರಿಸಲಾಗಿದೆ!

ಇನ್ನು 2009ರಲ್ಲಿ ನಡೆದ ಗ್ರೀನ್‌ಬೋರ್ಡ್ ಹಗರಣ. ಸರ್ವ ಶಿಕ್ಷಣ್ ಯೋಜನೆಯಡಿ ಮೈಸೂರಿನ 273 ಶಾಲೆಗಳಿಗೆ ಗ್ರೀನ್‌ಬೋರ್ಡ್ ನೀಡಲು ಮತ್ತು ಹೊಸ ಕಟ್ಟಡ, ಸಾಮಗ್ರಿಗಳನ್ನು ಒದಗಿಸಲು ಸರ್ಕಾರಿ ನಿಯಮಗಳನ್ನೇ ಗಾಳಿಗೆ ತೂರಿ ಕಾಸ್ಮೋ ಎಂಬ ಬ್ಲೇಡ್ ಸಂಸ್ಥೆಗೆ ಟೆಂಡರ್ ನೀಡಲಾಯಿತು. ಇದರಲ್ಲಿ ಕೆಲಸ ಪೂರ್ಣಗೊಳ್ಳುವ ಮೊದಲೇ ಅರ್ಧ ಕೋಟಿಗೂ ಹೆಚ್ಚು ರೂ.ಗಳನ್ನು ಪಡೆದ ಕಾಸ್ಮೋ ಕಂಪೆನಿ ಪರಾರಿಯಾಯಿತು. ಇದರಲ್ಲಿಯೂ ಈ ನಾಗೇಂದ್ರಕುಮಾರ್ ಮತ್ತು ರಂಗೇಗೌಡರು ತಮ್ಮ ಕೈಚಳಕ ಮೆರೆದು ತಮ್ಮ ಪಾಲನ್ನು ಪಡೆದಿದ್ದಾರೆ. ಇದಿಷ್ಟೇ ಅಲ್ಲದೇ ಮೈಸೂರು ಜಿಲ್ಲೆಯ ಉತ್ತರ ವಲಯ ಮತ್ತು ದಕ್ಷಿಣ ವಲಯ ಮತ್ತು ಉಳಿದ 6 ತಾಲ್ಲೂಕುಗಳ ಶಾಲೆಗಳಲ್ಲಿ ಈ ಯೋಜನೆಯಡಿ 3 ಕೋಟಿ ರೂ.ಗಳನ್ನು ಗುಳುಂ ಮಾಡಿದ್ದಾರೆ. ಈ ಬಗೆಗಿನ ವರದಿ ಸರ್ಕಾರದ ಮುಂದಿದೆ. ಇದು ಜಾರಿಯಾದರೆ ನಾಗೇಂದ್ರಕುಮಾರ್ ಮತ್ತು ರಂಗೇಗೌಡರು ಜೊತೆಗೆ ಹತ್ತಾರು ಅಧಿಕಾರಿಗಳು ಜೈಲುಪಾಲಾಗುವುದು ಗ್ಯಾರಂಟಿ!


ಕಾಗೇರಿ

ನಾಗೇಂದ್ರಕುಮಾರ್ ಮತ್ತು ರಂಗೇಗೌಡ ಜೋಡಿ ತಮಗೆ ಶಿಕ್ಷೆಯಾಗುವುದನ್ನು ತಡೆಹಿಡಿಯಲು ಸಚಿವ ರಾಮದಾಸ್ ಮತ್ತು ಸಚಿವ ಕಾಗೇರಿಯವರಿಗೆ ಭಾರಿ ಮೊತ್ತವನ್ನೇ ತಲುಪಿಸಿದ್ದಾರೆ ಎಂದು ಮೈಸೂರು ಡಿಡಿಪಿಐ ಕಚೇರಿಯ ಮೂಲಗಳೇ ಹೇಳುತ್ತಿವೆ. ಪ್ರಸಾದ ಪಡೆದ ಸಚಿವರ್ಯರು ಈ ಬಗ್ಗೆ ತೆಪ್ಪಗಿರುವುದರಿಂದ ಮೈಸೂರು ಜಿಲ್ಲೆಯ ಶಿಕ್ಷಣ ಇಲಾಖೆಯನ್ನೇ ಈ ಭ್ರಷ್ಟರಿಗೆ ಬರೆದುಕೊಟ್ಟಂತಾಗಿದೆ.

ನಂಜನಗೂಡಿನ ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಪಾಟೀಲ್ ಶಿಕ್ಷಣ ಇಲಾಖೆಯ ಭ್ರಷ್ಟರ ಸಾಲಿನಲ್ಲಿ 3ನೇ ಸ್ಥಾನದಲ್ಲಿದ್ದಾನೆ. ಈತ ಮಕ್ಕಳ ಬಿಸಿಯೂಟದ ಪದಾರ್ಥಗಳನ್ನು ಖಾಸಗಿಯವರಿಗೆ ಮಾರಾಟ ಮಾಡಿಸುವುದರಲ್ಲಿ ನಿಸ್ಸೀಮ. ತನ್ನ ಚೇಲಾಗಳಾದ ಕ್ಲಸ್ಟರ್ ಅಧಿಕಾರಿಗಳಾದ ಮರಿಸ್ವಾಮಿ, ಕೃಷ್ಣಾಚಾರಿ, ಬದನವಾಳುವಿನ ಗಿರೀಶ್‌ರನ್ನ ಮುಂದೆ ಬಿಟ್ಟು ಲೂಟಿಗಿಳಿದಿದ್ದಾನೆ. ಈತ ಎಂತಹ ಪರಮನೀಚ ಎಂದರೆ ಡೆಪ್ಯುಟೇಶನ್, ಸಾಲಸೌಲಭ್ಯ ಪಡೆಯಲು, ಗಳಿಕೆ ರಜೆ, ಹಬ್ಬದ ಮುಂಗಡ ಹಣ ಕೇಳುವ ಶಿಕ್ಷಕಿಯರನ್ನು "ಸಹಕರಿಸು"ವಂತೆ ಪೀಡಿಸುತ್ತಾನೆ. ಈ ಬಗ್ಗೆ ಶಿಕ್ಷಕಿ ರೂಪ ಎನ್ನುವವರು ಶಿಕ್ಷಣ ಸಚಿವರಾದಿಯಾಗಿ ರಾಜ್ಯಪಾಲರಿಗೂ ದೂರು ನೀಡಿದ್ದಾರೆ. ಆದ್ದರೂ ಪ್ರಯೋಜನವಾಗಿಲ್ಲ.

ಮೈಸೂರಿನ ಸೌತ್ ವಿಭಾಗದ ಕ್ಷೇತ್ರ ಶಿಕ್ಷಣಾಧಿಕಾರಿ ರಘುನಂದನ್ ತೀರಾ ಕೆಳಮಟ್ಟಕ್ಕಿಳಿದು ಶಿಕ್ಷಕರನ್ನು ಪೀಡಿಸುತ್ತಿದ್ದಾನೆ. ಈತನ ಮೇಲೆ ಹಲವಾರು ದೂರುಗಳು ಬಂದರೂ ನಾಗೇಂದ್ರ ಸಾಹೇಬರು ಕ್ರಮಕೈಗೊಳ್ಳುತ್ತಿಲ್ಲ. ಇನ್ನು ಕೆ.ಆರ್ ನಗರದ ಕ್ಷೇತ್ರ ಶಿಕ್ಷಣಾಧಿಕಾರಿ ಮಂಜುಳ, ಹೆಚ್.ಡಿ.ಕೋಟೆಯ ಬಸವರಾಜು, ಪಿರಿಯಾಪಟ್ಟಣದ ಲೋಕೇಶ್ ಎಂಬ ಶಿಕ್ಷಣಾಧಿಕಾರಿಗಳು ದುಡ್ಡುಮಾಡುವುದರಲ್ಲೇ ಬ್ಯೂಸಿಯಾಗಿದ್ದಾರೆ.

ಟಿ.ನರಸೀಪುರ ಕ್ಷೇತ್ರ ಶಿಕ್ಷಣಾಧಿಕಾರಿ ಮಹದೇವಮ್ಮನ ಕಥೆ ಇನ್ನೂ ರೋಚಕ. ಈಯಮ್ಮ ಮೂಲತಃ ಟಿ.ನರಸೀಪುರ ತಾಲ್ಲೂಕು ಬಣವೆಯವಳು. ಈಕೆ ಸದಾ ಚಾಮರಾಜನಗರ ಜಿಲ್ಲೆಯ ಶಾಸಕರೊಬ್ಬರು ನನ್ನ ಸಂಬಂಧಿ ಎನ್ನುತ್ತಲೇ ಮೈಸೂರು ಜಿಲ್ಲೆ ಬಿಟ್ಟು ಕದಲುತ್ತಿಲ್ಲ. ಆದರೆ ಈಕೆ ಮತ್ತು ಆ ಶಾಸಕರ ಸಂಬಂಧದ ಬಗ್ಗೆ ಮೈಸೂರು ಜಿಲ್ಲೆಯೊಳಗೆ ಹಲವು ಕಥೆಗಳಿವೆ. ಈಕೆ ಹೇಳಿಕೇಳಿ ಟೆಂಡರ್ ಮತ್ತು ಕಮಿಷನ್ ಗಿರಾಕಿ. ತಾನು ದಲಿತೆ ಎನ್ನುತ್ತಲೇ ಅಮೇಧ್ಯ ಮೇಯುವುದರಲ್ಲಿ ಎತ್ತಿದ ಕೈ. ಆ ಕಾರಣಕ್ಕಾಗಿಯೇ ಕಳೆದ ತಿಂಗಳು ಒಂದುಸಾವಿರ ಲಂಚಪಡೆಯುತ್ತಾ ಲೋಕಾಯುಕ್ತರಿಗೆ ಸಿಕ್ಕಿಬಿದ್ದು ಮನೆಯಲ್ಲಿ ವಿರಾಮ ಪಡೆಯುತ್ತಿದ್ದಾಳೆ. ಇತ್ತೀಚೆಗೆ ತನ್ನ ಅಮಾನತ್ತನ್ನು ರದ್ದುಪಡಿಸಿಕೊಳ್ಳಲು ಅದೇ ಸಂಬಂಧಿ ಶಾಸಕರ ಜೊತೆ ಬಿಡುವಿಲ್ಲದೆ ಓಡಾಡುತ್ತಿದ್ದಾರೆನ್ನುವ ಸುದ್ದಿಯಿದೆ.

ಡಿಡಿಪಿಐ ನಾಗೇಂದ್ರ ಕುಮಾರ್ ಮತ್ತು ಪಟಾಲಂಗಳು ಇಡೀ ಶಿಕ್ಷಣ ಇಲಾಖೆಯನ್ನು ಹಾಳುಗೆಡವುತ್ತಾ, ವಿವಿಧ ಯೋಜನೆಗಳ ಹೆಸರಿನಲ್ಲಿ ಕೋಟ್ಯಾಂತರ ರೂಗಳನ್ನು ಲಪಟಾಯಿಸುತಿದ್ದಾರೆ. ಮೈಸೂರು ಜಿಲ್ಲೆಯಲ್ಲೇ ಹಲವಾರು ವರ್ಷ ಜಾಂಡಾ ಹೂಡಿರುವ ಅಧಿಕಾರಿಗಳನ್ನು ಕೂಡಲೇ ತೊಲಗಿಸಲು ಮತ್ತು ಮೈಸೂರು ಜಿಲ್ಲೆಯ ಶಿಕ್ಷಣ ಇಲಾಖೆಯ ಘನತೆಯನ್ನು ಉಳಿಸಲು ಹೋರಾಟ ಮಾಡಬೇಕಾದ ಜವಾಬ್ದಾರಿ ಪ್ರಜ್ಞಾವಂತ ಶಿಕ್ಷಕ ಸಮುದಾಯದ ಮೇಲಿದೆ. ಇದು ಸಾಧ್ಯವೇ?


• ಲಕ್ಷ್ಮಣ್ ಚೀರನಹಳ್ಳಿ

ಜೆಡಿಎಸ್ ನಾಯಕ ಚೌಡೇಗೌಡರ ಕಗ್ಗೊಲೆ
ಡೆಡ್ಲಿ ಸೋಮನ bloodly ತಮ್ಮ


ಚೌಡೇಗೌಡ ಶವವಾದಾಗ

ಡೆಡ್ಲಿ ಸೋಮನನ್ನೇ ಮರೆತ ಬೆಂಗಳೂರಿಗೆ ಆತನಿಗೊಬ್ಬ ತಮ್ಮನಿದ್ದಾನೆ, ಆತ ಕೂಡ ಅಣ್ಣನ ಹಾದಿಯಲ್ಲೇ ಕ್ರಿಮಿನಲ್ ಎನಿಸಿಕೊಳ್ಳುತ್ತಾನೆ ಎಂಬ ಅಂದಾಜಾದರೂ ಯಾರಿಗಿತ್ತು? ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ ಎಂಬ ಲೋಕಾರೂಢಿಗೆ ಸೋಮನಾಗಲಿ ಆತನ ತಮ್ಮನಾಗಲಿ ಹೇಗೆ ತಾನೇ ಹೊರತಾಗಲು ಸಾಧ್ಯ? ಅಷ್ಟಕ್ಕೂ ಕೊಲೆಯಾದ ಮುಳಬಾಗಿಲಿನ ಜೆಡಿಎಸ್ ನಾಯಕ ಚೌಡೇಗೌಡನಿಗೂ ಡೆಡ್ಲಿ ಸೋಮನ ತಮ್ಮ ರಾಮನಿಗೂ ಹಗೆಯಾಗಲಿ, ವ್ಯಾಜ್ಯವಾಗಲಿ ಇರಲೇ ಇಲ್ಲ. ಇದ್ದದ್ದು ಚೌಡೇಗೌಡ ಮತ್ತು ಆತನ ದಾಯಾದಿ ರಾಜೇಂದ್ರಗೌಡನ ಮಧ್ಯೆ.


• ರಾ.ಸೋಮನಾಥ್


ಕೊಲೆಯಾದ ಚೌಡೇಗೌಡ

ಸತ್ತ ಎಷ್ಟೋ ವರ್ಷಗಳ ನಂತರ ಮತ್ತೆ ನೆನಪಿಸುತ್ತಿದ್ದಾನೆ ಡೆಡ್ಲಿ ಸೋಮ!

ಈಗ ತಲೆ ಎತ್ತಿ ನಿಂತವನು ಆತನ ತಮ್ಮ ರಾಮ!

ರಾಮಮೂರ್ತಿ ಅಲಿಯಾಸ್ ಮುನಿರಾಮ ಆತನ ಪೂರ್ತಿ ಹೆಸರು. ಇದೇ ಜುಲೈ 8 ರಂದು ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕು ರಾಜೇಂದ್ರಹಳ್ಳಿಯಲ್ಲಿ ಅಮಾನುಷವಾಗಿ ಕೊಲ್ಲಲ್ಪಟ್ಟ ಜೆಡಿಎಸ್ ನಾಯಕ ಮತ್ತು ತಾಲ್ಲೂಕು ಪಂಚಾಯ್ತಿ ಸದಸ್ಯ ಚೌಡೇಗೌಡರ ಹತ್ಯೆಯ ಹಿಂದೆ ಕೇಳಿಬರುತ್ತಿರುವುದು ಡೆಡ್ಲಿ ಸೋಮನ ತಮ್ಮ ಮುನಿರಾಮನ ಹೆಸರು. ಮುನಿರಾಮ ಇದೇ ರಾಜೇಂದ್ರಹಳ್ಳಿಯ ಪಕ್ಕದ ಬಿ. ಗಡ್ದೂರಿನ ಕಾಂಗ್ರೆಸ್ ಪುಢಾರಿ. ಜೆಡಿಎಸ್ ನಾಯಕ ಚೌಡೇಗೌಡರ ಕೊಲೆ ಆರೋಪದ ಮೇಲೆ ಆತನನ್ನು ಮುಳಬಾಗಿಲು ಪೊಲೀಸ್ ಇನ್ಸ್‌ಪೆಕ್ಟರ್ ಶಿವಕುಮಾರ್ ಬಂಧಿಸಿದ್ದು, ಅಷ್ಟೇ ನಿಗೂಢವಾಗಿ ಆತನನ್ನು ಮುಳಬಾಗಿಲು ಹೊರವಲಯದ ನರಸಿಂಹತೀರ್ಥದ ಪೊಲೀಸ್ ಔಟ್‌ಪೋಸ್ಟಿನಲ್ಲಿ ಕೂಡಿಟ್ಟದ್ದು, ಆದರ ಮರುದಿನ ಅಂದರೆ ಜುಲೈ 9 ರ ಶನಿವಾರ ರಾತ್ರಿ ಆತ ಕಾವಲಿಗಿದ್ದ ಪೊಲೀಸ್‌ರನ್ನೇ ಅಟ್ಯಾಕ್ ಮಾಡಿ ಎಸ್ಕೇಪಾಗಿದ್ದು, ಈತನ ಪರಾರಿಯ ಹಿಂದೆ ಸದ್ಯ ಕೇಂದ್ರ ಮಂತ್ರಿ ಕೆ.ಎಚ್. ಮುನಿಯಪ್ಪನವರ ಹೆಸರು ಗುಲ್ಲೆದ್ದಿರುವುದು ಸೋಮನ ತಮ್ಮನ ನಟೋರಿಟಿಯ ಲಕ್ಷಣಗಳಷ್ಟೆ.


ಕೆ.ಎಚ್. ಮುನಿಯಪ್ಪ

ಡೆಡ್ಲಿ ಸೋಮನನ್ನೇ ಮರೆತ ಬೆಂಗಳೂರಿಗೆ ಆತನಿಗೊಬ್ಬ ತಮ್ಮನಿದ್ದಾನೆ, ಆತ ಕೂಡ ಅಣ್ಣನ ಹಾದಿಯಲ್ಲೇ ಕ್ರಿಮಿನಲ್ ಎನಿಸಿಕೊಳ್ಳುತ್ತಾನೆ ಎಂಬ ಅಂದಾಜಾದರೂ ಯಾರಿಗಿತ್ತು?

ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ ಎಂಬ ಲೋಕಾರೂಢಿಗೆ ಸೋಮನಾಗಲಿ ಆತನ ತಮ್ಮನಾಗಲಿ ಹೇಗೆ ತಾನೇ ಹೊರತಾಗಲು ಸಾಧ್ಯ? ಅಷ್ಟಕ್ಕೂ ಕೊಲೆಯಾದ ಮುಳಬಾಗಿಲಿನ ಜೆಡಿಎಸ್ ನಾಯಕ ಚೌಡೇಗೌಡನಿಗೂ ಡೆಡ್ಲಿ ಸೋಮನ ತಮ್ಮ ರಾಮನಿಗೂ ಹಗೆಯಾಗಲಿ, ವ್ಯಾಜ್ಯವಾಗಲಿ ಇರಲೇ ಇಲ್ಲ, ಇದ್ದದ್ದು ಚೌಡೇಗೌಡ ಮತ್ತು ಆತನ ದಾಯಾದಿ ರಾಜೇಂದ್ರಗೌಡನ ಮಧ್ಯೆ.

ಜೆಡಿಎಸ್ ನಾಯಕ ಆಲಂಗೂರು ಶ್ರೀನಿವಾಸ್‌ರ ಭದ್ರಕೋಟೆಯಂತಿದ್ದ ಮುಳಬಾಗಿಲು ಈಗ ಕಾಂಗ್ರೆಸ್ ಪಾಲಾಗಿದೆ. ಕೆ.ಎಚ್. ಮುನಿಯಪ್ಪನವರ ನಂಬಿಕಸ್ಥ ಅಮರೇಶ್ ಅಲ್ಲಿನ ಎಮ್ಮೆಲ್ಲೇ. ಸೋತ ಜೆಡಿಎಸ್ ಪಾಲಿಗೆ ಪಂಚಾಯ್ತಿ ಮತ್ತು ತಾಲ್ಲೂಕು ಪಂಚಾಯ್ತಿ ಎಲೆಕ್ಷನ್ನಿನಲ್ಲಿ ಚೂರುಪಾರು ವಿಜಯದ ರುಚಿ ಕಲ್ಪಿಸಿದ ಮುಳುಬಾಗಿಲಿನ ಅಪರೂಪದ ಜೆಡಿಎಸ್ ನಾಯಕನೆಂದರೆ ಆತ ರಾಜೇಂದ್ರ ಹಳ್ಳಿಯ ಚೌಡೇಗೌಡ!

ಈ ರಾಜೇಂದ್ರ ಹಳ್ಳಿಯ ಪಕ್ಕದ್ದೇ ಬಿ. ಗಡ್ದೂರು. ಅದು ಬೆಂಗಳೂರನ್ನೇ ನಡುಗಿಸಿದ ರಣಪಾತಕಿ ಡೆಡ್ಲಿ ಸೋಮನ ಹುಟ್ಟೂರು. ಸೋಮನ ತಂದೆ ಚಿನ್ನಸ್ವಾಮಿ ಇದೇ ಊರಿನ ಜಮೀನ್ದಾರ. ಮುಳಬಾಗಿಲು ತಾಲ್ಲೂಕು ಬೈರಕೂರು ಹೋಬಳಿಯ ಬಿ. ಗಡ್ದೂರಿನಲ್ಲಿ ಅವರಿಗೆ ಮುನ್ನೂರು ಎಕರೆಗೂ ಅಧಿಕ ಜಮೀನಿದೆ. ಸೋಮ ಹುಟ್ಟಿದ್ದು 1977 ರ ಆಗಸ್ಟ್ 10 ರಂದು. ಸೋಮನ ಅಣ್ಣ ಗುರುಮೂರ್ತಿ ಎಲೆಕ್ಟ್ರಿಕಲ್ ಇಂಜಿನಿಯರ್. ಮೂರನೆಯವನೇ ರಾಮಮೂರ್ತಿ ಅಲಿಯಾಸ್ ಮುನಿರಾಜು ಉರ್ಫ್ ರಾಮ. ಶ್ಯಾಮ್ ಎಂಬ ಮತ್ತೊಬ್ಬ ತಮ್ಮನೂ ಸೋಮನಿಗಿದ್ದಾನೆ.

ಆ ಕಾಲಕ್ಕೇ ಬೆಂಗಳೂರಿಗೆ ವಲಸೆ ಬಂದು ಕಾಟನ್‌ಪೇಟೆಯಲ್ಲಿ ಮನೆ ಮಾಡಿದ್ದ ತಂದೆ ಚಿನ್ನಸ್ವಾಮಿ ರಿಯಲ್ ಎಸ್ಟೇಟ್ ಜೊತೆಜೊತೆಗೇ ಮೈಸೂರು ರಸ್ತೆಯಲ್ಲಿ ಶ್ರೀರಾಮಾ ಫರ್ಫ್ಯೂಮರಿ ವರ್ಕ್ಸ್ ಎಂಬ ಅಗರಬತ್ತಿ ಫ್ಯಾಕ್ಟರಿ ನಡೆಸುತ್ತಿದ್ದರು. ಅದೇನಾಯಿತೋ 1991 ರ ಹೊತ್ತಿಗೆ ಹಿರಿಯ ಮಗ ಗುರುಮೂರ್ತಿ ಅನ್ಯಾಯವಾಗಿ ಕೊಲೆ ಕೇಸೊಂದಕ್ಕೆ ಸಿಲುಕಿಕೊಂಡ. ಆ ಹೊತ್ತಿಗೆ ಸೋಮ ಮತ್ತು ರಾಮ ಚಾಮರಾಜಪೇಟೆಯ ಶಾರದಾ ಸ್ತ್ರೀ ಸಮಾಜ ಸ್ಕೂಲಿನಲ್ಲಿ ಓದುತ್ತಿದ್ದರು.


ಮುಂದೆ ನ್ಯೂಫೋರ್ಟ್ ಹೈಸ್ಕೂಲಿನಲ್ಲಿ ಓದಿ ಪಿಯುಸಿಗೆ ಬರುವ ಹೊತ್ತಿಗೆ ಸೋಮ ಬೆಂಗಳೂರು ಪಾತಕದ ಚಾಲುಗಳನ್ನೆಲ್ಲ ಕಲಿತುಬಿಟ್ಟಿದ್ದ. ಕಾಟನ್‌ಪೇಟೆ, ಅಕ್ಕಿಪೇಟೆ, ರಾಣಾಸಿಂಗ್‌ಪೇಟೆ ಏರಿಯಾಗಳ ಸಂಸ್ಕೃತಿಯೇ ಹಾಗಿದ್ದ ಮೇಲೆ ಇನ್ನು ಸೋಮನಾಗಲಿ ಆತನ ತಮ್ಮ ರಾಮನಾಗಲಿ ಅದರಿಂದ ಹೇಗೆ ಹೊರತಾಗಲು ಸಾಧ್ಯ?

ಅದೇ ಹೊತ್ತಿಗೆ ತಂದೆ ಚಿನ್ನಸ್ವಾಮಿಗೆ ಮುಳಬಾಗಿಲಿನ ಅವರ ಸಂಬಂಧಿಯೊಬ್ಬ ಕಿರುಕುಳ ನೀಡುತ್ತಿದ್ದ. ಇದರಿಂದ ರೋಸತ್ತಿದ್ದ ತಂದೆ ಚಿನ್ನಸ್ವಾಮಿ ಮಕ್ಕಳ ಮುಂದೇ ಕಣ್ಣೀರಿಟ್ಟಿದ್ದರು. ಅದೇನೆನಿಸಿತೋ ಮುಳಬಾಗಿಲು ಕೋರ್ಟಿಗೆ ಪೇಡಿಸುತ್ತಿದ್ದ, ಆ ಸಂಬಂಧಿ ಬರುತ್ತಾರೆಂಬುದು ಗೊತ್ತಾಗಿದ್ದೇ ಬಿಡ್ಡ, ಸತ್ಯರನ್ನು ಜೊತೆಹಾಕಿಕೊಂಡಿದ್ದೇ ಮುಳಬಾಗಿಲಿಗೆ ಬಂದ ಸೋಮ ಕೋರ್ಟಿನ ಎದುರಿನ ರಸ್ತೆಯಲ್ಲೇ ಆ ಸಂಬಂಧಿಯನ್ನು ಹಿಡಿದು ಕತ್ತರಿಸಿಬಿಟ್ಟ.

ಬಹುಶಃ ಅದು ಮುಳಬಾಗಿಲಿನ ಲೆಕ್ಕಕ್ಕೆ ಭಯಾನಕ ಘಟನೆಯಾಗಿತ್ತು. ದಾಳಿಗೆ ಸಿಲುಕಿದ ಆ ಸಂಬಂಧಿ ಅದೃಷ್ಟವಶಾತ್ ಬದುಕಿದನಾದರೂ ಸೋಮ, ಬಿಡ್ಡ ಮತ್ತು ಸತ್ಯ ಮೂವರು ಕೋಲಾರ ಜೈಲಲ್ಲಿ ಒಂದು ತಿಂಗಳಿದ್ದು ಬಂದರು. ಅದು ಸೋಮನ ಮೊದಲ ಕ್ರೈಮ್ ಮತ್ತು ಜೈಲು.

ಮುಳಬಾಗಿಲಿನಲ್ಲಿ ಅವತ್ತು ತಂದೆಯ ದುಷ್ಮನ್ ಮೇಲೆ ಭಯಂಕರವಾಗಿ ಎರಗಿದ ಸೋಮನ ಜೊತೆ ತಮ್ಮ ರಾಮ ಕೂಡ ಇದ್ದನಂತೆ. ಹುಡುಗ ಚಿಕ್ಕವನಾದ್ದರಿಂದ ಬಹುಶಃ ಯಾರೂ ಅದನ್ನು ಗಮನಿಸಲಿಲ್ಲ.

ಮುಂದೆ ಸೋಮ ಶಿಷ್ಯ ರಾಜಶೇಖರನನ್ನು ಬಿಟ್ಟು ಪೇಟೆನಾಗನ ಶಿಷ್ಯ ವಸಂತನನ್ನು ಕೊಲ್ಲಿಸಿದ. ಬೆನ್ನಲ್ಲೇ ಪೇಟೆ ನಾಗನನ್ನೂ ಸೋಮನ ಗ್ಯಾಂಗ್ ಬಳೇಪೇಟೆ ಸರ್ಕಲ್ಲಿನ ನಟ್ಟನಡುವಲ್ಲಿ ಕೊಂದು ಹಾಕಿತು. ನಾಗನ ಕೊಲೆ ಕೇಸಿನಲ್ಲಿ ಜೈಲಿಗೆ ಹೋದವನು 1993 ಅಕ್ಟೋಬರ್ 5 ರಂದು ಸಿಟಿ ಕೋರ್ಟ್ ಆವರಣದಿಂದಲೇ ಪೊಲೀಸರ ಕಣ್ಣು ತಪ್ಪಿಸಿ ಎಸ್ಕೇಪಾದ. ಹಾಗೇ ಎಸ್ಕೇಪಾದ ಸೋಮ ಅವತ್ತು ಹಿರಿಯ ವಕೀಲರೊಬ್ಬರ ಬಳಿಹೋಗಿ ತಾನು ಸೋಮನ ತಮ್ಮ ರಾಮು ಎಂದು ಪರಿಚಯಿಸಿಕೊಂಡು ಪೊಲೀಸರು ಬಂಧಿಸಿಟ್ಟಿದ್ದ ಬಿಡ್ಡನ ಪರ ಹೈಬಿಯಸ್ ಕಾರ್ಪಸ್ ಹಾಕಿಸಲು ಯತ್ನಿಸಿದ್ದ. ಸೋಮನಿಗೂ ಆತನ ತಮ್ಮ ರಾಮುಗೂ ರೂಪ, ಗಾತ್ರ, ನಡೆ-ನುಡಿಯಲ್ಲಿ ನೂರಕ್ಕೆ ನೂರರಷ್ಟು ಹೋಲಿಕೆಯಿತ್ತು!


ರಾಜೇಂದ್ರ

ಇದಾಗಿ ಕೆಲದಿನಕ್ಕೆ ಕಾಟನ್‌ಪೇಟೆಯ ಲಾಡ್ಜ್ ಒಂದರಲ್ಲಿ ಸಿಕ್ಕಿಬಿದ್ದ ಸೋಮ ಜೈಲಲ್ಲಿದ್ದುಕೊಂಡೇ ಕಾಟನ್‌ಪೇಟೆ ಪುಷ್ಪನ ಶಿಷ್ಯ ಕುಳ್ಳ ನಾರಾಯಣನನ್ನು ಕೊಲ್ಲಿಸಿದ. ತನ್ನ 23 ನೇ ವಯಸ್ಸಿಗೇ ಮೂರು ಭಯಾನಕ ಹತ್ಯೆ ಮತ್ತು ಅಸಂಖ್ಯಾತ ಅಪರಾಧಗಳಲ್ಲಿ ಅಪರಾಧಿಯಾಗಿದ್ದ ಸೋಮ ಅಂತಿಮವಾಗಿ ಇನ್ಸ್‌ಪೆಕ್ಟರ್ ಅಬ್ದುಲ್ ಅಜೀಮ್ ಮತ್ತು ಅಶೋಕ್‌ಕುಮಾರ್ ಗುಂಡಿಗೆ ಸಿಲುಕಿ ಅಲಸೂರು ಸ್ಮಶಾನದಲ್ಲಿ ಹೆಣವಾದ.



ಬೆಂಗಳೂರು ಅಂಡರ್‌ವರ್ಲ್ಡ್ ಮಟ್ಟಿಗೆ ಸೋಮ ಇವತ್ತಿಗೂ ದುಸ್ವಪ್ನವೇ. ಆದರೆ ಯಾರೂ ಗಮನಿಸದ ಸಂಗತಿಯೆಂದರೆ ಥೇಟು ಸೋಮನನ್ನೇ ಹೋಲುವ, ಆತನಿಗಿಂತಲೂ ಎರಡು ವರ್ಷ ಕಮ್ಮಿಯ ಆತನ ತಮ್ಮ ರಾಮು ಮುಂದೆ ಏನಾದ? ಎಲ್ಲಿಗೆ ಹೋದ? ಎಂಬುದು. ಅಣ್ಣ ಗುರುಮೂರ್ತಿ ಮತ್ತು ಕೊನೇ ತಮ್ಮ ಶ್ಯಾಮ್‌ನನ್ನು ಹೊರತುಪಡಿಸಿದರೆ ತನ್ನೆಲ್ಲಾ ಘಾತಕ ಚಟುವಟಿಕೆಗೆ ಸೋಮ ತನ್ನ ತದ್ರೂಪಿಯನ್ನಾಗಿ ಬಳಸುತ್ತಿದ್ದದ್ದು ತಮ್ಮ ರಾಮನನ್ನು!

ಕೆಲವೊಮ್ಮೆ ಸೋಮನ ಪರವಾಗಿ ತಮ್ಮ ರಾಮನೇ ಕೋರ್ಟ್ ಕೇಸುಗಳಿಗೆ ಹಾಜರಾಗುತ್ತಿದ್ದ. ಅಣ್ಣ ಇನ್ನೆಲ್ಲೋ ಅವಿತುಕೂತಿದ್ದರೆ ತಾನೇ ಸೋಮ ಎಂದುಕೊಂಡು ರಾಮ ಆಕ್ಟಿವಿಟಿಯಲ್ಲಿರುತ್ತಿದ್ದ. ಸೋಮನ ಎನ್‌ಕೌಂಟರ್ ನಂತರ ರಾಮ ಕಾಣೆಸಿಕೊಂಡಿದ್ದು ಮುಳಬಾಗಿಲಿನ ಹುಟ್ಟೂರು ಗಡ್ದೂರಿನಲ್ಲಿ. 2007 ರ ಹೊತ್ತಿಗಾಗಲೇ ರಾಮಮೂರ್ತಿ ಗಡ್ದೂರಿನ ಜನಕ್ಕೆ ಮುನಿರಾಮನಾಗಿ ಪರಿಚಿತನಾಗಿದ್ದ. ತಂದೆಯ 300 ಎಕರೆಯಲ್ಲಿ ನೀಲಗಿರಿ, ಕಬ್ಬು, ಬತ್ತ, ರಾಗಿ ಬೆಳೆಯಲಾರಂಭಿಸಿದ. ಪಕ್ಕದಲ್ಲೇ ಒಂದು ಕೋಳಿ ಫಾರ್ಮ್ ತೆರೆದ. ಬೆಂಗಳೂರಿನ ಹುಡುಗಿಯೊಬ್ಬಳನ್ನು ಪ್ರೀತಿಸಿ ಮದುವೆಯಾದ. ತಂದೆ ಸತ್ತ ನಂತರ ಸಮಸ್ತ ಆಸ್ತಿ ಮತ್ತು ಸೋಮನ ಅಳಿದುಳಿದ ಶಿಷ್ಯರ ಪಾಲಿಗೆ ಅಕ್ಷರಶಃ ಡೆಡ್ಲಿ ಸೋಮನೇ ಆಗಿ ಹೋದ ರಾಮಮೂರ್ತಿಗೆ ಸ್ಥಳೀಯವಾಗಿ ಗಾಡ್‌ಫಾದರ್ ಓರ್ವ ಒದಗಿಬಂದಿದ್ದ. ಆತನೇ ರಾಜೇಂದ್ರಹಳ್ಳಿಯ ಕಾಂಗ್ರೆಸ್ ನಾಯಕ ರಾಜೇಂದ್ರ ಗೌಡ!

ಕೇಂದ್ರ ಮಂತ್ರಿ ಕೆ.ಎಚ್. ಮುನಿಯಪ್ಪನವರ ಪಾಲಿಗೆ ರಾಜೇಂದ್ರ ಗೌಡ ನಂಬಿಕಸ್ತ ಬಂಟ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್‌ನ ಆಲಂಗೂರು ಶ್ರೀನಿವಾಸರನ್ನು ಕಾಂಗ್ರೆಸ್‌ನ ಅಮರೇಶ್ ಸೋಲಿಸಿದ್ದು ಕೂಡ ಇದೇ ರಾಜೇಂದ್ರ ಗೌಡನ ಬೆಂಬಲದಿಂದ. ತನ್ನೆಲ್ಲಾ ಹೊಡೆದಾಟ ಬಡಿದಾಟಕ್ಕೆಂದು ರಾಜೇಂದ್ರ ಗೌಡ ಬಳಸುತ್ತಿದ್ದದ್ದು ಸೋಮನ ತಮ್ಮ ಮುನಿರಾಜು ಅಲಿಯಾಸ್ ರಾಮಮೂರ್ತಿಯನ್ನು.

ಆದರೆ ಮುನಿರಾಜು ಉರ್ಫ್ ರಾಮ ಹೆಚ್ಚುಕಾಲ ಬೆಂಗಳೂರಿನಲ್ಲೇ ಕಳೆಯುತ್ತಿದ್ದ. ಜೀವನಭೀಮಾನಗರ ಪೊಲೀಸ್ ಠಾಣೆ ವ್ಯಾಪ್ತಿಯ ನ್ಯೂತಿಪ್ಪಸಂದ್ರದಲ್ಲಿ ಮನೆ ಮಾಡಿಕೊಂಡಿದ್ದು, ಅಲ್ಲಿಂದಲೇ ತನ್ನ ಹುಟ್ಟೂರಿನ ವಹಿವಾಟನ್ನು ನಿಭಾಯಿಸುತ್ತಿದ್ದ ರಾಮು ಇಲ್ಲಿಗೆ ಎರಡು ವರ್ಷದ ಹಿಂದೆ ಆಂಧ್ರದಲ್ಲಿ ಯಾರೋ ಮುಸ್ಲಿಂ ರೌಡಿಯೊಬ್ಬನನ್ನು ಕೊಂದು ಜೈಲು ಪಾಲಾದ ಸುದ್ದಿ ಬಂತು. ಕೋಲಾರದ ಪೊಲೀಸರಿಗೆ ಸೋಮನ ತಮ್ಮನೂ ಅಣ್ಣನ ಚಾಳಿಗಿಳಿದ ಸುದ್ದಿಯಿತ್ತಾದರೂ ಲೋಕಲ್ಲಾಗಿ ಕಾಂಗ್ರೆಸ್ಸೇ ಅಧಿಕಾರದಲ್ಲಿತ್ತಾದ್ದರಿಂದ ರಾಮನನ್ನು ಕಾಂಗ್ರೆಸ್ ನಾಯಕನೆಂದೇ ಪರಿಗಣಿಸಬೇಕಾಯ್ತು.

ಈ ಮಧ್ಯೆ ರಾಮನ ಕ್ರಿಮಿನಲ್ ಚಟುವಟಿಕೆಯಿಂದಾಗಿ ಮುಳಬಾಗಿಲಿನ ಕಾಂಗ್ರೆಸ್ಸಿಗೂ ಬಿಸಿ ಮುಟ್ಟಿದ್ದು ಆತನ ಗಾಡ್‌ಫಾದರ್ ರಾಜೇಂದ್ರಗೌಡನ ಸೋಲಿನ ಮೂಲಕವೆ. ಆ ಹೊತ್ತಿಗಾಗಲೇ ರಾಜೇಂದ್ರ ಹಳ್ಳಿಯಲ್ಲಿ

...ಮ್ ನಾಯಕ ಚೌಡೇಗೌಡನ ಪರ್ವ ಶುರುವಾಗಿತ್ತು. ...ಕಶ್ಚಿತ್ ಕೆಎಸ್‌ಆರ್‌ಟಿಸಿ ಕಂಡಕ್ಟರ್ ಆಗಿದ್ದ ...ಡೇಗೌಡ ವಿಚಾರವಂತ ಮತ್ತು ಸರಳ. ರಾಜೇಂದ್ರ ...ನ ಗೂಂಡಾಗಿರಿಗೆ ರೋಸತ್ತಿದ್ದ ಜನ ವರಸೆಯಲ್ಲಿ ...ನ ದಾಯಾದಿಯಾಗಿದ್ದ ಚೌಡೇಗೌಡನ ಬೆಂಬಲಕ್ಕೆ ...ರು.. ರಾಜೇಂದ್ರ ಗೌಡ ಮೊದಲು ಹಾಲು ...ತ್ಪಾದಕರ ಸಂಘದ ಚುನಾವಣೆಯಲ್ಲಿ ಸೋತ. ನಂತರ ...ದ ತಾಲ್ಲೂಕು ಪಂಚಾಯ್ತಿ ಎಲೆಕ್ಷನ್ನಿನಲ್ಲಿ ಬೂಡದೂರು ...ತ್ರಕ್ಕೆ ರಾಜೇಂದ್ರಗೌಡನ ವಿರುದ್ಧ ಚೌಡೇಗೌಡನೇ ...ಮಿ ಗೆದ್ದ.


...ಬೆನ್ನಲ್ಲೇ ರಾಜೇಂದ್ರ ಗೌಡನಿಗೆ ಮತ್ತೊಂದು ಆಘಾತ ...ತ್ತು. ಚೌಡೇಗೌಡರ ಪತ್ನಿ ಉಮಾದೇವಿ ಅಲಿಯಾಸ್ ...ಮ್ಮನ ವಿರುದ್ಧ ರಾಜೇಂದ್ರ ಗೌಡ ತನ್ನ ಅಣ್ಣ ...ಡೇಗೌಡನ ಪತ್ನಿ ಗೀತಮ್ಮನನ್ನು ನಿಲ್ಲಿಸಿದ್ದ. ಇಲ್ಲೂ ...ಡೇಗೌಡನ ಪತ್ನಿಯೇ ಗೆದ್ದು ಪಂಚಾಯ್ತಿ ...ಕ್ಷೆಯಾದಳು. ಆ ಕಾಲದಿಂದ ಮೆರೆದ ರಾಜೇಂದ್ರ ...ನನಿಗೆ ಇದು ದೊಡ್ಡ ಮುಖಭಂಗ. ಇದಕ್ಕೆ ತಕ್ಕಂತೆ ...ಜೇಂದ್ರಹಳ್ಳಿಯಲ್ಲಿ ಸರ್ಕಾರಿ ಆಸ್ಪತ್ರೆಯ ಕಾಮಗಾರಿ ...ಮು 90 ಲಕ್ಷ ರೂಪಾಯಿ ಮಂಜೂರಾಯಿತು. ...ರ ನಡುವಿದ್ದ ಹಳೇ ಆಸ್ಪತ್ರೆ ಆವರಣದಲ್ಲೇ ...ಾರೆಕರೆಯಲ್ಲಿ ಆಸ್ಪತ್ರೆ ಕಟ್ಟಬೇಕೆಂದು ಚೌಡೇಗೌಡ ...ಕ್ಕೆ ಬಿದ್ದರೆ ರಾಜೇಂದ್ರ ಗೌಡ ಊರ ಹೊರಭಾಗದಲ್ಲಿ ...ಸ್ಪತ್ರೆ ನಿರ್ಮಿಸಬೇಕೆಂದು ಪಟ್ಟು ಹಿಡಿದ.

ಏಕೆಂದರೆ ಹಳೇ ಆಸ್ಪತ್ರೆ ಪಕ್ಕದಲ್ಲೇ ರಾಜೇಂದ್ರ ...ಡನ ಕೋಳಿ ಫಾರಮ್ ಇತ್ತು!

ಇದೆಲ್ಲವನ್ನೂ ಮೀರಿ ದಾಯಾದಿ ರಾಜೇಂದ್ರ ಗೌಡನ ...ಾಯಕ್ಕೇ ಚೌಡೇಗೌಡ ಕೊಳ್ಳಿಯಿಟ್ಟ. NREGA ...ದರೆ ಉದ್ಯೋಗ ಖಾತ್ರಿ ಯೋಜನೆಯಲ್ಲಿ ರಾಜೇಂದ್ರ ...ಡ ಕಳ್ಳಬಿಲ್ಲು ಹಾಕಿ ನುಂಗಿಹಾಕಿದ್ದ ಸರಿಸುಮಾರು ... ಲಕ್ಷ ರೂಪಾಯಿಗಳಷ್ಟು ಅಕ್ರಮವನ್ನು ಪತ್ತೆಹಚ್ಚಿ ...ವನ್ನು ವಸೂಲಿ ಮಾಡುವಂತೆ ಜಿಲ್ಲಾಡಳಿತಕ್ಕೆ ದೂರು ...ಟ್ಟ.

ಗೆದ್ದರೆ ಗೆಲ್ಲಲಿ ಎಂದು ಸುಮ್ಮನಾದರೆ ತನ್ನ ...ವ್ಯವಹಾರಕ್ಕೆ ಕೈಯಿಟ್ಟು ಬೆನ್ನತ್ತಿದ ಚೌಡೇಗೌಡನನ್ನು ...ಾಲಿ ಮಾಡಿಬಿಡುವಂತೆ ಡೆಡ್ಲಿ ಸೋಮನ ತಮ್ಮನಿಗೆ ...ಜೇಂದ್ರ ಗೌಡ ಸುಪಾರಿ ಕೊಟ್ಟ. ಎಷ್ಟೆಂದರೂ ರಾಮು ...ಳಗಿದ ಕ್ರಿಮಿನಲ್. ಜುಲೈ 8 ರ ಅಪರಾಹ್ನ ...ಬಂದೂವರೆಗೆ ಊಟಕ್ಕೆಂದು ಬಂದ ಚೌಡೇಗೌಡ ಏನೋ ...ಸ್ವಾದಂತಾಗಿ ಮಲಗಿದ್ದಾನೆ. ಕೊಂಚ ಹೊತ್ತಿಗೇ ನಾಲ್ವರು ...ಪರಿಚಿತರು ಬಂದು ಅಣ್ಣಾವ್ರನ್ನ ನೋಡಬೇಕು ...ಬಂದಿದ್ದಾರೆ. ಒಂಬತ್ತನೇ ತರಗತಿ ಓದುವ ಚೌಡೇಗೌಡರ ...ಮಗ ಬಂದವರಿಗೆಂದು ಕುರ್ಚಿ ತರಲು ಹೋದರೆ ...ತ್ನಿ ಪದ್ಮಮ್ಮ ಕಾಫಿ ಮಾಡಲು ಅಡಿಗೆ ಮನೆಗೆ ...ಹೋಗಿದ್ದಾಳೆ. ಮಗ ಕುರ್ಚಿ ಸಮೇತ ಹೊರಬಂದರೆ ...ದೃಶ್ಯ ಭಯಾನಕವಾಗಿತ್ತು.

ಬಂದಿದ್ದ ಆ ನಾಲ್ವರೂ ಆಗಂತುಕರು ಮಲಗಿದ್ದ ಚೌಡೇಗೌಡರನ್ನು ಲಾಂಗು ಮಚ್ಚುಗಳಿಂದ ಕುರಿ ಕತ್ತರಿಸಿದಂತೆ ಕೊಚ್ಚುತ್ತಿದ್ದರು. ದುರುಳರ ವಿರುದ್ಧ ಹೋರಾಟಕ್ಕಿಳಿದಿದ್ದ ಚೌಡೇಗೌಡ ಹೆಣವಾಗಿದ್ದ.



ಶಾಸಕ ಅಮರೇಶ್


ಪತ್ನಿ ಪದ್ಮಮ್ಮ ಸಂಬಂಧಿ ರಾಜೇಂದ್ರ ಗೌಡ ಮತ್ತು ...ಸೋಮನ ತಮ್ಮ ರಾಮನ ವಿರುದ್ಧ ನಂಗಲಿ ಪೊಲೀಸರಿಗೆ ...ದೂರು ಕೊಟ್ಟಿದ್ದಾಳೆ. ಕೊಂದವರು ಅಪರಿಚಿತ ಹಂತಕರು. ...ನಂಗಲಿ ಪೊಲೀಸ್ ಇನ್ಸ್‌ಪೆಕ್ಟರ್ ಶಿವಕುಮಾರ್ ಆವತ್ತೇ ...ರಾಮನನ್ನು ಬಂಧಿಸಿದ್ದಾರೆ. ಹಾಗೆ ಹಿಡಿದವನನ್ನು ...ಮುಳಬಾಗಿಲು ಪೊಲೀಸ್ ಠಾಣೆಯಲ್ಲಿಡಬಹುದಿತ್ತು. ...ಅಥವಾ ನಂಗಲಿ ಪೊಲೀಸ್ ಠಾಣೆಯಲ್ಲಾದರೂ ಕೂಡಿ ...ಹಾಕಬಹುದಿತ್ತು. ಅದೇನು ಮರ್ಮವೋ ಗೊತ್ತಿಲ್ಲ. ...ಮುಳಬಾಗಿಲಿನಿಂದ 2 ಕಿ.ಮೀ. ದೂರದ ಚಿತ್ತೂರು ...ರಸ್ತೆಯ ಅಷ್ಟೇನೂ ಸುರಕ್ಷಿತವಲ್ಲದ ನರಸಿಂಹತೀರ್ಥದ ...ಪೊಲೀಸ್ ಉಪಠಾಣೆಯಲ್ಲಿ ರಾಮನನ್ನು ...ಬಂಧಿಸಿಡಲಾಗಿತ್ತು. ಕಾವಲಿಗಿದ್ದದ್ದು ಕೇವಲ ನಾಲ್ವರು ...ಪೇದೆಗಳು. ಇಬ್ಬಿಬ್ಬರಂತೆ ಪಾಳಿಯಲ್ಲಿ ಕಾಯುತ್ತಿದ್ದ ...ಪೊಲೀಸರಿಗೆ ಜುಲೈ 9 ರ ಶನಿವಾರ ಮೂತ್ರ ವಿಸರ್ಜನೆಗೆ ...ಹೋಗುತ್ತೇನೆಂದು ಯಾಮಾರಿಸಿದ ರಾಮ ...ಪರಾರಿಯಾಗಿದ್ದಾನೆ.

ಕೋಲಾರದ ಪೊಲೀಸರು ಹುಡುಕುತ್ತಿದ್ದಾರಂತೆ. ಡೆಡ್ಲಿ ಸೋಮನ ತಮ್ಮ ಕೇವಲ ರೂಪದಲ್ಲಷ್ಟೇ ...ಅಲ್ಲ, ಗುಣ-ಸ್ವಭಾವದಲ್ಲೂ bloodly ಯೇ.....!

ಈಗ ಶುರುವಾಗಿರುವುದು ಡೆಡ್ಲಿ ಸೋಮನ ಭಾಗ ...2 ❖

ಮಂಗಳೂರು ಹೋರಾಟದ ವೇದಿಕೆಯಲ್ಲಿ ಪೇಜಾವರರ ನಾಟಕ!


ವಿಶೇಷ ಆರ್ಥಿಕವಲಯ ವಿರೋಧೀ ಹೋರಾಟಕ್ಕೆ ಜಯ ಸಿಕ್ಕಿದೆ. ಆದರೆ ವ್ಯವಸ್ಥಿತ ಹೋರಾಟವೊಂದನ್ನ ಸಂಘಟಿಸಿ ಬೆಳೆಸಿದ ಶ್ರಮ ದಾರುಣವಾಗಿ ಅಂತ್ಯ ಕಂಡಿದೆ. ಅಷ್ಟರಮಟ್ಟಿಗೆ ಪೇಜಾವರರು ಸರ್ಕಾರದೊಂದಿಗಿನ ಒಡಂಬಡಿಕೆಯ ನಾಟಕದಲ್ಲಿ ಸಮರ್ಥವಾಗಿ ಪಾತ್ರ ನಿರ್ವಹಣೆ ಮಾಡಿದ್ದಾರೆ. ಈ ಸತ್ಯಕ್ಕೆ ತೆರೆದುಕೊಳ್ಳುವ ಮನಸ್ಥಿತಿ ಕಳೆಕೊಂಡ ಮಂದಿ "ನೀವೆಂತ, ಸ್ವಾಮಿಗಳು ಹೋದಲ್ಲೆಲ್ಲ ಕೊಂಕು ಹುಡುಕುವುದು" ಅಂತ ಮೂಗು ಮುರಿಯಬಹುದೇನೋ... ಆದರೆ ವಾಸ್ತವವನ್ನು ಮುಚ್ಚಿಡುವುದು ಕಷ್ಟದ ಕೆಲಸ. ಪೇಜಾವರರ ದಿಢೀರ್ ಗೆಲುವಿನ ಹಿಂದೆ ರೋಚಕವಾದುದೊಂದು ಸಂಚಿನ ಕಥೆಯಿದೆ.



ಮಂಗಳೂರು ವಿಶೇಷ ಆರ್ಥಿಕ ವಲಯದ ಎರಡನೇ ಹಂತಕ್ಕಾಗಿ ಅಧಿಸೂಚನೆ ಗೊಳಿಸಿದ 2035 ಎಕರೆ ಪ್ರದೇಶವನ್ನು ಡಿನೋಟಿಫೈಗೊಳಿಸಬೇಕು ಮತ್ತು ನಾಗಾರ್ಜುನ ಉಷ್ಣ ವಿದ್ಯುತ್ ಸ್ಥಾವರದ ಸಾಧಕ ಬಾಧಕ ಅಧ್ಯಯನದ ತಂಡದಲ್ಲಿ ನಾಗರಿಕರ ಪರವಾಗಿ ಇಬ್ಬರನ್ನು ಸೇರಿಸಿಕೊಳ್ಳಬೇಕು ಎಂದು ಆಗ್ರಹಿಸಿ ಪೇಜಾವರ ವಿಶ್ವೇಶತೀರ್ಥ ಸ್ವಾಮಿಗಳು ಜುಲೈ 13ರಂದು ಉಪವಾಸ ಕುಳಿತುಕೊಳ್ಳುವುದಾಗಿ ಜುಲೈ 12 ರಂದು ಅಂತಿಮ ನಿರ್ಧಾರ ಪ್ರಕಟಿಸಿದ್ದರು. ಇದಾಗಿ ಒಂದೆರಡು ತಾಸುಗಳಲ್ಲೇ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಮಾಧ್ಯಮ ಹೇಳಿಕೆಯನ್ನು ನೀಡಿ "ಪೇಜಾವರ ಶ್ರೀಗಳ ಬೇಡಿಕೆಗೆ ಸರಕಾರ ಒಪ್ಪಿದೆ. 2035.31 ಎಕರೆಯಲ್ಲಿ 1998.03 ಎಕರೆ ಪ್ರದೇಶವನ್ನು ಡಿನೋಟಿಫೈ ಮಾಡಲಾಗುವುದು. ಉಳಿದ 37.27 ಎಕರೆ ಪ್ರದೇಶ ರಸ್ತೆ ಮತ್ತಿತರರ ಮೂಲಭೂತ ಸೌಕರ್ಯಗಳಿಗೆ ಬೇಕಾಗಿದೆ" ಎಂದಿದ್ದರು.

ವಾಸ್ತವವೆಂದರೆ ಮುರುಗೇಶ್ ನಿರಾಣಿ ಈ ಉತ್ತರವನ್ನು ಜೂನ್ 26 ರಂದೇ ಸಿದ್ಧಪಡಿಸಿದ್ದರು !

ಜೂನ್ 26ರಂದು ರವಿವಾರ ಮುಖ್ಯಮಂತ್ರಿಯವರ ಖಾಸಗಿ ನಿವಾಸದಲ್ಲಿ ಮಂಗಳೂರು ವಿಶೇಷ ಆರ್ಥಿಕ ವಲಯದ ವಿವಾದದ ಕುರಿತಾಗಿಯೇ ಸಭೆ ಕರೆಯಲಾಗಿತ್ತು. ಮುಖ್ಯಮಂತ್ರಿಯ ಅಧ್ಯಕ್ಷತೆಯಲ್ಲಿ ಜರುಗಿದ ಈ ಸಭೆಯಲ್ಲಿ ನಿರಾಣಿ, ಕೃಷ್ಣ ಪಾಲೇಮಾರ್, ನಳಿನ್ ಕುಮಾರ್ ಕಟೀಲು, ಶೋಭಾ ಕರಂದ್ಲಾಜೆ, ಈಶ್ವರಪ್ಪ ಹಾಗೂ ಮಂಗಳೂರು ಕೃಷಿ ಭೂಮಿ ಸಂರಕ್ಷಣಾ ಸಮಿತಿಯ ಅಧ್ಯಕ್ಷ ಮಧುಕರ ಅಮೀನ್, ಆರ್‌ಎಸ್‌ಎಸ್‌ನ ಕಲ್ಲಡ್ಕ ಪ್ರಭಾಕರ ಭಟ್, ಜಯದೇವ್ ಭಾಗವಹಿಸಿದ್ದರು. ಸುಮಾರು 8 ಗಂಟೆಗೆ ಆರಂಭವಾದ ಸಭೆ 9.30ಕ್ಕೆ ಕೊನೆಗೊಂಡಿತ್ತು. ಈ ಅಧಿಕೃತ ಸಭೆಯಲ್ಲಿ 1998.03 ಎಕರೆ ಜಮೀನನ್ನು ಡಿನೋಟಿಫೈ ಮಾಡುವ ಕುರಿತು ನಿರ್ಧಾರ ಕೈಗೊಳ್ಳಲಾಗಿತ್ತು.



ನಿರಾಣಿ

ಎಸ್‌ಇಝೆಡ್ ವಿರುದ್ಧ ದಲಿತರಿಂದ ಆರಂಭವಾದ ರೈತ ಹೋರಾಟವನ್ನು ಪೇಜಾವರರ ಕೈಗೆ ಒಪ್ಪಿಸಿದ ಕೃಷಿ ಭೂಮಿ ಸಂರಕ್ಷಣಾ ಸಮಿತಿಯ ಅಧ್ಯಕ್ಷ ಮಧುಕರ ಅಮೀನ್ ಈ ಸಭೆಯಲ್ಲಿದ್ದರು ಎಂಬುದು ಇಲ್ಲಿ ಮುಖ್ಯವಾಗುತ್ತದೆ. ಅಮೀನ್ ಈ ಸಭೆಯ ನಿರ್ಣಯಗಳನ್ನು ಪೇಜಾವರ ಸ್ವಾಮಿಯ ಗಮನಕ್ಕೆ ತಂದಿಲ್ಲದಿರುವ ಸಾಧ್ಯತೆಗಳೇ ಇಲ್ಲ. ಇನ್ನೊಂದೆಡೆ ಆರ್‌ಎಸ್‌ಎಸ್ ಪ್ರಮುಖರಿದ್ದ ಸಭೆಯ ನಿರ್ಣಯಗಳು ಪೇಜಾವರ ಶ್ರೀಗಳಿಗೆ ತಿಳಿದೇ ತಿಳಿಯುತ್ತದೆ. ಹಾಗಿದ್ದರೆ ಜೂನ್ 26ರಂದು ಸರಕಾರ 1998.03 ಎಕರೆಯನ್ನು ಡಿನೋಟಿಫೈಗೊಳಿಸಲು ನಿರ್ಧಾರ ಮಾಡಿತ್ತಾದರೂ ಜುಲೈ 12 ರಂದು ಪೇಜಾವರ ಪತ್ರಿಕಾಗೋಷ್ಠಿ ನಡೆಸಿ ನಿರಶನ ಕೈಗೊಳ್ಳುವ ನಿರ್ಧಾರ ಮಾಡಿದ್ದೇಕೆ? ಜೂನ್ 26 ರಂದು ಮಾಡಿದ ನಿರ್ಣಯವನ್ನು ಪೇಜಾವರ ಉಪವಾಸ ಘೋಷಣೆಯ ನಂತರ ಸರಕಾರ ಬಹಿರಂಗಗೊಳಿಸಿದ್ದೇಕೆ?

ಜೂನ್ 26 ರಂದು ಮುಖ್ಯಮಂತ್ರಿ ನಿವಾಸದಲ್ಲಿ ಸೆಝ್ ಕುರಿತಾದ ಸಭೆ ನಡೆದಿರುವುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ರಾಜ್ಯದ ಪ್ರಮುಖ ದಿನಪತ್ರಿಕೆಗಳ ಬೆಂಗಳೂರು ಆವೃತ್ತಿಯಲ್ಲಿ ಈ ಬಗ್ಗೆ ವರದಿಯಾಗಿತ್ತು. ಜೂನ್ 27ರಂದು ಧರ್ಮಸ್ಥಳಕ್ಕೆ ಬಂದಿದ್ದ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಇದನ್ನು ಸ್ಪಷ್ಟಪಡಿಸಿದ್ದರು. ಆದರೆ ಮಾಧ್ಯಮಗಳಿಗೆ ಆ ಸುದ್ದಿ ಬೇಕಾಗಿರಲಿಲ್ಲ. ಅವರಿಗೆ ಬೇಕಾಗಿದ್ದಿದ್ದು ಆ ದಿನವೇ ನಡೆಯಬೇಕಾಗಿದ್ದ ಆಣೆ ಪ್ರಮಾಣದ ವಿಚಾರ ಮಾತ್ರ !

ಒಟ್ಟಾರೆಯಾಗಿ ಈ ಎಲ್ಲಾ ನಾಟಕೀಯ ಬೆಳವಣಿಗೆಗಳು ನಡೆದಿದ್ದು, ವ್ಯವಸ್ಥೆಯ ವಿರುದ್ಧದ ಬಂಡಾಯದ ಹೋರಾಟಗಳನ್ನು ಹತ್ತಿಕ್ಕುವ ಸಲುವಾಗಿ. ಸಾಧು ಸಂತರ ಕಡೆಯಿಂದ ಹೋರಾಟ ನಡೆದರೆ ತಕ್ಷಣ ನ್ಯಾಯ ಸಿಗುತ್ತದೆ ಎಂಬ ಬಗ್ಗೆ ಜನರಲ್ಲಿ ನಂಬಿಕೆ ಹುಟ್ಟಿಸಿ ಜನರಲ್ಲಿನ ಹೋರಾಟದ ಕಿಚ್ಚನ್ನು ಕಡಿಮೆ ಮಾಡಬೇಕು ಎಂಬ ಉದ್ದೇಶದಿಂದಲೇ ಪೇಜಾವರ ವಿಶ್ವೇಶತೀರ್ಥರಿಂದ ಉಪವಾಸ ಘೋಷಣೆ ಮಾಡಿಸಿ ಸರಕಾರ ತಕ್ಷಣ ಸ್ಪಂದನೆ ನೀಡೋ ನಾಟಕವಾಡಿದೆಯಷ್ಟೆ. ❖

ಸೆಝ್ ವಿರುದ್ಧ ಹೋರಾಟ ಆರಂಭಿಸಿದ್ದು ದಲಿತರು

ಮಂಗಳೂರು ವಿಶೇಷ ಆರ್ಥಿಕ ವಲಯದ ವಿರುದ್ಧ ನೇರವಾಗಿ ಹೋರಾಟ ಆರಂಭಿಸಿದ್ದು ದಲಿತರು ಎಂಬುದನ್ನು ಪೇಜಾವರರ ಪ್ರಭಾವ ಅಳಿಸಿ ಹಾಕಿದ್ದರಿಂದ ಮತ್ತೊಮ್ಮೆ ನೆನಪಿಸಿಕೊಳ್ಳಬೇಕಿದೆ.

ಜನಪ್ರತಿನಿಧಿಗಳೂ ಸೇರಿದಂತೆ ಇಡೀ ಊರಿಗೆ ಊರೇ ಎಸ್‌ಇಝೆಡ್‌ನ ಪರಿಹಾರದ ದುಡ್ಡಿಗಾಗಿ ಹಲುಬುತ್ತಿದ್ದ ಸಂದರ್ಭದಲ್ಲಿ ದಲಿತ ಸಂಘರ್ಷ ಸಮಿತಿ (ಪ್ರೋ ಕೃಷ್ಣಪ್ಪ ವಾದದ) ಸದಸ್ಯರಾಗಿರುವ ಕೃಷ್ಣಪ್ಪ, ರಘು, ಕೃಷ್ಣ ಒಂದಷ್ಟು ಜನರನ್ನು ಕಟ್ಟಿಕೊಂಡು ಸೆಝ್ ವಿರುದ್ಧ ಸಂಘರ್ಷಕ್ಕಿಳಿದಿದ್ದರು. ಸಂಘರ್ಷವೆಂದರೆ ಕೇವಲ ಭಾಷಣದ ಸಂಘರ್ಷವಲ್ಲ, ದೈಹಿಕವಾಗಿಯೂ ಸೆಝ್ ಅಧಿಕಾರಿಗಳು, ಕೆಐಎಡಿಬಿ ಸಿಬ್ಬಂದಿಗಳು, ಸೆಝ್ ಪರ ದಳ್ಳಾಳಿಗಳು, ಗೂಂಡಾಗಳ ವಿರುದ್ಧ ಹೋರಾಡಲಾಗಿತ್ತು. ಆಗ ಪ್ರತೀ ಪತ್ರಿಕೆಗಳಿಗೂ ಪುಟಗಟ್ಟಲೆ ಜಾಹೀರಾತು ಇದ್ದಿದ್ದರಿಂದ ಕೃಷ್ಣಪ್ಪನ ಗಲಾಟೆ ದೊಡ್ಡ ಸುದ್ದಿಯಾಗಿರಲಿಲ್ಲ. ಕೃಷ್ಣಪ್ಪ, ರಘು, ಕೃಷ್ಣ, ಲಾರೆನ್ಸ್, ವಿಲಿಯಂ, ನಟೇಶ್ ಉಳ್ಳಾಲ್, ವಿದ್ಯಾ ದಿನಕರ್ ವಿರುದ್ಧ ಬಜಪೆ ಪೊಲೀಸ್ ಠಾಣೆಯಲ್ಲಿ 9 ದೂರುಗಳು ದಾಖಲಾಗಿರುವುದೇ ಅಂದಿನ ಸಂಘರ್ಷಕ್ಕೆ ಸಾಕ್ಷಿ. ಇಷ್ಟೆಲ್ಲಾ ಸಂಘರ್ಷದ ನಂತರ ಎಕ್ಕಾರು, ಪೆರ್ಮುದೆ, ದೇಲಂತಬೆಟ್ಟಿನ ಕೃಷಿಕರಲ್ಲಿ ಜಾಗೃತಿ ಮೂಡಿದ್ದು, ಇವರ ಹೋರಾಟದ ಮಧ್ಯೆಯೂ ಅಲ್ಲೊಬ್ಬರು ಇಲ್ಲೊಬ್ಬರು ಭೂಮಿ ನೀಡಲು ಮುಂದೆ ಬಂದು ಕೆಐಎಡಿಬಿಗೆ ಒಪ್ಪಿಗೆ ಪತ್ರ ನೀಡಿದ್ದರು. ಕೃಷಿಕರಿಂದ ಒಪ್ಪಿಗೆ ಪತ್ರ ಪಡೆದುಕೊಂಡ ಕೆಐಎಡಿಬಿ ಅಧಿಕಾರಿಗಳು ಜಾರ್ಜ್ ಎಂಬವರ ಮನೆಗೆ ಸರ್ವೆ ಮಾಡಲು ಬಂದಾಗ ಕೃಷ್ಣಪ್ಪ, ರಘು, ಲಾರೆನ್ಸ್ ಬಂದರು ಎಂಬ ಒಂದೇ ಕಾರಣಕ್ಕೆ ದಾಖಲೆಗಳನ್ನು ಬಿಟ್ಟು ಅಧಿಕಾರಿಗಳು ಪರಾರಿಯಾಗಿದ್ದರು. ಇಂತಹ ಹೋರಾಟದಿಂದಾಗಿಯೇ ಕೃಷಿ ಭೂಮಿ ಸಂರಕ್ಷಣಾ ಸಮಿತಿ ಬಲಗೊಂಡಿತ್ತೇ ಹೊರತು ಸಮಿತಿಯ ಪದಾಧಿಕಾರಿಗಳ ಪ್ರಭಾವದಿಂದಲ್ಲ. ❖



ಸೈಟು ಹೊಡೆದ ಯಡ್ಡಿ ಮಗಳಿಗೆ ಹೊಸ ಸಂಕಟ!

ಯಡ್ಡಿ ಮಗಳು ಅರುಣಾದೇವಿ ಕರ್ನಾಟಕ ಗೃಹ ಮಂಡಳಿಯ ನಾಲ್ಕು ಸೈಟು ಹೊಡೆದ ಬಗ್ಗೆ ಎರಡು ವಾರದ ಹಿಂದೆ ವರದಿ ಪ್ರಕಟಿಸಿದ್ದೆವು. ಈ ಪ್ರಕರಣ ಬಯಲಿಗೆಳೆದಿದ್ದು ಶಿವಮೊಗ್ಗದ ವಕೀಲ ವಿನೋದ್. ಇವರೇ ಇದೀಗ ಸದರಿ ಪ್ರಕರಣಕ್ಕೆ ಸಂಬಂಧಿಸಿದ ಇನ್ನೊಂದು ವಂಚನೆಯನ್ನು ಹೊರಗೆಡವಿದ್ದಾರೆ.


ಗೃಹಮಂಡಳಿಯ ಪರವಾಗಿ ಅರುಣಾ ದೇವಿಗೆ ಸೈಟು ಸಿಗುವಂತೆ ಮುತುವರ್ಜಿ ವಹಿಸಿದ್ದವನು ಹಾಲೇಶಪ್ಪ. ಈತ ಆಗಲೇ ಸಹಾಯಕ ಕಾರ್ಯಪಾಲಕ ಅಭಿಯಂತರನಾಗಿ ಬಡ್ತಿ ಹೊಂದಿದ್ದ. ಆದರಿದು ಪಕ್ಕಾ ಅಕ್ರಮ!

ಹಾಲೇಶಪ್ಪ ಮುಂಬಡ್ತಿಗಾಗಿ ಸರ್ಕಾರಕ್ಕೆ ಸಲ್ಲಿಸಿರುವುದು ನಕಲಿ ಅಂಕಪಟ್ಟಿಯೆಂಬ ವಿಚಾರ ಸ್ಪಷ್ಟವಾಗಿ ಸಾಬೀತಾಗಿದೆ. ಗೃಹಮಂಡಳಿಯಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ವಿದ್ಯಾರ್ಹತೆಯ ಆಧಾರದಲ್ಲಿ ಮುಂಬಡ್ತಿ ನೀಡುವ ಪರಿಪಾಠವಿದೆ. ಈ ಸಂದರ್ಭದಲ್ಲಿ ಹಾಲೇಶಪ್ಪ ದಾವಣಗೆರೆಯ ಯುಬಿಡಿಟಿ ಕಾಲೇಜಿನಿಂದ ಬಿಇ ಪದವಿ ಪಡೆದಿರುವಂತೆ ಅಂಕಪಟ್ಟಿ ಸೃಷ್ಟಿಸಿದ್ದ. ಇದರ ಜೊತೆಗೆ ಜಾತಿ ಹಾಗೂ ರಾಜಕೀಯ ಪ್ರಭಾವಗಳನ್ನು ಬಳಸಿಕೊಂಡು ಅರ್ಹರನ್ನು ಯಾಮಾರಿಸಿ ಬಡ್ತಿ ಪಡೆದಿದ್ದ.

ಇದರಿಂದಾಗಿ ಕಂಗಾಲಾದ ಅರ್ಹರನೇಕರು ನಕಲಿ ಅಂಕಪಟ್ಟಿ ಸಲ್ಲಿಸಿ ಬಡ್ತಿ ಪಡೆದ ಹಾಲೇಶಪ್ಪನ ವಿರುದ್ಧ ದೂರು ಸಲ್ಲಿಸಿದ್ದರು. ಮಂಡಳಿಯ ಅಧಿಕಾರಿಗಳು ಈ ಬಗ್ಗೆ ವಿಚಾರಣೆ ನಡೆಸುವಂತೆ ಕುವೆಂಪು ವಿವಿಗೊಂದು ಮನವಿ ಸಲ್ಲಿಸಿದ್ದರು. ಈ ಕುರಿತಾಗಿ ತನಿಖೆಗಿಳಿದ ಕುವೆಂಪು ವಿವಿ ಸಿಬ್ಬಂದಿಗೆ ಹಾಲೇಶಪ್ಪನ ವಂಚನೆಗಳು ಇಂಚಿಂಚು ಅರ್ಥವಾಗಿದೆ. ತದನಂತರ ವಿವಿಯ ಕುಲಸಚಿವರು ಹಾಲೇಶಪ್ಪನ ವಿರುದ್ಧ ಭದ್ರಾವತಿ ಠಾಣೆಯಲ್ಲಿ ದೂರನ್ನೂ ದಾಖಲಿಸಿದ್ದಾಗಿದೆ.

ಗಮನೀಯ ಅಂಶವೆಂದರೆ, ಪತ್ರಕರ್ತರ ಕೋಟಾದಡಿ ನಾಲ್ಕು ಸೈಟುಗಳನ್ನು ಅರುಣಾದೇವಿ ಉಡಿ ತುಂಬಿಸಿಕೊಳ್ಳಲು ನೆರವಾದವನು ಇದೇ ಹಾಲೇಶಪ್ಪ. ಈ ಸಂದರ್ಭದಲ್ಲೇ ಈತ ನಕಲಿ ಅಂಕಪಟ್ಟಿ ಸಲ್ಲಿಸಿ ಮುಂಬಡ್ತಿ ಪಡೆದಿದ್ದ. ಆ ಪವರ್‌ನಿಂದಲೇ ಇದೀ ಸೈಟು ಹಗರಣದ ಕಾಗದಪತ್ರಗಳನ್ನು ಲೀಲಾಜಾಲವಾಗಿ ಮಾಡಿ ಮುಗಿಸಿದ್ದ. ಈತ ಇನ್ನೇನು ತನಿಖೆ ಎದುರಿಸಿ ಕಾನೂನುಕ್ರಮ ಎದುರಿಸಲಿದ್ದಾನೆ.

ಇಂಥಾ ಆರೋಪಿಯೊಬ್ಬ ಮಾಡಿಕೊಟ್ಟಿರುವ ಕ್ರಯಪತ್ರಗಳು ಸಿಂಧು ಆಗಲಾರವು. ಈಗಾಗಲೇ ಹೀನಾಯವಾಗಿ ತಗುಲಿಕೊಂಡಿರುವ ಯಡ್ಡಿ ಮಗಳು ಅರುಣಾದೇವಿಗೆ ಮತ್ತೊಂದು ಸಂಕಟ ಎದುರಾಗುವುದು ಖಚಿತ. ❖



ಈಶ್ವರಪ್ಪನ ಕಳ್ಳ ಆಸ್ತಿ ಎಷ್ಟು?

ಯಡ್ಡಿ ಏನೆಲ್ಲಾ ಕಿರುಕುಳ ಕೊಟ್ಟರೂ, ತನ್ನ ಕೈಲಿ ಅಧಿಕಾರವಿರದಂತೆ ಪಿತೂರಿ ನಡೆಸಿದರೂ ಸಹ ಈಶ್ವರಪ್ಪ ಮಾತ್ರ ಎದೆಗುಂದಿಲ್ಲ. ಹಗಲೂ-ರಾತ್ರಿ ಯೋಚಿಸುತ್ತಾ ತನ್ನ ಶಕ್ತಿ ಮೀರಿ ಹಣ ಸಂಪಾದಿಸಲು ಹೆಣಗುತ್ತಿದ್ದಾರೆ. ಈ ಈಶ್ವರಪ್ಪನಿಗೆ ಕಾಂತೇಶನೆಂಬ ಏಕಮಾತ್ರ ಪುತ್ರರತ್ನ ಇದ್ದಾನೆ. ಈ ತಂದೆ-ಮಗ ಸೇರಿಕೊಂಡು ಶಿವಮೊಗ್ಗ ಹಾಗೂ ಸುತ್ತಮುತ್ತ ಇತ್ತೀಚಿನ ದಿನಗಳಲ್ಲಿ ಖರೀದಿಸಿರುವ ಆಸ್ತಿಗಳ ಬಗ್ಗೆ ಇಲ್ಲಿ ವರದಿಯಿದೆ.

ರಾಜ್ಯ ಬಿಜೆಪಿ ಅಧ್ಯಕ್ಷ ಈಶ್ವರಪ್ಪ ಮುಖ್ಯಮಂತ್ರಿ ಯಡಿಯೂರಪ್ಪನ ಜೊತೆ ರೇಸ್ ನಡೆಸುತ್ತಿದ್ದಾರಾ?


ಕಳ್ಳ ಆಸ್ತಿ ಮಾಡುವ ವಿಚಾರದಲ್ಲಿ ಈ ಅನುಮಾನ ಬರುತ್ತಿದೆ.

ಯಡ್ಡಿ ಫ್ಯಾಮಿಲಿ ನಡೆಸುತ್ತಿರುವ ಹಗಲುದರೋಡೆ. ಬೆಂಗಳೂರು, ಮೈಸೂರು, ಶಿವಮೊಗ್ಗ ಬೆಳಗಾಂ, ಹಾವೇರಿ.... ಹೀಗೆ ಸಿಕ್ಕಸಿಕ್ಕಲ್ಲೆಲ್ಲಾ ಆಸ್ತಿ ಖರೀದಿಸುತ್ತಿರುವ ವಿಚಾರ ಕರ್ನಾಟಕದ ಜನರಿಗೆ ಗೊತ್ತಿರುವಂತಾದ್ದೇ ಬಿಡಿ. ಆದರೆ ಯಡ್ಡಿಯ ಹಳೆಯ ಗೆಳೆಕಾರ, ಹಾಲಿ ಪ್ರತಿಸ್ಪರ್ಧಿ ಈಶ್ವರಪ್ಪನೂ ಅದೇ ಹಾದಿ ಹಿಡಿದಿರುವ ಕತೆ ಇದು. ಕಳೆದ ಮೂರ್ನಾಲ್ಕು ವರ್ಷಗಳಿಂದ ಬಿಟ್ಟುಬಿಡದೆ ಕೋಟ್ಯಾಂತರ ರೂ. ಬೆಲೆಯ ಆಸ್ತಿಗಳನ್ನು ಈಶ್ವರಪ್ಪ ಮತ್ತವನ ಮಗ ಕಾಂತೇಶ ಖರೀದಿಸಿ ರಾಶಿ ಹಾಕಿಕೊಳ್ಳುತ್ತಿದ್ದಾರೆ. ರಾಜ್ಯದ ಜನತೆ ಒಂದೋ ಬರಗಾಲ ಇಲ್ಲಾ ನೆರೆ ಹಾವಳಿಯಿಂದ ತತ್ತರಿಸುತ್ತಾ ಇದ್ದರೆ ಈಶ್ವರಪ್ಪ ಮಾತ್ರ ಕೋಟಿಗಟ್ಟಲೇ ಹಣ ಲೂಟಿ ಹೊಡೆಯುತ್ತಿರುವುದು ಈ ಆಸ್ತಿ ಖರೀದಿ ಡೀಲುಗಳನ್ನು ಗಮನಿಸಿದರೆ ಸಾಕು ಗೊತ್ತಾಗುವಂತಿದೆ.

ಹಾಗೆ ನೋಡಿದರೆ ಈಶ್ವರಪ್ಪನಿಗೆ ಎಲ್ಲೂ ದುಡ್ಡು ಸಿಗದಂತೆ, ತನಗಿಂತ ದುರ್ಬಲನಾಗಿರುವಂತೆ ಯಡ್ಡಿ ಕಾವಲು ನಡೆಸುತ್ತಿದ್ದುದು ಗುಟ್ಟಾಗೇನೂ ಇರಲಿಲ್ಲ. ಬಿಜೆಪಿ ಸರ್ಕಾರ ಬಂದ ಹೊಸದರಲ್ಲಿ ಈಶ್ವರಪ್ಪನಿಗೆ ಜಲಸಂಪನ್ಮೂಲ ಖಾತೆ ಕೊಟ್ಟಿದ್ದ ಯಡ್ಡಿಗೆ ಆಮೇಲೆ ಆತಂಕವಾಗಿತ್ತು. ಸಾವಿರಾರು ಕೋಟಿ ರೂಪಾಯಿ ವ್ಯವಹಾರವಿರುವ ಆ ಖಾತೆಯಲ್ಲಿ ಈಶ್ವರಪ್ಪ ದುಡ್ಡು ಹೊಡೆದು ಬಲಿತರೆ ಎಂದು ಹೆದರಿದ ಯಡ್ಡಿ ಕೊನೆಗೆ ಖಾತೆ ಬದಲಿಸಿ ಇಂಧನ ಖಾತೆ ಮಾತ್ರ ಕೊಟ್ಟಿದ್ದರು. ಕರ್ನಾಟಕ ಹೇಗೂ ನಿರಂತರವಾಗಿ ವಿದ್ಯುತ್ ಸಮಸ್ಯೆಯಿರುವ ರಾಜ್ಯವಾಗಿರುವುದರಿಂದ ಜನ ಬೈದರೆ ಅದು ಈಶ್ವರಪ್ಪನಿಗೇ ತಾಗಲಿ ಎನ್ನುವ ದುರಾಲೋಚನೆ ಯಡ್ಡಿಗಿತ್ತು. ಆದರೆ ಈಶ್ವರಪ್ಪ ಮಹಾನ್ ಕಿಲಾಡಿ. ಕೈಗೆ ಕಲ್ಲು ಕೊಟ್ಟರೂ ಅದನ್ನೇ ಹಿಂಡಿ ಎಣ್ಣೆ ತೆಗೆಯಲು ಯತ್ನಿಸುವ ಕಲಾವಿದ. ಅದು ಯಡ್ಡಿಗೆ ಅರ್ಥವಾಗಿದ್ದು ಛತ್ತೀಸಗಡ ರಾಜ್ಯದಲ್ಲಿ ಕರ್ನಾಟಕದವರು ಒಂದು ಸಾವಿರ ಕೋಟಿ ರೂಪಾಯಿ ಬಂಡವಾಳ ಹಾಕಿ ವಿದ್ಯುತ್ ಸ್ಥಾವರ ಮಾಡುವ ಸುದ್ದಿ ಕೇಳಿಬಂದಾಗ. ಆ ಪ್ರಾಜೆಕ್ಟ್‌ನ ಹಿಂದೆ ಈಶ್ವರಪ್ಪ ಅಂಡ್ ಗ್ಯಾಂಗ್ ಇತ್ತು. ಈಶ್ವರಪ್ಪ ಹೀಗೆ ಮಾಡಿ ಬಲಿತುಕೊಂಡರೆ ಮುಂದೆ ನನಗೇ ಆಪತ್ತು ಎಂದು ಯೋಚಿಸಿದ ಯಡ್ಡಿ ಕೊನೆಗೆ ಈಶ್ವರಪ್ಪನನ್ನು ಅಲ್ಲಿಂದಲೂ ಕದಲಿಸಿ ರಾಜ್ಯ ಬಿಜೆಪಿ ಅಧ್ಯಕ್ಷನಾಗಲಿ ಎಂದರು. ಆದರೆ ಹೆಗ್ಗಣ ಎಲ್ಲಿಗೇ ಹೋದರೂ ನೆಲ ಕೆರೆಯುವುದನ್ನು ಬಿಡುತ್ತದಾ ಹೇಳಿ?

ಯಡ್ಡಿ ಏನೆಲ್ಲಾ ಕಿರುಕುಳ ಕೊಟ್ಟರೂ, ತನ್ನ ಕೈಲಿ ಅಧಿಕಾರವಿರದಂತೆ ಪಿತೂರಿ ನಡೆಸಿದರೂ ಸಹ ಈಶ್ವರಪ್ಪ ಮಾತ್ರ ಎದೆಗುಂದಿಲ್ಲ, ಹಗಲೂ-ರಾತ್ರಿ ಯೋಚಿಸುತ್ತಾ ತನ್ನ ಶಕ್ತಿ ಮೀರಿ ಹಣ ಸಂಪಾದಿಸಲು ಹೆಣಗುತ್ತಿದ್ದಾರೆ. ಯಡ್ಡಿ & ಸನ್ಸ್ ಲೆವೆಲ್‌ಗೆ ತಲುಪಲಾಗದೇ ಹೋದರೂ ಪರವಾಗಿಲ್ಲ, ಆದರೆ ಕನಿಷ್ಠ ಅದರ ಅರ್ಧದಷ್ಟಾದರೂ ಆಸ್ತಿ ಹಣ ಗಳಿಸಬೇಕೆಂದು ಹೋರಾಟ ನಡೆಸುತ್ತಿದ್ದಾನೆ.

ಈ ಈಶ್ವರಪ್ಪನಿಗೆ ಕಾಂತೇಶನೆಂಬ ಏಕಮಾತ್ರ ಪುತ್ರರತ್ನ ಇದ್ದಾನೆ. ಈ ತಂದೆ-ಮಗ ಸೇರಿಕೊಂಡು ಶಿವಮೊಗ್ಗ ಹಾಗೂ ಸುತ್ತಮುತ್ತ ಇತ್ತೀಚಿನ ದಿನಗಳಲ್ಲಿ ಖರೀದಿಸಿರುವ ಆಸ್ತಿಗಳ ಬಗ್ಗೆ ಇಲ್ಲಿ ವರದಿಯಿದೆ. ಇದೆಲ್ಲದರ ಅಂದಾಜು ಮಾರ್ಕೆಟ್ ರೇಟ್ ಎಪ್ಪತ್ತು ಕೋಟಿ ರೂ. ಆಗಬಹುದು.



ಆಸ್ತಿ ದಾಖಲೆ

ಆಸ್ತಿ ಯಾರೇ ಮಾರಲಿ ಕಾಂತೇಶನೇ ಖರೀದಿದಾರ

ಶಿವಮೊಗ್ಗೆಯಲ್ಲೊಂದು ಬೃಹತ್ ಬಂಗಲೆ, ಪೈಪ್ ಫ್ಯಾಕ್ಟರಿ, ಆಟೋಮೊಬೈಲ್ ಶೋರೂಂ ಇತ್ಯಾದಿ ಆಸ್ತಿಗಳನ್ನು ಮಾಡಿಕೊಂಡಿದ್ದ ಈಶ್ವರಪ್ಪ ಆ ನಂತರ ಅದೆಲ್ಲಿಂದ ದುಡ್ಡು ಕದ್ದು ತಂದನೋ ಏನೋ ದಿನಬೆಳಗಾದರೆ ಹೊಸ ಆಸ್ತಿ ಖರೀದಿಗೆ ಕೈಹಾಕುತ್ತಿದ್ದಾನೆ. ಈ ಹೊಸ ಆಸ್ತಿಗಳ ಪೈಕಿ ಹೆಚ್ಚಿನವು ಮಗ ಕೆ.ಇ.ಕಾಂತೇಶನ ಹೆಸರಿನಲ್ಲಿ ರಿಜಿಸ್ಟರ್ ಆಗುತ್ತಿವೆ.

ಯುವ ವಕೀಲ ವಿನೋದ್ ಎಂಬುವರು ಕಲೆಹಾಕಿರುವ ಮಾಹಿತಿಗಳ ಪ್ರಕಾರ ಶಿವಮೊಗ್ಗೆಯ ಬಿ.ಹೆಚ್.ರೋಡಿನಲ್ಲಿ ಈಶ್ವರಪ್ಪನ ಫ್ಯಾಮಿಲಿ ಖರೀದಿಸಿರುವ ಕೆಲವೊಂದು ಆಸ್ತಿಗಳ ವಿವರ ಹೀಗಿದೆ.

2010ರ ಜನವರಿ 18ರಂದು ಕಾಂತೇಶ 7.65 ಲಕ್ಷ ರೂಪಾಯಿ ತೆತ್ತು 956 ಚದರಡಿ ಸೈಟು ಖರೀದಿಸುತ್ತಾನೆ. ಇದರ ಇವತ್ತಿನ ಮಾರ್ಕೆಟ್ ರೇಟ್ ಐವತ್ತು ಲಕ್ಷ.

ಅದೇ ದಿನ ಬಿ.ಹೆಚ್.ರೋಡಿನದ್ದೇ 952 ಚದರಡಿಯ ಇನ್ನೊಂದು ಸೈಟ್ ಖರೀದಿಸುವ ಕಾಂತೇಶ್ ಚದರಡಿಗೆ 800 ರೂ.ನಂತೆ ಒಟ್ಟು 5.72 ಲಕ್ಷ ತೆತ್ತು ಬೇಲಿ ಸುತ್ತಿಕೊಂಡಿದ್ದಾನೆ. ಈ ಆಸ್ತಿಯೂ ಈಗ ಅರ್ಧ ಕೋಟಿ ಬೆಲೆಬಾಳುತ್ತಿದೆ. ಅದೇದಿನ ಅಂದರೆ 18-1-2010ರಂದು 714 ಚದರಡಿಯ ಸೈಟ್ ಐದು ಮುಕ್ಕಾಲು ಲಕ್ಷಕ್ಕೆ ಖರೀದಿಯಾಗಿದೆ. ಅದರ ಮಾರುಕಟ್ಟೆ ಬೆಲೆಯೂ ಈಗ 40 ಲಕ್ಷವಿದೆ.

ಸ್ವಲ್ಪ ತಾಳಿ

ಈ 18-1-2010ರ ಡೇಟ್‌ನ ಮಹಾತ್ಮೆ ಅದೇನಿದೆಯೋ ಏನೋ ಕಾಂತೇಶ ಅದೇ ದಿನ ಇನ್ನೆರಡು ಆಸ್ತಿ ಖರೀದಿಸಿ ರಿಜಿಸ್ಟರ್ ಮಾಡಿಸಿಕೊಂಡಿದ್ದಾನೆ. ಬಿ.ಹೆಚ್. ರೋಡಿನಲ್ಲೇ ಇರುವ ಈ ಆಸ್ತಿಗಳ ಪೈಕಿ ಒಂದು 800 ಚದರಡಿಯ ಸೈಟಾದರೆ ಇನ್ನೊಂದು 3349 ಚದರಡಿ ವಿಸ್ತೀರ್ಣದ ಆಸ್ತಿ ಇವೆರಡೂ ಸೇರಿ ಕಾಂತೇಶ ಜಮೀನಿನ ಮಾಲೀಕರಿಗೆ ಕೊಟ್ಟಿರುವುದು 26.36 ಲಕ್ಷ. ಇದರ ಅಸಲಿ ರೇಟು ಈಗ ಒಂದೂಕಾಲು ಕೋಟಿ ರೂ.ಗಳು!

ಶಿವಮೊಗ್ಗೆಯ ಅತ್ಯಂತ ಪ್ರಮುಖ ಏರಿಯಾ ಹಾಗೂ ಕಮರ್ಷಿಯಲ್ ವ್ಯಾಲ್ಯೂ ಇರುವ ಬಿ.ಹೆಚ್.ರೋಡನ್ನೇ ನುಂಗಿ ನೀರು ಕುಡಿಯುವಂತೆ ಕಾಣುವ ಕಾಂತೇಶ 2010ಕ್ಕೂ ಮುನ್ನ ಅದೇ ರಸ್ತೆಯಲ್ಲಿ ಇನ್ನು ಹಲವು ಆಸ್ತಿ ಖರೀದಿಸಿದ್ದಾನೆ. 4-11-2009ರಲ್ಲಿ 2250 ಚದರಡಿಯ ಜಾಗವೊಂದಕ್ಕೆ 29.75 ಲಕ್ಷ ರೂ. ಕೊಟ್ಟು ಕೊಂಡಿದ್ದಾನೆ. ಈಗ ಒಂದೂವರೆ ಕೋಟಿ ಬೆಲೆಯ ಆಸ್ತಿಯಾಗಿದೆ ಅದು.

ತೀರಾ ಇತ್ತೀಚಿಗೆ ಅಂದರೆ 2011ರ ಜನವರಿ 12ರಂದು 390 ಹಾಗೂ 110 ಚದರಡಿಯ ಎರಡು ಕಮರ್ಷಿಯಲ್ ಜಾಗವನ್ನೂ ನಾಲ್ಕೂವರೆ ಲಕ್ಷಕ್ಕೆ ಕೊಂಡಿದ್ದಾನೆ.

ಬಿ.ಹೆಚ್.ರೋಡಿನಲ್ಲೇ ಇರುವ ಅರವಿಂದ ಮೋಟಾರ್ಸ್ ಎದುರಿಗಿರುವ ಜಾಗ 2.15 ಕೋಟಿಗೆ ಬಿಕರಿಯಾಗಿದೆ. ಯಥಾಪ್ರಕಾರ ಇದಕ್ಕೂ ಕಾಂತೇಶನೇ ಈಗ ಮಾಲೀಕ.

ಇತ್ತೀಚಿನ ಸುದ್ದಿಯ ಪ್ರಕಾರ ಬಿ.ಹೆಚ್.ರಸ್ತೆಯಲ್ಲಿರುವ ಸೋನಾ ಕಾಂಪ್ಲೆಕ್ಸ್ ಪಕ್ಕದಲ್ಲಿದ್ದ ಇಕ್ಬಾಲ್ ಎಂಬುವವರಿಗೆ ಸೇರಿದ್ದ ರಿಲಯನ್ಸ್ ಪೆಟ್ರೋಲ್ ಬಂಕ್ ಅನ್ನು ಕಾಂತೇಶ್ ಖರೀದಿಸಿದ್ದಾನೆ. ಈ ಪೆಟ್ರೋಲ್ ಬಂಕ್ ಇತ್ತೀಚಿಗೆ ಬಂದ್ ಆಗಿತ್ತು. ಈ ಅಪ್ಪ-ಮಗ ಜೋಡಿ ಅದೆಂತ ದುರಾಸೆಯವರೆಂದರೆ ಇತ್ತೀಚಿಗೆ ನೆಹರು ರೋಡಿನಲ್ಲೂ ಒಂದು ಆಸ್ತಿ ಖರೀದಿ ಮಾಡಿದ್ದಾರೆ. ಖಂಡೇರಾವ್ ಫ್ಯಾಮಿಲಿಗೆ ಸೇರಿದ್ದ ಪುಟ್ಟ ಬಟ್ಟೆ ಅಂಗಡಿಯ ಜಾಗ ಅದಾಗಿತ್ತು. ಆದರೆ ಕಂಡವರ ಆಸ್ತಿ ನುಂಗುವ ಚಟವಿದ್ದವರಿಗೆ ಸಣ್ಣ ಆಸ್ತಿಯಾದರೇನು? ಒಟ್ಟಿನಲ್ಲಿ ನುಂಗುವ ಕೆಲಸ ನಡೆಯುತ್ತಿರಬೇಕು ತಾನೇ?



ಕಾಂತೇಶನ ಬಿ.ಹೆಚ್.ರೋಡಿನ ಆಸ್ತಿ ಖರೀದಿಗಳ ಪೈಕಿ ಬಹುಪಾಲು ಅಬ್ದುಲ್ ಮುಜೀಬ್ ಎಂಬಾತನಿಗೆ ಸೇರಿದ್ದವು. ಉಳಿದಂತೆ ದಿಲಾಲ್ ಹಬೀಬ್, ಹಾಜಿ ಸುಲೇಮಾನ್ ಇಕ್ಬಾಲ್ ಹಬೀಬರಿಗೆ ಸೇರಿದ್ದ ಆಸ್ತಿಗಳನ್ನು ಕಾಂತೇಶ ಕೊಂಡಿದ್ದಾನೆ.

ತ್ಯಾವರೆ ಚಟ್ನಳ್ಳಿ ಸ್ವಾಹಾ!

ಈಶ್ವರಪ್ಪನ ಪೇಸ್ ಕಾಲೇಜ್ ಇರುವ ತ್ಯಾವರೆಚಟ್ನಳ್ಳಿ ಈಗ ಶಿವಮೊಗ್ಗ ನಗರಸಭೆಯ ವಾರ್ಡ್ ನಂಬರ್ 8ಕ್ಕೆ ಸೇರಿಬಿಟ್ಟಿದೆ. ಈ ಗ್ರಾಮದಲ್ಲಿ ಒಟ್ಟು 3.79 ಲಕ್ಷ ಚದರಡಿಯಷ್ಟು ಜಮೀನನ್ನು ಕಾಂತೇಶ್ ಕೊಂಡಿದ್ದಾನೆ. 2008ರ ಜೂನ್ 25 ಹಾಗೂ 26ರಂದು ಈ ಖರೀದಿಗಳಾಗಿವೆ. ತ್ಯಾವರೆಚಟ್ನಳ್ಳಿಯ ಕರಿಬಸಮ್ಮ, ವೈ.ಎಂ.ಮಲ್ಲೇಶಪ್ಪ ಸದಾಶಿವಪ್ಪ ಬಿ.ಸಿ.ಯಗಟಪ್ಪ ಗಿರಿಜಮ್ಮ, ಮಲ್ಲಮ್ಮ, ನೀಲಮ್ಮ, ಶಾಂತಮ್ಮ, ವೈ.ಎಂ.ಪ್ರಕಾಶ್ ಮುಂತಾದವರ ಹೆಸರಿನಲ್ಲಿದ್ದಾಗಲೇ ಕಾಂತೇಶ ಉಪಾಯದಿಂದ ಭೂ ಪರಿವರ್ತನೆ ಮಾಡಿಸಿ ನಂತರ ಕೊಂಡಿದ್ದಾನೆ.

ಆದರೆ ಕೈಗಾರಿಕಾ ಉದ್ದೇಶಕ್ಕೆಂದು ಭೂಪರಿವರ್ತನೆ ಮಾಡಿಸಿ ಈಗ ಶಿಕ್ಷಣ ಸಂಸ್ಥೆ ನಡೆಸುತ್ತಿದ್ದಾರೆ ಈಶ್ವರಪ್ಪ. ತ್ಯಾವರೇಚಟ್ನಳ್ಳಿಯಲ್ಲಿನ 3.79 ಲಕ್ಷ ಚದರಡಿ ಭೂಮಿಗೆ ಕಾಂತೇಶ್ ಒಟ್ಟು 80.71 ಲಕ್ಷ ರೂ. ನೀಡಿದ್ದಾನೆ. ಇಷ್ಟು ದೊಡ್ಡ ಮೊತ್ತ ಈ ದೇಶಪ್ರೇಮಿಗಳಿಗೆ ಎಲ್ಲಿಂದ ಬಂತೆಂಬ ಪ್ರಶ್ನೆಗೆ ಉತ್ತರ ಹುಡುಕುವುದು ಕಷ್ಟವೇನಲ್ಲ. ಈಶ್ವರಪ್ಪ ಆಗ ಮಂತ್ರಿಯಾಗಿದ್ದ.

ಈ ಅಗಾಧ ಆಸ್ತಿ ಈಗ ಐವತ್ತು ಕೋಟಿ ರೂ.ಗೆ ತೂಗುತ್ತಿದೆ.

ಶಿವಮೂರ್ತಿ ಸರ್ಕಲ್‌ನಲ್ಲಿ ಕಾಂತೇಶ ವೈಭವ

ಶಿವಮೊಗ್ಗೆಯ ಸವಳಂಗ ರಸ್ತೆಯ ಶಿವಮೂರ್ತಿ ಸರ್ಕಲ್‌ನಲ್ಲೂ ಕಾಂತೇಶನ ಅಕ್ರಮ ಆಸ್ತಿಯ ಬಾವುಟ ಹಾರಾಡುತ್ತಿದೆ. ಎಲ್.ವಿಜಯಕುಮಾರ್ ಹಾಗೂ ಎನ್. ಬಸವರಾಜು ಎಂಬುವರಿಗೆ ಸೇರಿದ್ದ ಎರಡು ದೊಡ್ಡ ಆಸ್ತಿಯನ್ನು 2007ರ ಮೇ 25ರಂದು ಕಾಂತೇಶ ಬರೆಸಿಕೊಂಡಿದ್ದಾನೆ. ಒಂದು 2580 ಚದರಡಿ ಇದ್ದರೆ ಇನ್ನೊಂದು ಸಹ ಅಷ್ಟೇ ವಿಸ್ತೀರ್ಣವಿದೆ. ಇದರ ಇವತ್ತಿನ ಮಾರ್ಕೆಟ್ ರೇಟ್ ಎರಡು ಕೋಟಿ ರೂ.ಗಳು.

ಇಷ್ಟಲ್ಲದೇ ಬೈಪಾಸ್ ರಸ್ತೆಯಲ್ಲಿ ನಂದನ್ ಸ್ಕೂಲ್ ಅನ್ನು ಕಾಂತೇಶ್ ನಡೆಸುತ್ತಿದ್ದಾನೆ. ಯಡ್ಡಿ-ದೊರೆಸ್ವಾಮಿ ನಾಯ್ಡು ಜಂಟಿ ಪಾಲುದಾರಿಕೆಯ ಪಿಇಎಸ್ ಶಿಕ್ಷಣ ಸಂಸ್ಥೆಗೆ ಪ್ರತಿಸ್ಪರ್ಧೆ ಹೂಡುವಂತೆ ಪಿಎಇಸಿ ಎನ್ನುವ ಶಿಕ್ಷಣ ಸಂಸ್ಥೆ ಈಶ್ವರಪ್ಪನಿಗಿದೆ. ಈತ ಅದರ ಅಧ್ಯಕ್ಷನಾದರೆ ಸಮಾಜ ಸೇವಕ ಕಾಂತೇಶನೇ ಖಜಾಂಚಿ. ಬಾಯಿಬಡುಕ ಈಶ್ವರಪ್ಪ ದೇಶಪ್ರೇಮ, ದೇಶಸೇವೆ, ಹಿಂದೂತ್ವಗಳ ಬಗ್ಗೆ ವಿಪರೀತ ಹರಟುತ್ತಿರುತ್ತಾನಲ್ಲವೇ? ಈಗ ಜನರೆದುರು ಹೇಳಲಿ ಇಷ್ಟು ಆಸ್ತಿ ಖರೀದಿಸಲು ಹಣ ಎಲ್ಲಿಂದ ಬಂತು?

ಈಶ್ವರಪ್ಪ ನ್ಯಾಯವಾಗಿ ದುಡಿದು ಈ ಎಲ್ಲಾ ಆಸ್ತಿ ಖರೀದಿಸಿದ್ದಾನಾ ಅಥವಾ ಕದ್ದ ಹಣದಲ್ಲಿ ತನ್ನ ಆಸ್ತಿಯ ಸಾಮ್ರಾಜ್ಯ ಕಟ್ಟುತ್ತಿದ್ದಾನಾ ಎಂದು.

ಈಶ್ವರಪ್ಪನ ಈ ಅಕ್ರಮ ಆಸ್ತಿ ಆರೆಸ್ಸೆಸ್ ಭಂಡರಿಗೆ ಕಾಣಿಸುತ್ತಿದೆಯಾ?

• ಪಾರ್ವತೀಶ

HPC ಟಾಕೀಸ್ ಕಾಂತೇಶನ ಕೈಗೆ

ಇದು ಲೇಟೆಸ್ಟ್ ನ್ಯೂಸ್.

ಶಿವಮೊಗ್ಗೆಯ ಪುರಾತನ ಪ್ರಸಿದ್ಧ ಸಿನಿಮಾ ಥಿಯೇಟರ್ HPC ಈಗ ಕಾಂತೇಶನ ಕಂಟ್ರೋಲಿಗೆ ಬಂದಿದೆ. ಹೆಚ್.ಪಿ. ಚನ್ನಪ್ಪನವರ ಕುಟುಂಬಕ್ಕೆ ಸೇರಿರುವ ಈ ಟಾಕೀಸ್ ಕಳೆದ ಕೆಲ ತಿಂಗಳಿಂದ ಬಾಗಿಲು ಹಾಕಿತ್ತು. ಕಾಂತೇಶ ಈಗದನ್ನು ವಾರಕ್ಕೆ ಒಂದೂಕಾಲು ಲಕ್ಷದ ಬಾಡಿಗೆ ಒಪ್ಪಂದ ಮಾಡಿಕೊಂಡು ತನ್ನ ಸುಪರ್ದಿಗೆ ತೆಗೆದುಕೊಂಡಿದ್ದಾನೆ. ಅಂದರೆ ತಿಂಗಳಿಗೆ ಐದು ಲಕ್ಷ ಬಾಡಿಗೆಯೇ ಆಯಿತು. ಜೊತೆಗೆ ನೌಕರರ ಸಂಬಳ, ಕರೆಂಟ್ ಬಿಲ್, ಥಿಯೇಟರ್ ಮೈಂಟೇನೆನ್ಸ್ ಎಲ್ಲಾ ಲೆಕ್ಕ ಹಾಕಿದರೆ ತಿಂಗಳಿಗೆ ಮಿನಿಮಮ್ ಆರು ಲಕ್ಷ ರೂಪಾಯಿ ಖರ್ಚು ಬರುವ ವ್ಯವಹಾರವಿದು.

ಅಸಲಿಗೆ HPC ಟಾಕೀಸ್‌ನಿಂದ ಅಷ್ಟು ದೊಡ್ಡ ಮಟ್ಟದ ಲಾಭ ಬರುವ ಸಾಧ್ಯತೆಗಳಿಲ್ಲ. ಇದು ಗೊತ್ತಿದ್ದೂ ಕೂಡ ಕಾಂತೇಶ ಇದಕ್ಕೆ ಕೈಹಾಕಿರುವುದು ಯಾಕೆ ಗೊತ್ತೆ?

ಬ್ಲಾಕ್‌ಮನಿಯನ್ನು ವೈಟ್ ಮಾಡಿಕೊಳ್ಳಲು. ಹಡಬೆ ದುಡ್ಡು ಸಂಪಾದಿಸುವ ಖದೀಮರೆಲ್ಲರೂ ಸಾಮಾನ್ಯವಾಗಿ ಒಂದೆರಡು ನಷ್ಟದ ವ್ಯವಹಾರಗಳನ್ನು ಬೇಕಂತಲೇ ಕೈಗೆತ್ತಿಕೊಳ್ಳುತ್ತಾರೆ. ಹತ್ತಾರು ಮೂಲಗಳಿಂದ ಹರಿದು ಬರುತ್ತಿರುವ ಕಳ್ಳ ಹಣವನ್ನು ವೈಟ್ ಮನಿ ಮಾಡಿಕೊಳ್ಳಲು ಅದೇ ರಹದಾರಿ.

ಕಾಂತೇಶನ HPC ಟಾಕೀಸ್‌ನ ಲೀಸ್ ಕೂಡಾ ಅದೇ ತರದ ಡೀಲ್ ಆಗಿರುವಂತಿದೆ.



ಲೋಕಾಯುಕ್ತ ವರದಿಯಲ್ಲಿ ಈಶ್ವರಪ್ಪನ ಹೆಸರು?

ಈ ತರಹದ್ದೊಂದು ಸುದ್ದಿ ಬೆಂಗಳೂರು ಹಾಗೂ ...ಬಿಯ ಬಿಜೆಪಿ ವಲಯದಲ್ಲಿ ಹರಿದಾಡುತ್ತಿದೆ. ಇನ್ನೇನು ...ವುದೇ ಗಳಿಗೆಯಲ್ಲಾದರೂ ಸಲ್ಲಿಕೆಯಾಗಬಹುದಾದ ...ಮ ಗಣಿಗಾರಿಕೆ ಕುರಿತಾದ ಲೋಕಾಯುಕ್ತರ ಅಂತಿಮ ...ಯಲ್ಲಿ ಆರು ಜನ ಮಂತ್ರಿಗಳ ಹೆಸರಿದೆ ಎನ್ನಲಾಗುತ್ತಿದೆ. ...ಮೂವರು ರೆಡ್ಡಿ ಸೋದರರ ಹೆಸರು ...ದಲ್ಲಿರುತ್ತದೆಯೆಂಬುದು ಎಲ್ಲರಿಗೂ ಗೊತ್ತಿದೆ. ಇನ್ನೊಬ್ಬ ...ಸೋಮಣ್ಣನಾದರೆ, ಮಗದೊಬ್ಬ ಈಶ್ವರಪ್ಪನದಂತೆ ...ಬುದು ಬಿಜೆಪಿಯವರ ಅಂಬೋಣ.

...ಇದಕ್ಕೆ ಕಾರಣವಿಲ್ಲದೇ ಇಲ್ಲ. ಈಶ್ವರಪ್ಪ ಒಂದು ...ಪನಿ ಸ್ಥಾಪಿಸಿ ಅಗಾಧ ಪ್ರಮಾಣದ ಕಬ್ಬಿಣದ ಅದಿರನ್ನು ...ರುವಾಗಿ ಹೊರದೇಶಗಳಿಗೆ ಕಳಿಸಿದ್ದಾರೆ ಎನ್ನಲಾಗಿದೆ. ...ಗಾರಿಕೆ ದಂಧೆಯಲ್ಲಿ ಸಾವಿರಾರು ಕೋಟಿ ...ಪಾಯಿಗಳು ಹರಿದಾಡುತ್ತಿರುವುದನ್ನು ನೋಡುತ್ತಿದ್ದ ...ಶ್ವರಪ್ಪ ಸ್ವಲ್ಪ ಬುದ್ಧಿವಂತಿಕೆ ಉಪಯೋಗಿಸಿ ಗಣಿ ಲೈಸೆನ್ಸ್ ...ಯಲು ಹೋಗಲಿಲ್ಲ. ಅದರ ಬದಲಾಗಿ ಅದಿರು ...ಡಿಂಗ್‌ಗೆ ಕೈಹಾಕಿದ್ದ. ವಿ.ಸೋಮಣ್ಣ ಮಾತಾ ಮಿನರಲ್ಸ್ ...ನ್ನುವ ಖದೀಮ ಕಂಪೆನಿ ಸ್ಥಾಪಿಸಿ ತುಮಕೂರು, ...ಯೂರು ಸುತ್ತಮುತ್ತ ಅಕ್ರಮ ಗಣಿಗಾರಿಕೆ ನಡೆಸಿರುವುದು ...ನ ಲೋಕಾಯುಕ್ತರ ವರದಿಯಲ್ಲಿ ಬರಲಿದೆ. ...ನ್ನೊಂದೆಡೆ ಯಡ್ಡಿ ತನ್ನ ಮಕ್ಕಳ ಪ್ರೇರಣ ಶಿಕ್ಷಣ ಸಂಸ್ಥೆಗೆ ...ಕಳ್ಳರಿಂದ ಹತ್ತಾರು ಕೋಟಿ ದೇಣಿಗೆ ಕಿತ್ತಿದ್ದ ಸಂಗತಿ ...ಶ್ವರಪ್ಪನಿಗೆ ಗೊತ್ತಿತ್ತು. ಇದು ಎಲ್ಲರಿಗೂ ಗೊತ್ತಾಗಿ ...ಡ್ಡಿಯ ಮರ್ಯಾದೆಯೂ ಹರಾಜಾಗಿತ್ತು. ಹಾಗಾಗಿ ... ಲೈಸೆನ್ಸ್ ಅಥವಾ ಗಣಿ ದಂಧೆಯ ಉಸಾಬರಿಗೆ ...ಹೋಗದ ಈಶ್ವರಪ್ಪ ಟ್ರೇಡಿಂಗ್‌ಗೆ ಕೈಹಾಕಿ ಈಗ ಸಿಕ್ಕಿ ...ಳುವ ಹಂತ ತಲುಪಿದ್ದಾನೆ. ಒಂದು ಖಚಿತ ಸುದ್ದಿಯ ...ಪ್ರಕಾರ ಜುಲೈ 20ರಿಂದ 25ರೊಳಗೆ ಲೋಕಾಯುಕ್ತ ...ಸಂತೋಷ್ ಹೆಗ್ಡೆ ತಮ್ಮ ಅಂತಿಮ ವರದಿಯನ್ನು ನೀಡಲು ...ಸಿದ್ಧತೆ ಮಾಡಿಕೊಂಡಿದ್ದಾರೆ. ಈ ವರದಿ ರೆಡ್ಡಿ ಸೋದರರ ...ಇತಿಹಾಸಕ್ಕೆ ಮಾರಣಾಂತಿಕ ಏಟು ನೀಡಲಿದೆ. ಜೊತೆಗೆ ...ಬಳ್ಳಾರಿ ಜಿಲ್ಲೆಯ ಕನಿಷ್ಠ ಮುನ್ನೂರು ಮಂದಿ ಹಿರಿ-ಕಿರಿಯ ...ಸರ್ಕಾರಿ ಅಧಿಕಾರಿಗಳನ್ನೂ ತಪ್ಪಿತಸ್ಥರೆಂದು ದಾಖಲೆ ಸಮೇತ ...ಬಹಿರಂಗ ಮಾಡಲಿದೆ. ರೆಡ್ಡಿಗಳ ಜೊತೆಗೆ ಕಾಂಗ್ರೆಸ್‌ನ ...ಅಬ್ದುಲ್ ವಹಾಬ್ ಎಂ.ಬಿ.ಟಿ. ಮೈನಿಂಗ್ ಕಂಪೆನಿ, ಅನಿಲ್ ...ಲಾಡ್, ಡೆಕನ್ 'ಮೈನಿಂಗ್ ಕಂಪೆನಿಯ ರಾಕೇಶ್ ಜೈನ್, ...ರೆಡ್ಡಿ ಕ್ಯಾಂಪಿನ ಶಾಸಕರಾದ ನಾಗೇಂದ್ರ ಬಾಬು ಸುರೇಶ ...ಬಾಬುರ ಹೆಸರುಗಳೂ ಈ ವರದಿಯಲ್ಲಿ ಕಾಣಿಸಿಕೊಳ್ಳಲಿವೆ.

... ಲೋಕಾಯುಕ್ತರ ಹಿರಿಯ ಅಧಿಕಾರಿಯಾಗಿರುವ ...ಯು.ವಿ.ಸಿಂಗ್‌ರವರು ಸುಪ್ರೀಂಕೋರ್ಟ್ ನೇಮಿಸಿರುವ ...ಸಿಇಸಿ ಕಮಿಟಿಯಲ್ಲೂ ಸದಸ್ಯರಾಗಿರುವ ಕಾರಣ ಈ ಎರಡೂ ...ವರದಿಗಳ ನಡುವೆ ಹೆಚ್ಚಿನ ವ್ಯತ್ಯಾಸಗಳಾಗದಂತೆ ಸಂತೋಷ್ ...ಹೆಗ್ಡೆಯವರು ವಿಶೇಷ ಗಮನಹರಿಸಿ ತಮ್ಮ ವರದಿ ರೆಡಿ ...ಮಾಡುತ್ತಿದ್ದಾರೆ.

... ಹೆಸರುವಾಸಿ ಗಣಿಕಳ್ಳರ ಹೆಸರುಗಳು ಈ ವರದಿಯಲ್ಲಿ ...ಕಾಣಿಸಿಕೊಳ್ಳುವ ಬಗ್ಗೆ ಎಲ್ಲರಿಗೂ ಸ್ಪಷ್ಟ ಕಲ್ಪನೆಯಿದೆ. ...ಆದರೆ ಬಿಜೆಪಿ ರಾಜ್ಯಾಧ್ಯಕ್ಷ ಈಶ್ವರಪ್ಪನ ಹೆಸರು ಈ ಕಳ್ಳರ ...ಪಟ್ಟಿಯಲ್ಲಿ ಕಾಣಿಸಿಕೊಂಡಲ್ಲಿ ಅದು ಮಾತ್ರ ಅನಿರೀಕ್ಷಿತ ...ಬೆಳವಣಿಗೆಯಾಗಿರುತ್ತದೆ ಅಷ್ಟೆ.

ಪೋಸ್ಕೋ ಪಲಾಯನ: ಜನರ ಗೆಲುವು

ಇದು ಲಿಂಗಾಯತರ ಸರ್ಕಾರವಲ್ಲ, ಬ್ರಾಹ್ಮಣರ ಸರ್ಕಾರ

-ತೋಂಟದಾರ್ಯ ಸ್ವಾಮೀಜಿ

ಗದಗ ಜಿಲ್ಲೆಯ ಹಳ್ಳಿಗುಡಿ, ಜಂತ್ಲಿಶಿರೂರು, ಮೇವುಂಡಿ ಭಾಗದ ಫಲವತ್ತಾದ ಭೂಮಿಯನ್ನು ಪೋಸ್ಕೊ ಮತ್ತು ಇತರ ಕಂಪೆನಿಗಳಿಗೆ ಸರ್ಕಾರವು ಕೊಡಲು ಮುಂದಾದಾಗ, ರೈತರು ಮತ್ತು ಸಾಮಾನ್ಯ ಜನ ಶ್ರೀ ಜಗದ್ಗುರು ಡಾ. ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳ ನೇತೃತ್ವದಲ್ಲಿ ಹೋರಾಟ ನಡೆಸಿದರು. ಈ ಹೋರಾಟಕ್ಕೆ ಎಲ್ಲೆಡೆಯಿಂದ ಅದೆಷ್ಟು ಬೆಂಬಲ ವ್ಯಕ್ತವಾಯಿತೆಂದರೆ ಅದನ್ನು ಕಂಡು ಮುಖ್ಯಮಂತ್ರಿ ಯಡಿಯೂರಪ್ಪನ ಬಿಜೆಪಿ ಸರ್ಕಾರ ಬೆಚ್ಚಿತು. ಕೂಡಲೆ ಪೋಸ್ಕೋ ಕಂಪನಿಗಾಗಿ ರೈತರ ಫಲವತ್ತಾದ ಭೂಮಿಯನ್ನು ವಶಪಡಿಸಿಕೊಳ್ಳುವುದಿಲ್ಲವೆಂದು ಘೋಷಿಸಿತು.

ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳು ಹಿಂದಿನಿಂದಲೂ ಜನಪರ, ಪ್ರಗತಿಪರ ನಿಲುವನ್ನು ಹೊಂದಿರುವವರು, ಕೋಮು ಸೌಹಾರ್ದವನ್ನು ಬೆಂಬಲಿಸುವವರು, ಜಾತೀಯತೆಯನ್ನು ವಿರೋಧಿಸುವವರು. ಈ ಎಲ್ಲ ಕಾರಣಗಳಿಗೆ ಅವರು ಜನರ ಪ್ರೀತಿ ಮತ್ತು ಗೌರವವನ್ನು ಪಡೆದಿರುವವರು.

ಪೋಸ್ಕೋ ವಿರುದ್ಧದ ಹೋರಾಟ ಮತ್ತ ಅದರ ಪಲಾಯಣದ ಹಿನ್ನೆಲೆಯಲ್ಲಿ ಶ್ರೀ ಜಗದ್ಗುರು ಡಾ. ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳನ್ನು 'ಲಂಕೇಶ್' ವಾರ ಪತ್ರಿಕೆ ಸಂದರ್ಶಿಸಿತು.

ಪ್ರಶ್ನೆ: ಪೋಸ್ಕೊ ಮತ್ತು ಇತರ ಕಂಪನಿಗಳಿಗೆ ಸರ್ಕಾರವು ಭೂಮಿ ಕೊಡಲು ಹೊರಟಾಗ ನೀವು ರೈತರ ಹೋರಾಟದಲ್ಲಿ ಪಾಲ್ಗೊಳ್ಳುವ ಹಿಂದಿನ ಪ್ರೇರಣೆ ಏನು?

ಸ್ವಾಮಿಗಳು: ನಾನು ಬಸವ ಪರಂಪರೆಯ ಮಠದ ಅಧಿಪತಿಯಾಗಿರುವುದರಿಂದ ಜನಪರವಾದ ಬಸವಣ್ಣ ಮತ್ತು ಬಸವ ಪರಂಪರೆಯೇ ನಮಗೆ ಮುಖ್ಯ. ಈ ಭೂಮಿಯ ಬಗ್ಗೆ ರೈತರು, ರೈತ ಮಕ್ಕಳೊಂದಿಗೆ ನಮಗೆ ವಿಶೇಷವಾದ ಕಾಳಜಿ, ಮಮತೆ, ಅನೂನ್ಯತೆಯ ಸಂಬಂಧವಿದೆ. ಶ್ರೀ ತೋಂಟದಾರ್ಯ ಪೀಠದ ಪೀಠವನ್ನು ಏರಿದ ನಂತರ ಡಂಬಳದಲ್ಲಿ ಮಠದ ಹೊಲದಲ್ಲಿ 10-15 ವರ್ಷ ಕೃಷಿಯನ್ನು ಸ್ವತಃ ಮಾಡಿದ ಅನುಭವವಿದೆ. ಕೃಷಿಯ ಮೇಲಿನ ಪ್ರೇಮದಿಂದಾಗಿ ಮಣ್ಣಿನ ಮಕ್ಕಳ ಭಾವನೆಗಳನ್ನು ಅರ್ಥಮಾಡಿಕೊಳ್ಳುವ ಮನಃಸ್ಥಿತಿ ಮೊದಲಿನಿಂದಲೂ ಇದೆ. ಒಂದೆಡೆ ಜನಪರವಾದ ಕಾಳಜಿ ಇರುವುದರಿಂದ ಮತ್ತು ಇನ್ನೊಂದೆಡೆ ಕೈಗಾರಿಕೆಗಳು ಮಾಡುವ ನಾಶವನ್ನು ಮನಗಂಡಿರುವುದರಿಂದ ಈ ಹೋರಾಟದಲ್ಲಿ ಪಾಲ್ಗೊಂಡಿದ್ದೇನೆ. ಜೊತೆಗೆ ಜಂತ್ಲಿ-ಶಿರೂರಿನಲ್ಲಿರುವ ಮಠದ 19 ಎಕರೆ ಭೂಮಿಯೂ ಪೋಸ್ಕೋ ಕಂಪೆನಿಯ ಭೂಸ್ವಾಧೀನಕ್ಕೆ ಒಳಪಡಲಿತ್ತು. ಇದೂ ರೈತರ ಹೋರಾಟದಲ್ಲಿ ಪಾಲ್ಗೊಳ್ಳಲು ಕಾರಣವಾಯಿತು.

ಪ್ರಶ್ನೆ: ದೇಶ-ರಾಜ್ಯದ ಅಭಿವೃದ್ಧಿ ಆಗಬೇಕಾದರೆ ಕೈಗಾರಿಕೆಗಳು ಅವಶ್ಯ ಅನಿಸುವುದಿಲ್ಲವೆ?

ಉತ್ತರ: ನಾವು ಕೈಗಾರಿಕೆಗಳ ವಿರೋಧಿಗಳಲ್ಲ. ನಾವು ಶ್ರೀಮಠದ ಶಿಕ್ಷಣ ಸಂಸ್ಥೆಯಿಂದ 15 ಐಟಿಐ, 2 ಡಿಪ್ಲೋಮಾ ಕಾಲೇಜು, ಒಂದು ಇಂಜಿನಿಯರಿಂಗ್ ಕಾಲೇಜು ನಡೆಸುತ್ತೇವೆ. ಐಟಿಐ ಕಾಲೇಜು ಬಹುಮುಖ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಇದ್ದು, ಗ್ರಾಮೀಣ ಯುವಜನತೆಗೆ ಸ್ವಯಂ- ಉದ್ಯೋಗ ಕೈಗೊಳ್ಳಲು ಸಹಾಯವಾಗಿದೆ.

ಆದರೆ ಬೃಹತ್ ಕೈಗಾರಿಕೆಗಳಿಂದ ಆಗುವ ಭಾರಿ ಅನಾಹುತವನ್ನು ಕೊಪ್ಪಳ ಜಿಲ್ಲೆ ಶಕ್ತಿ ನಗರದಲ್ಲಿ ನೋಡಬಹುದಾಗಿದೆ. ಶಕ್ತಿ ನಗರದಲ್ಲಿ ಕಲ್ಲಿದ್ದಲಿನಿಂದ ವಿದ್ಯುತ್ ಉತ್ಪಾದಿಸುವ ಘಟಕವಿದೆ. ಈ ಘಟಕದಿಂದ ಹಾರುಬೂದಿಯು ಜನರ ಮತ್ತು ಬೆಳೆಗಳ ಮೇಲೆ ದುಷ್ಪರಿಣಾಮವನ್ನು ಬೀರುತ್ತಿದೆ. ಆ ಘಟಕದಿಂದ ಬರುವ ಬಿಸಿಯಾದ ಗಾಳಿಯು ವಾತಾವರಣದಲ್ಲಿ ಸೇರಿಕೊಂಡು ಸುತ್ತಲಿನ ಪ್ರದೇಶದಲ್ಲಿರುವ ಗಾಳಿಯ ಬಿಸಿ ಹೆಚ್ಚಿಸಿದೆ. ಇದರಿಂದ ವಾತಾವರಣದ ತಾಪಮಾನವು ಏರುತ್ತಿದೆ. ಜನರ ಆರೋಗ್ಯದ ಮೇಲೆ ದುಷ್ಪರಿಣಾಮವನ್ನು ಬೀರುತ್ತಿದೆ.

ಬೃಹತ್ ಕೈಗಾರಿಕೆಗಳಿಂದ ಲಾಭಕ್ಕಿಂತಲೂ ನಷ್ಟವೇ ಜಾಸ್ತಿಯಾಗುತ್ತದೆ. ಏಕೆಂದರೆ ಒಂದೆಡೆ ಪರಿಸರ ಮಾಲಿನ್ಯವಾಗುತ್ತಿದ್ದರೆ ಇನ್ನೊಂದೆಡೆ ನಮ್ಮ ದೇಶದ ನೈಸರ್ಗಿಕ ಸಂಪತ್ತಿನ ಲೂಟಿ ನಡೆಯುತ್ತಿದೆ. ಈ ನೈಸರ್ಗಿಕ ಸಂಪತ್ತು ಯಾರೊಬ್ಬರ ಸ್ವತ್ತಲ್ಲ ಬದಲಾಗಿ ಸಾಮಾಜಿಕ ಒಡೆತನಕ್ಕೆ ಸೇರಿದ ಸಂಪತ್ತು, ಇದನ್ನು ವಿದೇಶಿ ಕಂಪೆನಿಗಳು ಲೂಟಿ ಹೊಡೆಯಲು ಬರುವುದು ಸರಿಯಲ್ಲ.


ಸರ್ಕಾರವು ಬೇಕಾದರೆ ಕೃಷಿ ಆಧಾರಿತ ಕೈಗಾರಿಕೆಗಳನ್ನೋ, ಗೃಹ ಕೈಗಾರಿಕೆಗಳನ್ನೋ ಸ್ಥಾಪಿಸಿದರೆ ಅದರಿಂದ ರೈತರಿಗೂ, ಈ ಭಾಗದ ಜನತೆಗೂ ಅನುಕೂಲ ಕಲ್ಪಿಸಿದಂತಾಗುತ್ತದೆ. ಅಂತಹ ಕ್ರಮಕ್ಕೆ ನಮ್ಮ ಸ್ವಾಗತವಿದೆ.

ಪ್ರಶ್ನೆ: ಈ ಹೋರಾಟಕ್ಕೆ ಜಯ ಸಿಗುತ್ತೆ ಅಂತ ನಿಮಗೆ ಮೊದಲ ಹಂತದಲ್ಲಿಯೇ ಅನ್ನಿಸಿತ್ತಾ ಸ್ವಾಮೀಜಿ?

ಉತ್ತರ: ಹೋರಾಟದ ಮೊದಲ ಹಂತವಾಗಿ ಜಂತ್ಲಿ-ಶಿರೂರು, ಹಳ್ಳಿಗುಡಿ, ಮೇವುಂಡಿ ಗ್ರಾಮಗಳಲ್ಲಿ ರೈತರ ಜಾಗೃತಿ ಸಭೆಗಳನ್ನು ಮಾಡಿದಾಗ ಸಾವಿರಾರು ಸಂಖ್ಯೆಯಲ್ಲಿ ರೈತರು-ಜನತೆಯು ಸೇರಿದರಲ್ಲದೇ ಹೋರಾಟದಲ್ಲಿ ಪಾಲ್ಗೊಳ್ಳಲು ಅವರೆಲ್ಲ ಮುಂದೆ ಬಂದರು. ಮೊದಮೊದಲು ಇವರನ್ನೆಲ್ಲ ನೋಡಿದಾಗ ಆಶ್ಚರ್ಯ ಅನಿಸಿತು. ಜೊತೆಗೆ ರೋಮಾಂಚನವೂ ಆಯಿತು. ಯಾಕೆಂದರೆ ಇಷ್ಟೊಂದು ಜನ ಸೇರಲು ಇದೇನು ಪುರಾಣಗಳ-ಪ್ರವಚನಗಳ ಸಭೆ ಆಗಿರಲಿಲ್ಲವಲ್ಲ!

ಪ್ರಶ್ನೆ: ಬಿ.ಎಸ್. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರವನ್ನು ಲಿಂಗಾಯತರ ಸರ್ಕಾರ ಎಂದು ಬಣ್ಣಿಸಲಾಗುತ್ತಿದೆ. ಲಿಂಗಾಯತ ಸ್ವಾಮೀಜಿ ಆದ ತಮ್ಮೊಂದಿಗೆ ಸರ್ಕಾರ ಸೂಕ್ತವಾಗಿ ಸ್ಪಂದಿಸಿತೆ?

ಉತ್ತರ: ಇಲ್ಲ, ಹಾಗೇನೂ ಅನಿಸುವುದಿಲ್ಲ. ಲಿಂಗಾಯತರು ಬಿಜೆಪಿಯಲ್ಲಿದ್ದುಕೊಂಡು ಆಡಳಿತ ನಡೆಸುತ್ತಿದ್ದರೂ ಪೋಸ್ಕೋ ವಿರುದ್ಧದ ಲಿಂಗಾಯತ ಸ್ವಾಮಿಗಳ ಹೋರಾಟಕ್ಕೆ ಸರ್ಕಾರ ಸ್ಪಂದಿಸಿಲ್ಲ. ಸಚಿವ ಸಿ.ಸಿ. ಪಾಟೀಲ ಇಲ್ಲಿಗೆ ಬಂದು ಭೇಟಿ ಮಾಡಿಹೋದರು. ಆದರೆ ಅಧಿಕೃತವಾಗಿ ಯಾರೂ ಬಂದು ಭೇಟಿ ಮಾಡಲಿಲ್ಲ. ಈ ಯೋಜನೆಯ ಒಟ್ಟಾರೆ ಸಾರಾಂಶ ಎಂತಹದ್ದು ಎಂದೂ ತಿಳಿಸಲಿಲ್ಲ. ಬದಲಾಗಿ ಈ ಯೋಜನೆ ಕುರಿತು ಜನರನ್ನು, ರೈತರನ್ನು ಕತ್ತಲೆಯಲ್ಲಿ ಇಟ್ಟಿದೆ ಸರ್ಕಾರ.



ಕೈಗಾರಿಕಾ ಮಂತ್ರಿ ಮುರುಗೇಶ್ ನಿರಾಣಿಯವರು ಇಲ್ಲಿನ ಭೂಮಿ ಬಂಜರು ಎಂದು ತಪ್ಪು ಹೇಳಿಕೆ ನೀಡಿದರು. ನೀರಾವರಿ ಮಂತ್ರಿ ಬಸವರಾಜ ಬೊಮ್ಮಾಯಿ ಈ ಯೋಜನೆಗೆ ಹನಿ ನೀರನ್ನೂ ಕೊಡುವುದಿಲ್ಲ ಎಂದು ಹೇಳಿದರಾದರೂ ಪೋಸ್ಕೋ ಜೊತೆಗಿನ ಒಪ್ಪಂದದಲ್ಲಿ ನೀರು ಕೊಡಲಾಗುವುದು ಎಂದು ಸರ್ಕಾರ ಹೇಳಿದೆ. ಹಾಗೆಯೇ ಪರಿಸರ ಖಾತೆಯ ಮಂತ್ರಿಯು ಕೈಗಾರಿಕೆಯಿಂದಾಗುವ ದುಷ್ಪರಿಣಾಮದ ಬಗ್ಗೆ ಯಾವುದೇ ಹೇಳಿಕೆಯನ್ನು ನೀಡಲಿಲ್ಲ. ಸರ್ಕಾರ ಈ ಯೋಜನೆ ಕುರಿತಂತೆ ಜನರನ್ನು ಕತ್ತಲೆಯಲ್ಲಿ ಇಟ್ಟಿದ್ದರು ಎಂಬುದಕ್ಕೆ ಇದೆಲ್ಲ ಸ್ಪಷ್ಟ ಉದಾಹರಣೆಯಾಗಿವೆ.

ಇವತ್ತು ಸರ್ಕಾರದಲ್ಲಿ ಲಿಂಗಾಯತರು ಮುಖ್ಯಮಂತ್ರಿ ಮತ್ತು ಮಂತ್ರಿ ಸ್ಥಾನಗಳನ್ನು ಹೊಂದಿರಬಹುದು. ಆದರೆ ವಾಸ್ತವವಾಗಿ ಅಧಿಕಾರ ಬ್ರಾಹ್ಮಣರ ಕೈಯಲ್ಲಿದೆ. ಇದು ತೋರಿಕೆಯ ಲಿಂಗಾಯತರ ಸರ್ಕಾರವಾಗಿದೆ.

ಪ್ರಶ್ನೆ: ಬಿಜೆಪಿಯು ರೈತರ ಹಿತ ಕಾಯುತ್ತಿದೆಯೆಂತ ಅನಿಸುತ್ತದೆಯೇ ಸ್ವಾಮೀಜಿ?

ಉತ್ತರ: ರೈತರ ಭೂಮಿಗೆ ಬೆಲೆ ಕಟ್ಟಲು ಆಗುವುದಿಲ್ಲ. ಉದಾಹರಣೆಗೆ ಹೇಳುವುದಾದರೆ ಗದಗ ಸುತ್ತಲಿನ ಪ್ರದೇಶದಲ್ಲಿ ಗಾಳಿ ವಿದ್ಯುತ್ ಉತ್ಪಾದಿಸುವ ಯಂತ್ರಗಳನ್ನು ಖಾಸಗಿ ಕಂಪನಿಗಳು ಹಾಕಿವೆ. ರೈತರ ಭೂಮಿಗೆ 5 ಲಕ್ಷ ಕೊಟ್ಟು ಅಲ್ಲಿ ಗಾಳಿ ವಿದ್ಯುತ್ ಉತ್ಪಾದನೆ ಮಾಡುತ್ತಿರುವ ಕಂಪನಿಯು ಕೋಟ್ಯಂತರ ಹಣವನ್ನು ಮಾಡುತ್ತಿದೆ. ಅದರಲ್ಲಿ ರೈತರಿಗೆ ಯಾವ ಪಾಲು ಇಲ್ಲವೇ ಇಲ್ಲ.

ಆದ್ದರಿಂದ ಸರ್ಕಾರಗಳು ಯೋಜನೆಗಳನ್ನು ರೂಪಿಸುವಾಗ ಅದರಲ್ಲಿ ರೈತನಿಗೂ ಪಾಲು ದೊರೆಯುವಂತೆ ಶರತ್ತುಗಳನ್ನು ಅಳವಡಿಸಬೇಕು. ಆಗ ಮಾತ್ರ ರೈತನ ಹಿತ ಕಾಪಾಡಿದಂತಾಗುತ್ತದೆ. ಇಲ್ಲದಿದ್ದರೆ ರೈತ ವಿರೋಧಿ ಸರ್ಕಾರ ರೈತರ ಹಿತ ಕಾಯುತ್ತಿಲ್ಲ ಎಂದೆನಿಸುತ್ತದೆ.

ಪ್ರಶ್ನೆ: ಸರ್ಕಾರವು ಭೂಸ್ವಾಧೀನ ಪ್ರಕ್ರಿಯೆ ಕೈಬಿಟ್ಟು, ಪೋಸ್ಕೋಗೆ ಭೂಮಿ ಕೊಡುವುದಿಲ್ಲ ಎಂದಿದೆ. ಇದು ಸ್ವಾಮಿಗಳ ಜಯವೋ, ರೈತರ ಜಯವೋ?

ಉತ್ತರ: ಈ ಹೋರಾಟಕ್ಕೆ ಜಯ ಸಿಕ್ಕಿದ್ದು ಖಂಡಿತವಾಗಿಯೂ ರೈತರು ಮತ್ತು ಜನರ ಇಚ್ಛಾಶಕ್ತಿ (will power) ಯ ಗಟ್ಟಿತನದ ಕಾರಣಕ್ಕೆ. ಇದು ಸ್ವಾಮಿಗಳ ಜಯವಲ್ಲ, ರೈತರು-ಜನರ ಜಯವಾಗಿದೆ. ಇಲ್ಲಿ ಸ್ವಾಮಿಗಳು ರೈತರ ಮತ್ತು ಜನರ ಮನೋಭಾವನೆಗೆ ಸ್ಪಂದಿಸಿ ವಾಹಕಗಳಾಗಿ ಕೆಲಸ ಮಾಡಿದ್ದಾರೆ.

ಪ್ರಶ್ನೆ: ಸ್ವಾಮೀಜಿ ನೀವು ಹೋರಾಟದಲ್ಲಿ ಪಾಲ್ಗೊಂಡಾಗ ನಿಮ್ಮ ಮೇಲೆ ರಾಜಕೀಯ ಒತ್ತಡ ಏನಾದರೂ ಬಂದಿತ್ತಾ?

ಉತ್ತರ: ಇಲ್ಲ, ನನ್ನ ಮೇಲೆ ಯಾವ ರಾಜಕೀಯ ಒತ್ತಡವೂ ಬರಲಿಲ್ಲ. ನಾವು ಇಲ್ಲಿಯವರೆಗೂ ಯಾವುದೇ ಜನಪ್ರತಿನಿಧಿಗಳಿಂದ ಕೆಲಸವನ್ನು ಮಾಡಿಸಿಕೊಂಡಿಲ್ಲ. ಹೀಗಾಗಿ ಅವರು ಒತ್ತಡ ತರುವುದು ಏನು ಬಂತು, ಕೆಲವು ಸಣ್ಣ-ಪುಟ್ಟ ತೊಂದರೆಗಳು ಇರಬಹುದೇ ಹೊರತು ಅಂತಹ ಒತ್ತಡವೇನೂ ಇಲ್ಲ.

ಪ್ರಶ್ನೆ: ಸ್ವಾಮೀಜಿ, ನಿಮ್ಮ ಭೂಸ್ವಾಧೀನ ವಿರೋಧಿ ಸಂಗ್ರಾಮ ಸಮಿತಿಯ ಹೋರಾಟ ಕಾರ್ಯಕ್ರಮಕ್ಕೆ ಸರ್ಕಾರವು ಎಚ್ಚೆತ್ತುಕೊಂಡಿತೆ?

ಉತ್ತರ: ನೋಡಿ, ಮಠಾಧೀಶರ ಸಮಾವೇಶ, ಕಾಲ್ನಡಿಗೆ, ಜಾಥಾದಂತಹ ಕಾರ್ಯಕ್ರಮಗಳನ್ನು ಸಮಿತಿಯು ಪ್ರಕಟಿಸಿದಾಗ ಸರ್ಕಾರ ಕೂಡಲೇ ಎಚ್ಚೆತ್ತುಕೊಂಡಿತಲ್ಲದೆ ಹೋರಾಟದ ತೀವ್ರತೆಯು ಇನ್ನೂ ಹೆಚ್ಚಾಗುವ ಸಾಧ್ಯತೆಗಳನ್ನು ಅರಿತ ಸರ್ಕಾರವು 'ಪೋಸ್ಕೊಗೆ ಭೂಮಿ ಕೊಡುವುದಿಲ್ಲ, ರೈತರ ಭೂಮಿಯನ್ನು ತೆಗೆದುಕೊಳ್ಳುವುದಿಲ್ಲ' ಎಂದು ಹೇಳುವ ಬಿಕ್ಕಟ್ಟಿನಲ್ಲಿ ಸಿಕ್ಕಿಹಾಕಿಕೊಂಡಿತು.

ಈ ಪ್ರದೇಶದಲ್ಲಿ ಮಾತ್ರವಲ್ಲ, ರಾಜ್ಯದ ಯಾವುದೇ ಭಾಗದಲ್ಲಿ ಆಗಲಿ ಸರ್ಕಾರ ಏನಾದರೂ ರೈತರ ಫಲವತ್ತಾದ ಭೂಮಿ ಕಿತ್ತುಕೊಳ್ಳಲು ಹೋದರೆ, ರೈತರಿಗೆ ತೊಂದರೆ ಮಾಡಿದರೆ ನಮ್ಮ ಕೃಷಿ ಹಿತ ರಕ್ಷಣಾ ಕ್ರಿಯಾ ಸಮಿತಿಯಿಂದ ರಾಜ್ಯವ್ಯಾಪ್ತಿಯಲ್ಲಿ ಪ್ರತಿಭಟನೆಗಳು ನಡೆಯುತ್ತವೆ. ರಾಜ್ಯದ ನೆಲ-ಜಲ-ಜನ ರಕ್ಷಣೆಗೆ ನಾವು ಮುಂದಾಗುತ್ತೇವೆ. ಇದನ್ನು ಕುರಿತು ರೂಪು -ರೇಷೆಯನ್ನು ಸಿದ್ಧಪಡಿಸಲಾಗುತ್ತಿದೆ. ಗಾಂಧೀಜಿಯವರ ಅಹಿಂಸಾ ಮಾರ್ಗದಲ್ಲಿ ಹೋರಾಟ ನಡೆಯುತ್ತದೆ.

ಪ್ರಶ್ನೆ: ರೈತರಿಗೆ ಇಷ್ಟು ಬೇಗ ಜಯ ಸಿಕ್ಕಿರುವುದಕ್ಕೆ ಏನೇನು ಕಾರಣವಿರಬಹುದು?

ಉತ್ತರ: ರೈತರಿಗೆ ಸ್ವಲ್ಪ ಸಮಯದಲ್ಲೇ ಜಯವು ಸಿಕ್ಕಿದ್ದರೂ, ಈ ಜಯಕ್ಕೆ ಹಲವು ಆಯಾಮಗಳು ಇವೆ. ಬಹುಮುಖ್ಯವಾಗಿ ರೈತರು ಭೂಮಿ ಕೊಡುವುದಿಲ್ಲ ಎಂದು ಗಟ್ಟಿಯಾಗಿ ನಿಂತದ್ದು, ಸ್ವಾಮೀಜಿಗಳು ನೇತೃತ್ವ ವಹಿಸಿಕೊಂಡಿದ್ದು, ಕಾಂಗ್ರೆಸ್-ಜೆಡಿಎಸ್ ಪಕ್ಷಗಳು ರೈತರ ಹೋರಾಟವನ್ನು ಬೆಂಬಲಿಸಿದ್ದು, ಅಲ್ಲದೇ ಹೋರಾಟಗಾರ್ತಿ ಮತ್ತು ಸಾಮಾಜಿಕ ಕಾರ್ಯಕರ್ತೆ ಮೇಧಾ ಪಾಟ್ಕರ್ ರೈತರ ಹೋರಾಟ ಬೆಂಬಲಿಸಲು ಹಳ್ಳಿಗುಡಿ ಗ್ರಾಮಕ್ಕೆ ಭೇಟಿ ನೀಡಿದ್ದು, ರೈತ ಸಂಘ, ಕಮ್ಯುನಿಸ್ಟರು ಮತ್ತು ಇತರೆ ಹಲವಾರು ಸಂಘಟನೆಗಳು ಈ ಹೋರಾಟದಲ್ಲಿ ಸೇರಿದ್ದು, ಇಂತಹ ಹಲವಾರು ಅಂಶಗಳು ಜೊತೆಗೂಡಿದ್ದರಿಂದ ಯಡಿಯೂರಪ್ಪ ಬಿಕ್ಕಟ್ಟಿನಲ್ಲಿ ಸಿಕ್ಕಿಹಾಕಿಕೊಂಡು ಪೋಸ್ಕೋಗಾಗಿ ರೈತರ ಭೂಮಿ ತೆಗೆದುಕೊಳ್ಳುವುದಿಲ್ಲ ಎಂದು ಅನಿವಾರ್ಯವಾಗಿ ಹೇಳಿಕೆ ನೀಡಬೇಕಾಯಿತು.

ಪ್ರಶ್ನೆ: ಸರ್ಕಾರ ತನ್ನ ಮಾತಿಗೆ ತಪ್ಪಿ ಮತ್ತೆ ಭೂಸ್ವಾಧೀನಕ್ಕೆ ಮುಂದಾದರೆ ನಿಮ್ಮ ಹೋರಾಟದ ರೂಪ-ರೇಷೆ ಏನು?

ಉತ್ತರ: ಸರ್ಕಾರವು ಬಿ.ಎಸ್. ಯಡಿಯೂರಪ್ಪ ಕೊಟ್ಟಿರುವ ಮಾತಿಗೆ ತಪ್ಪಿ ರೈತರ ಭೂಮಿಯನ್ನು ವಶಪಡಿಸಿಕೊಳ್ಳಲು ಹೊರಟರೆ ನಮ್ಮ ಹೋರಾಟವು ಉಗ್ರರೂಪವನ್ನು ತಾಳುತ್ತದೆ.

ಪೋಸ್ಕೋ ಕಂಪನಿಗೆ ರೈತರ ಭೂಮಿಯನ್ನು ತೆಗೆದುಕೊಳ್ಳುವುದಿಲ್ಲ ಎಂಬ ಸರ್ಕಾರದ ನಿರ್ಧಾರವನ್ನು ಅಭಿನಂದಿಸುತ್ತಲೇ ಮುಂದೆ ರೈತರ ಭೂಮಿಯನ್ನು ಮುಟ್ಟಬೇಡಿ ಎನ್ನುವ ಮಾತುಗಳನ್ನು ಹೇಳುತ್ತೇವೆ.

ಸಂದರ್ಶನ: ಹು.ಬಾ. ವಡ್ಡಟ್ಟಿ

ತುಮಕೂರು ನಗರಸಭೆಯಲ್ಲೊಬ್ಬ ಸ್ತ್ರೀಪೀಡಕ ಶಿವಪ್ರಸಾದ್!

ಈತ ತನ್ನ ಕೈಕೆಳಗಿನ ಯೋಜನೆಯೊಂದರಿಂದ ಏಕಕಾಲಕ್ಕೆ ತರಹೇವಾರಿ ಲಾಭ ಪಡೆಯಬಲ್ಲ ನಿಷ್ಣಾತ. ಪಕ್ಷಭೇದವಿಲ್ಲದೆ ನಾಯಕರೆದುರು ಬಕೀಟು ಗಲಗಲಿಸಿ ಲಾಭ ಗಿಟ್ಟಿಸಿಕೊಳ್ಳಬಲ್ಲ ಅವಕಾಶವಾದಿ. ತರಬೇತಿಗೆಂದು ಬರುವ ಪಾಪದ ಹೆಣ್ಮಕ್ಕಳನ್ನು ನೇರವಾಗಿ ಮಂಚಕ್ಕೆ ಆಹ್ವಾನಿಸಬಲ್ಲ ಪಕ್ಕಾ ಸ್ತ್ರೀಪೀಡಕ. ತುಮಕೂರು ನಗರಸಭೆಯಲ್ಲಿ ಇದಿಷ್ಟೂ ಸದ್ಗುಣಗಳುಳ್ಳ ಮಹಾಪುರುಷ ಯಾರು ಅಂದರೆ ಶಿವಪ್ರಸಾದ್ ಎಂಬ ಒಕ್ಕೊರಲಿನ ಉತ್ತರ ಎದುರಾಗುತ್ತೆ!

ಶಿವಪ್ರಸಾದ್ ತುಮಕೂರು ನಗರಸಭೆಯಲ್ಲಿ ಸ್ವರ್ಣ ಜಯಂತಿ ರೋಜ್‌ಗಾರ್ (ಎಸ್‌ಜೆಆರ್‌ವೈ)ನ ಯೋಜನಾಧಿಕಾರಿ. ಕಳೆದ ಹತ್ತು ವರ್ಷಗಳಿಂದ ಇಲ್ಲೇ ಬೇರುಬಿಟ್ಟಿರುವ ಈತನ ಬಗ್ಗೆ ಹಲವಾರು ರಂಗೀನ್ ಕಥೆಗಳಿವೆ. ಇವನು ಕೆಪಿಸಿಸಿ ಅಧ್ಯಕ್ಷ ಜಿ. ಪರಮೇಶ್ವರ್ ಹಾಗೂ ಬಿಜೆಪಿಯ ಸೊಗಡು ಶಿವಣ್ಣನ ಶಿಷ್ಯ. ಈ ಬಲದಿಂದಲೇ ಧರ್ಮದೇಟುಗಳಿಂದ ತಪ್ಪಿಸಿಕೊಂಡು ಹಣ ಹೊಡೆಯುತ್ತಿದ್ದಾನೆ. ಜೊತೆಗೆ ಎಸ್‌ಜೆಆರ್‌ವೈ ಯೋಜನೆಯ ಫಲಾನುಭವಿ ಹೆಣ್ಮಕ್ಕಳನ್ನು ಎಡೆಬಿಡದೆ ಕಾಡಿಸುತ್ತಿದ್ದಾನೆ.


ಈತ ಮೂಲತಃ ತುಮಕೂರಿನ ಜಯಪುರ ಬಡಾವಣೆಯವನು. ಇದು ಪರಿಶಿಷ್ಟ ವರ್ಗ ಮತ್ತು ಪಂಗಡದವರ ಸಂಖ್ಯೆ ಅಧಿಕವಿರುವ ಪ್ರದೇಶ. ಮೂಲಭೂತ ಸೌಕರ್ಯಗಳೆಂಬುದು ಇವತ್ತಿಗೂ ಈ ಏರಿಯಾದಿಂದ ಫರ್ಲಾಂಗು ದೂರದಲ್ಲಿದೆ. ಇಂಥಾ ಪ್ರದೇಶದಿಂದ ಎದ್ದು ಬಂದ ಶಿವಪ್ರಸಾದ್ ಸೊಗಡು ಶಿವಣ್ಣ ಹಾಗೂ ಪರಮೇಶ್ವರ್ ಕೃಪೆಯಿಂದಲೇ ತುಮಕೂರು ನಗರಸಭೆಗೆ ಅಮರಿಕೊಂಡ. ಕೆಲಸಕ್ಕೆ ಸೇರಿದ ಆರಂಭದಿಂದಲೂ ಬುದ್ಧಿಶಕ್ತಿಯನ್ನೆಲ್ಲಾ ಹಣ ಲಪಟಾಯಿಸಲೆಂದೇ ಮೀಸಲಿಟ್ಟ ಶಿವಪ್ರಸಾದ್ ನೋಡನೋಡುತ್ತಲೇ ಪ್ರತಿಷ್ಠಿತ ಪ್ರದೇಶಗಳ ಸೈಟುಗಳಿಗೆ ಮಾಲೀಕನಾದ.

ಇಂಥಾ ಧನಪಿಶಾಚಿ ಎಸ್‌ಜೆಆರ್‌ವೈ ಯೋಜನೆಗೆ ಅಧಿಕಾರಿಯಾಗಿ ವಕ್ಕರಿಸಿದವನೇ ಎಲ್ಲವನ್ನೂ ಹಾಳುಗೆಡವಲಾರಂಭಿಸಿದ. ಸ್ವರ್ಣಜಯಂತಿ ರೋಜ್‌ಗಾರ್ ಯೋಜನೆ ಯುವಕರಿಗೆ ವಾಹನ ತರಬೇತಿ, ಮಹಿಳೆಯರಿಗೆ ಟೇಲರಿಂಗ್ ಹಾಗೂ ಬ್ಯೂಟಿಷಿಯನ್ ಕೋರ್ಸ್‌ಗಳ ತರಬೇತಿ ನೀಡಿ ಅದಕ್ಕೆ ಬೇಕಾದ ಸಲಕರಣೆ ಪೂರೈಸಿ ಸ್ವಉದ್ಯೋಗ ಸೃಷ್ಟಿಸುವ ಮಹತ್ವಾಕಾಂಕ್ಷೆಯುಳ್ಳದ್ದು. ಇದರಡಿಯಲ್ಲಿ ವಾರ್ಡ್‌ಗಳಿಗೊಬ್ಬರಂತೆ ನೋಡೆಲ್ ಅಧಿಕಾರಿಗಳಿರುತ್ತಾರೆ. ಇವರು ತಮ್ಮ ವ್ಯಾಪ್ತಿಯ ಸ್ತ್ರೀಶಕ್ತಿ ಸಂಘಗಳೊಂದಿಗೆ ಸಂಪರ್ಕವಿಟ್ಟುಕೊಂಡು ಅರ್ಹ ಹೆಣ್ಮಕ್ಕಳನ್ನು ಆಯ್ಕೆ ಮಾಡುವ ಪರಿಪಾಠವಿದೆ. ಹೀಗೆ ಆಯ್ಕೆಯಾದ ಐವತ್ತರಿಂದ ಅರವತ್ತು ಜನರ ಬ್ಯಾಚ್ ಮಾಡಿ ತರಬೇತಿ ನೀಡಲಾಗುತ್ತದೆ. ಇದೆಲ್ಲದರ ದೇಖಾರೇಖಿ ನೋಡಿಕೊಳ್ಳುವ ಶಿವಪ್ರಸಾದ್ ತರಬೇತಿ ಮುಗಿಯುವವರೆಗೂ ಮುಗುಮ್ಮಾಗಿರುತ್ತಾನೆ.

> ಸ್ವತಂತ್ರವಾಗಿ ಬದುಕುವ ನೂರಾರು ಕನಸುಗಳೊಂದಿಗೆ ತರಬೇತಿ ಪಡೆದ ಅಮಾಯಕ ಹೆಣ್ಮಕ್ಕಳು ಶಿವಪ್ರಸಾದ್‌ನ ಕಾಮುಕತನದಿಂದ ನಿಜಕ್ಕೂ ಕಂಗಾಲಾಗುತ್ತಿದ್ದಾರೆ. ಬಹುತೇಕರು ಈ ಸಹವಾಸವೇ ಬೇಡ ಅಂದುಕೊಂಡು ಮನೆ ಸೇರಿದ್ದಾರೆ. ಮರ್ಯಾದಸ್ಥ ಮನೆತನದಿಂದ ಬಂದ ಹೆಣ್ಮಕ್ಕಳು ಈ ಬಗ್ಗೆ ಬಹಿರಂಗವಾಗಿ ವಿರೋಧ ತೋರದಿರುವುದರಿಂದ ಈ ಹೆಣ್ಣುಬಾಕ ಬಚಾವಾಗುತ್ತಿದ್ದಾನೆ.

ತರಬೇತಿ ಮುಗಿದನಂತರ ಸೂಕ್ತ ಸಲಕರಣೆಗಳಿಗಾಗಿ ಹೆಣ್ಮಕ್ಕಳೆಲ್ಲ ಶಿವಪ್ರಸಾದನ ಬಳಿ ಬರಲೇಬೇಕು. ಈತನ ಕಾಮುಕತನ ಅನಾವರಣಗೊಳ್ಳುವುದು ಆವಾಗಲೆ. ಮೊದಮೊದಲು ಅರ್ಹ ಹೆಣ್ಮಕ್ಕಳನ್ನು ಬೇಕೆಂತಲೇ ಮೀಟಿಂಗು, ಅದೂ ಇದೂ ಅಂತ ಏನೇನೋ ಸಬೂಬು ಹೇಳಿ ಸತಾಯಿಸುತ್ತಾನೆ. ಕೊನೆಗೊಂದು ಮುಹೂರ್ತ ಫಿಕ್ಸ್ ಮಾಡಿ ಇವತ್ತು ಸಿಕ್ಕೇ ಸಿಗುತ್ತೇನೆಂದು ಆಶ್ವಾಸನೆ ನೀಡಿ ರಾತ್ರಿ ಎಂಟು ಒಂಭತ್ತರವರೆಗೂ ಕಾಯಿಸುತ್ತಾನೆ. ತದನಂತರ ಪ್ರತ್ಯಕ್ಷವಾಗಿ ಅಸಲಿ ವರಸೆ ಶುರುವಿಟ್ಟುಕೊಳ್ಳುವ ಶಿವಪ್ರಸಾದ್ ಒಬ್ಬೊಬ್ಬರನ್ನೇ ಮಾತಾಡಿಸುತ್ತಾನೆ. 'ನಿಂಗೆ ಒಂದಲ್ಲ ಮೂರು ಹೊಲಿಗೆ ಯಂತ್ರ ಕೊಡ್ತೀನಿ. ಮುಂದೆಯೂ ಸಹಾಯ ಮಾಡ್ತೀನಿ. ಬೇರೆ ಸ್ಕೀಮಲ್ಲೂ ಹಣ ಕೊಡ್ತೀನಿ' ಅಂತೆಲ್ಲ ಬಂಡಲ್ ಬಿಡುತ್ತಾನೆ. ತದನಂತರ ನೇರವಾಗಿ ಮಂಚಕ್ಕೇ ಕರೆದು ಬಿಡುತ್ತಾನೆ. ಒಂದುವೇಳೆ ಆ ಹುಡುಗಿ ಒಪ್ಪಿಕೊಳ್ಳದಿದ್ದರೆ ಬೇರೆ ಯಾರನ್ನಾದರೂ ಕಳಿಸು ಅಂತ ದುಂಬಾಲು ಬೀಳುತ್ತಾನೆ.

ಸ್ವತಂತ್ರವಾಗಿ ಬದುಕುವ ನೂರಾರು ಕನಸುಗಳೊಂದಿಗೆ ತರಬೇತಿ ಪಡೆದ ಅಮಾಯಕ ಹೆಣ್ಮಕ್ಕಳು ಶಿವಪ್ರಸಾದ್‌ನ ಕಾಮುಕತನದಿಂದ ನಿಜಕ್ಕೂ ಕಂಗಾಲಾಗುತ್ತಿದ್ದಾರೆ. ಬಹುತೇಕರು ಈ ಸಹವಾಸವೇ ಬೇಡ ಅಂದುಕೊಂಡು ಮನೆ ಸೇರಿದ್ದಾರೆ. ಮರ್ಯಾದಸ್ಥ ಮನೆತನದಿಂದ ಬಂದ ಹೆಣ್ಮಕ್ಕಳು ಈ ಬಗ್ಗೆ ಬಹಿರಂಗವಾಗಿ ವಿರೋಧ ತೋರದಿರುವುದರಿಂದ ಈ ಹೆಣ್ಣುಬಾಕ ಬಚಾವಾಗುತ್ತಿದ್ದಾನೆ.



ಸೊಗಡು ಶಿವಣ್ಣ

ಇದಿಷ್ಟೇ ಅಲ್ಲದೆ ಸದರಿ ಯೋಜನೆಯನ್ನು ಶಿವಪ್ರಸಾದ್ ಪೂರ್ತಿಯಾಗಿ ಹಳ್ಳ ಹಿಡಿಸಿದ್ದಾನೆ. ಇವರ ತರಬೇತಿಗೆಂದು ಶಿಕ್ಷಕರನ್ನು ಕರೆಸಲಾಗುತ್ತದಲ್ಲ? ಅವರಿಗೆ ಕೊಡುವ ಗೌರವಧನದಲ್ಲೂ ನುಂಗಿ ನೊಣೆಯುತ್ತಿದ್ದಾನೆ. ಫಲಾನುಭವಿಗಳ ಪಟ್ಟಿಯಲ್ಲಿ ಬೇನಾಮಿ ಹೆಸರು ಸೇರಿಸಿ ಅದಕ್ಕೆ ಸಿಗುವ ಯಂತ್ರಗಳನ್ನು ಮಾರಿ ಹಣ ಹೊಡೆಯುವುದು ಈತನ ಮಾಮೂಲಿ ದಂಧೆ. ಈ ಯೋಜನೆಯಡಿ ಶಾಲಾಕಾಲೇಜುಗಳಿಗೆ ನೀಡಲಾಗುವ ಕುರ್ಚಿ-ಮೇಜುಗಳಲ್ಲೂ ಈತ ಖರ್ಚಿಗೆ ಕಾಸು ಹುಟ್ಟಿಸಿಕೊಳ್ಳುತ್ತಾನೆ.

ಸದ್ಯ ಈತನ ವಂಚನೆಯ ವಿರುದ್ಧ ಯೋಜನೆಯ ಫಲಾನುಭವಿ ಯುವಕರು ತಿರುಗಿಬಿದ್ದಿದ್ದಾರೆ. ಇವನ ಸ್ತ್ರೀಪೀಡಕ ವೃತ್ತಾಂತ ಸ್ತ್ರೀಶಕ್ತಿ ಸಂಘಗಳಿಗೂ ಗೊತ್ತಾಗಿ ಹಲ್ಲು ಮಸೆಯುತ್ತಿವೆ. ಆದರೆ ಶಿವಪ್ರಸಾದ್ ಎಂಥಾ ನಾಚಿಕೆಗೆಟ್ಟವನೆಂದರೆ 'ನಾನೀಗ್ಲೆ ಎಂಟು ಮನೆ ಕಟ್ಟಿದೀನಿ. ಕೆಲಸ ಹೋದ್ರೂ ಚಿಂತೆಯಿಲ್ಲ' ಅಂತ ಉಡಾಫೆತನ ಪ್ರದರ್ಶಿಸುತ್ತಿದ್ದಾನೆ. ಇನ್ನು ನಗರಸಭೆ ಅಧ್ಯಕ್ಷೆ ಯಶೋಧ, ಉಪಾಧ್ಯಕ್ಷ ಅಸ್ಲಂ ಬಾಷನಿಗೆ ಈತ ಕೇರ್ ಮಾಡುತ್ತಿಲ್ಲ. ಹಾಗೊಂದು ವೇಳೆ ಯಾರಾದರೂ ತಿರುಗಿಬಿದ್ದರೆ ಸೊಗಡು ಶಿವಣ್ಣ ಹಾಗೂ ಪರಮೇಶ್ವರ್ ಹೆಸರು ಹೇಳಿ ಬೆದರಿಕೆ ಹಾಕುತ್ತಾನೆ.

ಸದ್ಯ ತುಮಕೂರು ನಗರಸಭೆಗೆ ಐಎಎಸ್ ಅಧಿಕಾರಿ ಅನುರಾಗ್ ತಿವಾರಿ ಆಯುಕ್ತರಾಗಿ ಬಂದಿದ್ದಾರೆ. ಈ ಹಿಂದೆ ಕೊರಟಗೆರೆಯಲ್ಲಿ ಎಸಿಯಾಗಿದ್ದ ಇವರಿಗೆ ದಕ್ಷ ಅಧಿಕಾರಿಯೆಂಬ ಹೆಸರಿದೆ. ಇವರಾದರೂ ಭ್ರಷ್ಟ-ಸ್ತ್ರೀಪೀಡಕ ಶಿವಪ್ರಸಾದನ ಬುಡಕ್ಕೊದ್ದು ಓಡಿಸುತ್ತಾರೆಂಬ ನಿರೀಕ್ಷೆಯಿದೆ. ಅದು ಹುಸಿಯಾಗದಿರಲಿ.

• ವರದಿಗಾರ



ಹುಬ್ಬಳ್ಳಿ-ಧಾರವಾಡ ಫಲಭರಿತ ಭೂಮಿ ಮೇಲೆ ಹುಧಾ ವಕ್ರದೃಷ್ಟಿ!


ಅಭಿವೃದ್ಧಿಯ ಹೆಸರಲ್ಲಿ ರೈತರ ಮೇಲೆ ಸವಾರಿ ಹೊರಟಿರುವ ಸರ್ಕಾರ ರಾಜ್ಯದ ಕೃಷಿ ಜಮೀನುಗಳನ್ನೆಲ್ಲ ಆಪೋಷನ ತೆಗೆದುಕೊಳ್ಳುತ್ತಿದೆ. ಗದಗ ಜಿಲ್ಲೆಯಲ್ಲಿ ಇಂಥಾ ದುಷ್ಕೃತ್ಯದ ವಿರುದ್ಧ ನಿರ್ಣಾಯಕ ಹೋರಾಟ ನಡೆಯುತ್ತಿದೆ. ಈ ಹೊತ್ತಿನಲ್ಲೇ ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ ಈ ಭಾಗದ ರೈತರ ನೆಲೆ ಕಿತ್ತುಕೊಳ್ಳಲು ಹವಣಿಸುತ್ತಿದೆ.

ಧಾರವಾಡ ಸುತ್ತಮುತ್ತ ಕೈಗಾರಿಕೆಯ ಹೆಸರಲ್ಲಿ 3631 ಎಕರೆ ಭೂಮಿ ಹೊಡೆಯಲು ಹುಧಾ ಸಜ್ಜಾಗಿ ನಿಂತಿದೆ. ಎಕರೆಗೆ 26 ಲಕ್ಷಗಳ ಆಮಿಷ ಮುಂದೊಡ್ಡಿರುವ ಅಧಿಕಾರಿಗಳು ಈಗಾಗಲೇ ಮುಮ್ಮಿಗಟ್ಟಿ-ಕೆಳಗೇರಿಗಳಲ್ಲಿ ಸುಮಾರು 953 ಎಕರೆ ಕೃಷಿ ಭೂಮಿ ಕಬ್ಜಾ ಮಾಡಿಕೊಂಡಿದ್ದಾರೆ. ಇನ್ನುಳಿದಂತೆ ಶಿಂಗನಹಳ್ಳಿ, ಕಮ್ಮಾನಾಯಕನ ಕೊಪ್ಪ, ಸುತಗಟ್ಟಿ, ಇಟಗಟ್ಟಿ, ಚಿಕ್ಕಮಲ್ಲಿಗೆವಾಡ ಮುಂತಾದೆಡೆಗಳಲ್ಲಿಯೂ ಕೃಷಿ ಭೂಮಿ ಕಿತ್ತುಕೊಳ್ಳುವ ಕೆಲಸ ಅಂತಿಮ ಹಂತ ತಲುಪಿದೆ.

ಸದ್ಯ ಹುಬ್ಬಳ್ಳಿಯ ಗಬ್ಬೂರ ಗ್ರಾಮದ ರೈತರನ್ನು ಹುಧಾ ಪಳಗಿಸಿಕೊಳ್ಳಲು ಶತಪ್ರಯತ್ನ ನಡೆಸುತ್ತಿದೆ. ಪೂನಾ-ಬೆಂಗಳೂರು ಹೆದ್ದಾರಿಗೆ ಹೊಂದಿಕೊಂಡಂತಿರುವ 241 ಎಕರೆ 7 ಗುಂಟೆ ಭೂಮಿ ಕಬಳಿಸುವುದು ಅದರ ಉದ್ದೇಶ. ಇದು ಹೇಳಿಕೇಳಿ ವರ್ಷಕ್ಕೆ ಎರಡ್ಮೂರು ಬೆಳೆ ಬೆಳೆಯುವ ಸಮೃದ್ಧ ಭೂಮಿ. ಇದನ್ನು ಹೊಡೆದುಕೊಳ್ಳಲು ಹುಧಾ ಗುಜರಾತ್ ಮಾದರಿ ಎಂಬ ಹೊಸಾ ವಂಚನಾಸ್ತ್ರ ಹಿಡಿದು ಸಜ್ಜಾಗಿದೆ.

ಸಮೃದ್ಧ ಭೂಮಿ ಲಪಟಾಯಿಸುವ ಸದರಿ ಸ್ಕೀಮಿಗೆ ರೈತರೊಂದಿಗಿನ ಸಹಭಾಗಿತ್ವದಲ್ಲಿ ನಡೆಯುವ ಯೋಜನೆಯೆಂಬ ಬಣ್ಣ ತೀಡಲಾಗಿದೆ. ರೈತರಿಂದ ವಶಪಡಿಸಿಕೊಂಡ ಭೂಮಿಯಲ್ಲಿ ವಸತಿ ಯೋಜನೆ ಅನುಷ್ಠಾನಗೊಳ್ಳುತ್ತದಲ್ಲಾ? ಇಂಥ ಅಭಿವೃದ್ಧಿಪಡಿಸಿದ ಭೂಮಿಯಲ್ಲಿ ಶೇ. 40 ರಷ್ಟನ್ನು ಮಾಲೀಕ ರೈತರಿಗೆ ಬಿಟ್ಟುಕೊಡುವುದು ಈ ಯೋಜನೆಯ ತರ್ಕ. ಇದಕ್ಕೆ ಗುಜರಾತ್ ಮಾದರಿ ಅಂತ ಹೆಸರಿಡಲಾಗಿದೆ. 1 ಎಕರೆ ಜಮೀನಲ್ಲಿ ರಸ್ತೆ, ಉದ್ಯಾನ ಅಂತೆಲ್ಲಾ ಆದ ಬಳಿಕ 20 ಗುಂಟೆ ವಸತಿ ನಿವೇಶನ ಲಭ್ಯವಾಗುತ್ತದೆ. ಕಡೆಗೆ ರೈತರ ಪಾಲಿಗೆ ಸಿಗುವುದು 8 ಗುಂಟೆ ನಿವೇಶನ ಮಾತ್ರ. ಇದನ್ನು ಮಾರಿಕೊಂಡು ರೈತರು ಆದಾಯ ಪಡೆದುಕೊಳ್ಳಬಹುದು!

ಆದರೆ ಈ ಭಾಗದ ಪಿ.ಬಿ. ರಸ್ತೆಗೆ ಹೊಂದಿಕೊಂಡಂತಿರುವ ಭೂಮಿಯನ್ನು ರಿಯಲ್ ಎಸ್ಟೇಟ್ ಕುಳಗಳು 25 ರಿಂದ 50 ಲಕ್ಷಕ್ಕೆ ಖರೀದಿಸುತ್ತಿದ್ದಾರೆ. ರೈತರು ತಮ್ಮ ಭೂಮಿಯನ್ನು ಹುಧಾಕ್ಕೆ ಬಿಟ್ಟುಕೊಟ್ಟು ತಮ್ಮ ಪಾಲಿಗೆ ಬರುವ 8 ಗುಂಟೆ ಬಿಕರಿ ಮಾಡಿದರೆ ಹತ್ತು ಲಕ್ಷ ಹುಟ್ಟುವುದೂ ಕಷ್ಟ. ಇದಲ್ಲದೆ ಭೂಸ್ವಾಧೀನ ಪಡಿಸಿಕೊಂಡ ಭೂಮಿಯನ್ನು ಅಭಿವೃದ್ಧಿಪಡಿಸಲು ಕನಿಷ್ಠ 3 ರಿಂದ 5 ವರ್ಷ ಹಿಡಿಯುತ್ತದೆ. ತೀರಾ ಒಂದೆರಡೆಕರೆಯನ್ನೇ ನಂಬಿಕೊಂಡು ಅದನ್ನೇ ಹುಧಾಕ್ಕೆ ಬಿಟ್ಟುಕೊಟ್ಟ ರೈತರು ಅಷ್ಟು ವರ್ಷ ಏನು ತಿನ್ನಬೇಕು? ಇದು ಪ್ರಮುಖ ಪ್ರಶ್ನೆ.



ಇದಕ್ಕಿಂತ ರಿಯಲ್ ಎಸ್ಟೇಟ್ ದಂಧೆಗೆ ಭೂಮಿ ಅಡ ಇಡುವುದೇ ಸೂಕ್ತವೆಂಬುದು ಬಹುತೇಕ ರೈತರ ಅಭಿಪ್ರಾಯ.

ಹಾಗೆ ನೋಡಿದರೆ ಈ ಭಾಗದ ರೈತರು ಇರುವ ತುಂಡು ಭೂಮಿಗಳಲ್ಲೇ ಬೆಳೆ ತೆಗೆಯುತ್ತ ಚೆಂದಗೆ ಬದುಕುತ್ತಿದ್ದಾರೆ. ಒಂದಷ್ಟು ಹೊಸ ವಿಧಿವಿಧಾನ ಅನುಸರಿಸಿದರಂತೂ ಇವರ ಬದುಕು ಬಂಗಾರವಾಗುವುದರಲ್ಲಿ ಸಂಶಯವಿಲ್ಲ. ಈಗಾಗಲೇ ರೈತರು ವರ್ಷಕ್ಕೆ ಏನಿಲ್ಲವೆಂದರೂ ಎರಡ್ಮೂರು ಬೆಳೆತೆಗೆದು ಒಂದಷ್ಟು ಕಾಸು ಕಾಣುತ್ತಿದ್ದಾರೆ. ಮುಂಗಾರಿನಲ್ಲಿ ಗೋವಿನ ಜೋಳ, ಸೋಯಾಬೀನ್ ಬೆಳೆದರೆ ಹಿಂಗಾರಿನಲ್ಲಿ ಬಿಳಿಜೋಳ ಬೆಳೆಯಲಾಗುತ್ತದೆ. ಜನವರಿಯಿಂದ ಮಾರ್ಚ್ ತಿಂಗಳ ಮಧ್ಯಂತರ ಅವಧಿಯಲ್ಲಿ ಸೌತೆ, ಬದನೆ, ಕೊತ್ತಂಬರಿ, ಮೆಂತ್ಯಸೊಪ್ಪಿನಂತಹ ತರಕಾರಿ ಬೆಳೆಯುತ್ತಾರೆ. ಇದೆಲ್ಲದರಿಂದ ರೈತರ ಬದುಕಲ್ಲಿ ನೆಮ್ಮದಿಯಿದೆ. ಆದುದರಿಂದ ಯಾರೊಬ್ಬರೂ ಭೂಮಿ ಬಿಟ್ಟುಕೊಡಲು ಒಪ್ಪುತ್ತಿಲ್ಲ.

ಆದರೆ ಹುಧಾ ಮಾತ್ರ ಗಬ್ಬೂರ ಗ್ರಾಮದ 62 ರೈತ ಕುಟುಂಬದ 241 ಎಕರೆ ಜಮೀನು ಸ್ವಾಧೀನಕ್ಕೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿದೆ. ಇದರಲ್ಲಿ 5 ಸಾವಿರ ವಸತಿ ನಿವೇಶನ ನೀಡುವುದಾಗಿಯೂ ಬಡಾಯಿ ಕೊಚ್ಚಿಕೊಂಡಿದೆ.

ಫಲವತ್ತಾದ ಭೂಮಿ ಕಸಿದುಕೊಂಡು ರೈತರನ್ನು ಬೀದಿಗೆ ಬಿಡಲು ಹುಧಾ ಅಧ್ಯಕ್ಷ ದತ್ತಾ ಡೋರ್ಲೆ ಅತ್ಯುತ್ಸಾಹ ತೋರುತ್ತಿದ್ದಾನೆ. ಈಗಾಗಲೇ ಅಷ್ಟೂ ರೈತರನ್ನು ಕಚೇರಿಗೆ ಕರೆಸಿಕೊಂಡಿದ್ದಾನೆ. 'ಗುಜರಾತ್ ಮಾದರಿಯಲ್ಲಿ ಬೇಕಾದರೂ ಭೂಮಿ ಕೊಡಿ, ಎಕರೆಗೆ 10 ರಿಂದ 15 ಲಕ್ಷ ಇಸಕೊಂಡು ಬೇಕಾದ್ರೂ ಕೊಡಿ ಇಲ್ಲದಿದ್ರೆ ಹ್ಯಾಗೆ ತಗಬೇಕೂಂತ ಗೊತ್ತು' ಅಂತ ತಣ್ಣಗೆ ಬೆದರಿಕೆಯನ್ನೂ ಹಾಕಿದ್ದಾನೆ.

ಡೋರ್ಲೆಯ ದಗಲ್ಬಾಜಿಗೆ ಎದುರಲ್ಲೇ ಸೆಡ್ಡು ಹೊಡೆದು ಹೊರಬಂದಿರುವ ರೈತರು ಹೋರಾಟವೊಂದಕ್ಕೆ ಅಣಿಗೊಳ್ಳುತ್ತಿದ್ದಾರೆ. ಸರ್ಕಾರದ ದುರ್ಬುದ್ಧಿಗೆ ಪಾಠ ಕಲಿಸಲು ಅದು ಅನಿವಾರ್ಯ.

• ಹುಬ್ಬಳ್ಳಿಯಾಂವ



ಹುಬ್ಬಳ್ಳಿ: ಪಾತಕಿಗಳ ಪ್ರೀತಿಯ ಮಾಮ ಡಿ.ಸಿ.ಪಿ ಚಾಂದಿರಾಮ್ ಸಿಂಗ್ ಎತ್ತಂಗಡಿ!

ಚಾಂದಿರಾಂ ಈಗಿರುವ ಕಮೀಷನರ್ ರಾಮಚಂದ್ರರಾವ್ ಜೊತೆ ಹೊಂದಾಣಿಕೆಯಾಗಿರಲಿಲ್ಲ ಎನ್ನುವುದಕ್ಕಿಂತ ಇವನ ಪಾಲಿಸಿಗಳು ಸರಿಕಂಡಿರಲಿಲ್ಲ. ಹೀಗಾಗೇ ಅವರು ಬಂದಾಗಿನಿಂದ ಇವನನ್ನು ಹೊರಗೇ ಇಟ್ಟಿದ್ದರು. ಈ ಪರಿಸ್ಥಿತಿಯನ್ನೇ ಕಾಯುತ್ತಾ ಕುಳಿತಿದ್ದ ಮಂತ್ರಿ ಶೆಟ್ಟರ್‌ನ ತಮ್ಮ ಪ್ರದೀಪ ಶೆಟ್ಟರ್ ಚಾಂದಿರಾಂನ ಎತ್ತಂಗಡಿಗೆ ಎಲ್ಲ ಕಡೆಯಿಂದ ಗಾಳ ಬೀಸಿಬಿಟ್ಟ. ಆಸಲಿಗೆ ಶೆಟ್ಟಿಯ ಬಣಜಿಗ ಬುದ್ಧಿಯೂ ಇವರಲ್ಲಿ ಅಡಗಿತ್ತು.

• ಹುರಳಿಕುಪ್ಪಿ ವಿನಯ

ಅವಳಿ ನಗರದ ಪಾತಕಿಗಳು ಅಕ್ಷರಶಃ ತಲೆ ಮೇಲೆ ಹೊತ್ತು ಕುಳಿತಿದ್ದಾರೆ. ಅಕ್ರಮ ದಂಧೆಕೋರರೆಲ್ಲಾ ದಿಗ್ಭ್ರಾಂತರಾಗಿದ್ದಾರೆ. ಯಾಕೆ ಅಂತೀರಾ? ಇವರ ದಂಧೆಗಳಿಗೆಲ್ಲಾ ರಕ್ಷಣೆ ಕೊಟ್ಟು ಪೋಷಿಸುತ್ತಿದ್ದ ಪ್ರೀತಿಯ ಪೊಲೀಸ್ ಮಾಮ ಡಿ.ಸಿ.ಪಿ. ಚಾಂದಿರಾಮ್ ಸಿಂಗ್ ಎತ್ತಂಗಡಿಯಾಗಿ ಹುಬ್ಬಳ್ಳಿಯಿಂದ ಹೊರ ನಡೆದಿದ್ದಾನೆ. ಜನಸಾಮಾನ್ಯರು ಮಾತ್ರ ಶನಿಯೊಂದನ್ನ ಹೆಗಲಿಳಿಸಿಕೊಂಡಂತೆ ನಿರಾಳರಾಗಿದ್ದಾರೆ.

ಹುಬ್ಬಳ್ಳಿಯಲ್ಲೇ ಎ.ಸಿ.ಪಿಯಾಗಿ ಮುಂದೆ ಡಿ.ಸಿ.ಪಿಯಾಗಿ ಬರೋಬ್ಬರಿ ಎರಡು ಅವಧಿ ಒಂದೇ ಸೀಟಿನಲ್ಲಿ ತಳವೂರಿದ್ದ ಚಾಂದಿರಾಮ್ ಸಿಂಗ್ ಸಾಹೇಬರು ಇಲ್ಲಿಯ ಎಲ್ಲಾ ಹರಾಮಿ ದಂಧೆಗಳಿಂದ ಭರ್ತಿ ಆಮದನಿ ತಿಂದು ದುಂಡಗಾಗಿದ್ದರು. ಅದೆಷ್ಟು ಕೋಟಿ ಹಣ ಇವರ ತಿಜೋರಿ ಸೇರಿದೆಯೆಂಬುದು ಇವರ ಖಾಸಾ ಸಿ.ಆರ್ ಪೇದೆಯೊಬ್ಬನನ್ನು ಬಿಟ್ಟರೆ ಬೇರಾರಿಗೂ ಗೊತ್ತಿರಲಿಕ್ಕಿಲ್ಲ. ಇವರಿಬ್ಬರ ನಡುವೆ ಅಂಥಾ ನಂಟಿತ್ತು. ಇಂಥಾ ಸಮೃದ್ಧ ಸ್ಥಳ ಕಾಯಮ್ಮಾಗಿಸಿಕೊಳ್ಳಲು ಪ್ರತಿ ಆರು ತಿಂಗಳಿಗೊಮ್ಮೆ ಲಕ್ಷ ಲಕ್ಷ ಪೇಮೆಂಟ್ ಪಡೆಯುತ್ತಿದ್ದ ಚಡ್ಡಿ ಮಂತ್ರಿಗಳೇ ಈಗ ಈತನನ್ನು ಎತ್ತಂಗಡಿ ಮಾಡಿಸಿದ್ದಾರೆ.

ಮೂರು ತಿಂಗಳ ಹಿಂದೆ ನಡೆದ ವರ್ಲ್ಡ್‌ಕಪ್ ಕ್ರಿಕೆಟ್ ಸಂದರ್ಭದಲ್ಲಿ ಅವಳಿನಗರ ಸೇರಿದಂತೆ ಆಸುಪಾಸಿನ ಜಿಲ್ಲೆಗಳಲ್ಲಿ ನಡೆದ ಲಕ್ಷಾಂತರ ರೂಪಾಯಿ ಬೆಟ್ಟಿಂಗ್ ದಂಧೆಯಲ್ಲಿ ಕೋಟಿ ಕೋಟಿ ಹಣವನ್ನ ಮುಲಾಜಿಲ್ಲದೆ ಉಂಡಿದ್ದ ಚಾಂದಿರಾಮ್ ಸಿಂಗ್ ಮೇಲಧಿಕಾರಿಗಳ ಪಾಲನ್ನೂ ಸಹ ತಾನೇ ಗುಳುಂ ಮಾಡಿದ್ದ. ಇದೆಲ್ಲಾ ವ್ಯವಹಾರ ಜೋರಾಗಿ ನಡೆದಿರುವ ಸುದ್ದಿ ತಿಳಿದುಕೊಂಡ ಕಮಿಷನರ್ ಕೆ. ರಾಮಚಂದ್ರರಾವ್ ಚಾಂದಿರಾಮ್‌ಗೆ ಅಮರಿಕೊಂಡಿದ್ದರು. ಕೊನೆಗೂ ಇವನ ಮೇಲೊಂದು ಫುಲ್ ಡಿಟೇಲ್ ರಿಪೋರ್ಟ್ ತಯಾರು ಮಾಡಿ ಡಿ.ಜಿ.ಪಿ.ಗೆ ಮುಟ್ಟಿಸಿದ್ದಲ್ಲದೆ, ಎತ್ತಂಗಡಿ ಮಾಡಿಸುವಲ್ಲೂ ಯಶಸ್ವಿಯಾಗಿದ್ದಾರೆ. ಈ ವರ್ಗಾವಣೆಯ ಹಿಂದೆ ಮಂತ್ರಿ ಜಗದೀಶ ಶೆಟ್ಟರ, ಬಸೂ ಬೊಮ್ಮಾಯಿ, ಶೆಟ್ಟರನ ತಮ್ಮ ಪ್ರದೀಪ ಕೈಯಾಡಿಸಿದ್ದು ಸ್ಪಷ್ಟ.

ಪೇಮೆಂಟ್‌ನಲ್ಲಿ ಫೇಲ್!

ಮೂರು ವರ್ಷದಿಂದ ಇದ್ದ ಜಾಗದಲ್ಲಿಯೇ ಮುಂದುವರೆಯಲು ಕಳೆದ ಲೋಕಸಭೆ ಚುನಾವಣೆ ಸಮಯದಲ್ಲಿ ಮಂತ್ರಿ-ಸಂಸದರಿಗೆ ಪೇಮೆಂಟ್ ಮಾಡಿದವನು ಚಾಂದಿರಾಮ್ ಸಿಂಗ್. ಪೇಮೆಂಟ್ ಮಾಡಿ ಜಾಗ ಉಳಿಸಿಕೊಳ್ಳುವುದರಲ್ಲಿ ಪಿಹೆಚ್ಡಿ ಮಾಡುವಷ್ಟು ಪಳಗಿರುವ ಈತ ಇತ್ತೀಚಿಗೆ ಅದರಲ್ಲಿ ಫೇಲಾಗಿದ್ದರಿಂದಲೇ ಎತ್ತಂಗಡಿಯಾಗಿದ್ದಾನೆಂಬ ಮಾತು ವ್ಯಾಪಕವಾಗಿದೆ.

ಚಾಂದಿರಾಂ ಈಗಿರುವ ಕಮೀಷನರ್ ರಾಮಚಂದ್ರರಾವ್ ಜೊತೆ ಹೊಂದಾಣಿಕೆಯಾಗಿರಲಿಲ್ಲ ಎನ್ನುವುದಕ್ಕಿಂತ ಇವನ ಪಾಲಿಸಿಗಳು ಸರಿಕಂಡಿರಲಿಲ್ಲ. ಹೀಗಾಗೇ ಅವರು ಬಂದಾಗಿನಿಂದ ಇವನನ್ನು ಹೊರಗೇ ಇಟ್ಟಿದ್ದರು. ಈ ಪರಿಸ್ಥಿತಿಯನ್ನೇ ಕಾಯುತ್ತಾ ಕುಳಿತಿದ್ದ ಮಂತ್ರಿ ಶೆಟ್ಟರ್‌ನ ತಮ್ಮ ಪ್ರದೀಪ ಶೆಟ್ಟರ್ ಚಾಂದಿರಾಂನ ಎತ್ತಂಗಡಿಗೆ ಎಲ್ಲ ಕಡೆಯಿಂದ ಗಾಳ ಬೀಸಿಬಿಟ್ಟ. ಆಸಲಿಗೆ ಶೆಟ್ಟಿಯ ಬಣಜಿಗ ಬುದ್ಧಿಯೂ ಇದರಲ್ಲಿ ಅಡಗಿತ್ತು. ಹೀಗಾಗೇ ಚಾಂದಿರಾಂಗೆ ಇಲ್ಲೇ ಮುಂದುವರೆಯಲು 12 ಲಕ್ಷ ಪೇಮೆಂಟು ಸೇರಿದಂತೆ ತಿಂಗಳ ಮಾಮೂಲಿ ದರದಲ್ಲಿ ಭಾರಿ ಹೆಚ್ಚಳದ ಬೇಡಿಕೆಯನ್ನಿಟ್ಟಿದ್ದ. ಶೆಟ್ಟರ್‌ನ ಈ ರೇಟ್‌ಬೋರ್ಡ್ ಕಂಡು ಚಾಂದಿರಾಂ ಅರ್ಧ ದಂಗಾಗಿದ್ದಲ್ಲದೇ, ಸಂಸದ ಫಿನೈಲ್ ಪ್ರಲ್ಹಾದ ಜೋಶಿಗೆ ಏನಾದರೂ ದಾರಿ ತೋರಿಸಿ ಎಂದು ಬೇಡಿಕೊಂಡಿದ್ದಾನಂತೆ. ಅಲ್ಲೇ ಎಡವಟ್ಟಾಗಿದ್ದೆಂಬುದು ಹುಬ್ಬಳ್ಳಿಯ ಖಾಕಿ ಮೂಲಗಳ ಅಂಬೋಣ.

ಜೋಶಿಯ ಮಾತು ಕೇಳಿ ಬಿಜೆಪಿ ನಾಯಕನೊಬ್ಬನ ತಮ್ಮ ಹುಬ್ಬಳ್ಳಿಯ ಕಾಟಾ ಮಾರ್ಕೆಟಿನ ನಂದಕುಮಾರ್ ಎಂಬುವನಿಗೆ ಬರೋಬ್ಬರಿ ಎಂಟು ಲಕ್ಷ ಪೇಮೆಂಟು ಮಾಡಿದ ಚಾಂದಿರಾಂ ಸಿಂಗ್ ಬೆಂಗಳೂರಿನ ಅವರ ಮನೆ ಬಾಗಿಲು ಕೂಡ ಕಾಯ್ದಿದ್ದಾನೆ. ಇತ್ತ ಪ್ರತಾಪನ್ ಎನ್ನುವ ಇನ್ನೊಂದು ಕ್ಯಾಂಡಿಡೇಟನ್ನು ರೆಡಿ ಮಾಡಿಕೊಂಡ ಶೆಟ್ಟಿ ಯಡ್ಡಿ ಮಗ ರಾಘವೇಂದ್ರನ ಮೂಲಕ ಪೋಸ್ಟಿಂಗ್ ಮಾಡಿಸಿದ್ದಲ್ಲದೆ, ಚಾಂದಿರಾಂನನ್ನು ಬೆಂಗಳೂರು ಟಾಸ್ಕ್ ಫೋರ್ಸ್‌ಗೆ ಅಟ್ಟಿದ್ದಾನೆ. ರೊಕ್ಕಕ್ಕೆ ರೊಕ್ಕನೂ ಹೋತು, ಭರ್ತಿ ಆಮದನಿ ತರುವ ಕುರ್ಚಿನೂ ಕೈಬಿಟ್ಟಿತು ಎಂಬಂತಾಯ್ತು ಚಾಂದಿರಾಂ ಸಾಹೇಬರ ಪರಿಸ್ಥಿತಿ.

ದಂಧೆಯ ಬಿಲದಲಿ ಬಿಕ್ಕಳಿಕೆ

ಹೆತ್ತವರು ದೂರಾದರೂ ಇಷ್ಟು ಸಂಕಟ ಪಡುತ್ತಾರೋ ಇಲ್ಲವೋ ಗೊತ್ತಿಲ್ಲ, ಆದರೆ ತಮ್ಮ ದಂಧೆಗಳ ಗಾಡ್‌ಫಾದರ್ ಡಿ.ಸಿ.ಪಿ ಚಾಂದಿರಾಂ ಸಿಂಗ್ ಎತ್ತಂಗಡಿಯಾಗಿದ್ದಕ್ಕೆ ಇಲ್ಲಿಯ ಪಿಕ್‌ಪಾಕೆಟರ್‌ನಿಂದ ಹಿಡಿದು ನಕಲಿ ಮದ್ಯದ ಕುಳಗಳು ಸೇರಿದಂತೆ ಬಹುತೇಕ ಎಲ್ಲ ಅಕ್ರಮ ದಂಧೆಕೋರರು ಗೊಳೋ ಅಂತ ಅಳುತ್ತಿದ್ದಾರೆ!


ದಿನವೊಂದಕ್ಕೆ ಕೋಟಿ ಕ್ರಾಸ್ ಮಾಡುವ ಮಟ್ಕಾ ದಂಧೆಯ ಪರಶುರಾಮ ಮೇತ್ರಾಣಿ, ಸಂಜೀವ ಕಲಾಲ,



ಶಿವಕುಮಾರ್ | ಔರಾದ್‌ಕರ್ | ರಾಮಚಂದ್ರ ರಾವ್ | ಪ್ರತಾಪನ್

ಮಧುಸಾ ಮೇತ್ರಾಣಿ, ಕಾಳಮ್ಮನ ಅಗಸಿಯ ಖೋಡೆ ಬ್ರದರ್ಸ್, ಕೃಷ್ಣ ಕಾಟ್ವೆ, ವಿಷ್ಣು ಲದ್ವಾನಂತಹವರಿಗೆ ಈಗ ದಿಕ್ಕಿಲ್ಲದಂತಾಗಿದೆ. ಇವರೆಲ್ಲರ ಮನಸ್ಸನ್ನು ಈಗ ಮನೆ ಹಿರಿಯನನ್ನು ಕಳೆದುಕೊಂಡಂಥಾ ಸೂತಕ ಆವರಿಸಿದೆ. ಕ್ರಿಕೆಟ್ ಬುಕ್ಕಿಗಳಾದ ವೀರು ಕಟಾರೆ, ಶಂಭು ಹಬೀಬ, ಬ್ರದರ್ಸ್, ಸ್ಟೇಷನ್ ರೋಡಿನ ಇರಕಲ್, ಅರ್ಜುನ್ ಶಿರಾಳಕರ್, ದೊಂದುಸಾ ಇರಕಲ್, ಸೀನು ಪವಾರ, ಸಂತೋಷ ಬಾಕಳೆ, ಮ್ಯಾದರ ಓಣಿಯ ಸಂಜು, ಮಂಜು, ಶಂಕರ ಮೆಹರ್ವಾಡೆ, ಗಂಗಾಧರ ಮಿಸ್ಕಿನ್, ಸಂಜೂ ಕಾಟ್ವೆ ಸಂತೋಷ್ ದೇವಗನ್, ಹಳೆಹುಬ್ಬಳ್ಳಿಯ ಅಲ್ತಾಫ್, ರಫೀಕ್ ತರಹದವರು ಇಂದು ಹತ್ತಾರು ಲಕ್ಷಗಳಲ್ಲಿ ತೂಗುತ್ತಿರುವುದಕ್ಕೆ ಚಾಂದಿರಾಂ ಸಿಂಗ್‌ರ ಆಶೀರ್ವಾದವೊಂದೇ ಕಾರಣ. ಸ್ಪಿರಿಟ್ ದಂಧೆಯ ಸದಾನಂದ ಬದ್ದಿ ಕಾಸಿ ಕೋಡೆ, ಜಯರಾಮ ಪವಾರ, ಶ್ರೀಕಾಂತ ಬದ್ದಿ, ಕರೀಮ ಮುಂತಾದವರು ಹೇಳಿದ ಜಾಗಗೆ ಸರ್ರಂತ ಸ್ಪಿರಿಟ್ ತಂದು ಇಳಿಸುತ್ತಾರೆ. ಇವರ ಈ ಧೈರ್ಯದ ಹಿಂದಿದ್ದದ್ದು ಚಾಂದಿರಾಮನ ನೆರಳು.

ನಕಲಿ ಸೀಮೆಎಣ್ಣೆ ದಂಧೆಯ ಮೂಲಕ ಇವತ್ತು



ಪ್ರಹ್ಲಾದ್ ಜೋಷಿ | ಪ್ರದೀಪ್ ಶೆಟ್ಟರ್ | ಬೊಮ್ಮಾಯಿ | ಜಗದೀಶ್ ಶೆಟ್ಟರ್

ಕೋಟಿಯಲ್ಲಿ ತೂಗುತ್ತಿರುವ ನವನಗರದ ಸಂಜ್ಯಾ-ಮಂಜ್ಯಾ, ಅಕ್ರಮ ಅಕ್ಕಿ ಸಾಗಾಣಿಕೆಯಲ್ಲಿ ಪಳಗಿರುವ ರಮೇಶ ಬಾಫಣಾ ಮುನವಳ್ಳಿ ಮತ್ತು ಬತ್ತಿ ಫ್ಯಾಮಿಲಿಗಳು ಇವತ್ತು ಪುರಸೊತ್ತಿಲ್ಲದೆ ದುಡಿಯುತ್ತಿವೆ. ಇವರ ಶಿಷ್ಯರುಗಳಾದ ಹರ್ಲಾಪುರ ಮಂಜ್ಯಾ, ಕೋಳೂರಸಾಬಗಳಿಗೆ 'ಅದ್ಯಾವ ಖಾಕಿ ನಮ್ಮ ದಂಧೆಗೆ ಅಡ್ಡ ಬರುತ್ತೊ ನೋಡತೇವಿ' ಎಂಬಂಥ ಹುಂಬತನವಿದೆ. ಇದಲ್ಲದೆ ರೇಸ್ ಬೆಟ್ಟಿಂಗ್, ಹವಾಲಾ ದಂಧೆ, ಮೀಟರ್ ಬಡ್ಡಿಗಳಂತಹ ಧೋ ನಂಬರ್ ದಂಧೆಗಳು ಆತಂಕವಿಲ್ಲದೆ ಅವಳಿನಗರಗಳಲ್ಲಿ ಚಾಲ್ತಿಯಲ್ಲಿವೆ.

ಯಾರು ಯಾವ ದಂಧೆ ಮಾಡುತ್ತಾರೆಂಬುದು ಪೊಲೀಸ್ ರೆಕಾರ್ಡ್‌ಗಳಲ್ಲಿ ಪಕ್ಕಾ ಇದೆ. ಅಷ್ಟೆಲ್ಲಾ ಇದ್ದರೂ ಕಳೆದ ಮೂರು ವರ್ಷದಿಂದ ಇವರನ್ನ ಯಾರೂ ಮುಟ್ಟಲಿಲ್ಲ. ಯಾಕೆಂದರೆ ಇವರೆಲ್ಲಾ ಚಾಂದಿರಾಮನನ್ನು ದುಂಡಗಾಗಿಸಿದ್ದರು. ಆ ಋಣದ ಭಾರವೇ ಇವರನ್ನೆಲ್ಲಾ ಕಾಪಾಡಿದ್ದು. ಚಾಂದಿರಾಮನಿಂದಲೆ ಹಣ ಹೇಗೆ ತೆಗೆಯಬೇಕು ಅನ್ನೋದನ್ನ ಕಲಿಯಬೇಕಷ್ಟೆ. ಬಹುತೇಕ ಎಲ್ಲ ಅಕ್ರಮ ಕುಳಗಳೊಂದಿಗೆ ಸಂಪರ್ಕವಿಟ್ಟುಕೊಂಡಿರುವ ಸಿಂಗ್ ಇಲ್ಲಿಯವರೆಗೆ ಕೋಟಿ ಕೋಟಿ ನುಂಗಿ ಹಾಕಿದ್ದಾನೆ.

ಹಾದಿ ತಪ್ಪಿಸುವಲ್ಲಿ ನಿಸ್ಸೀಮ

ಈತ ಹುಬ್ಬಳ್ಳಿಗೆ ಬಂದ ಬಹುತೇಕ ಎಲ್ಲ ಕಮೀಷನರ್‌ಗಳನ್ನು ಹಾದಿ ತಪ್ಪಿಸಿ ತನ್ನ ಕೆಲಸ ಸಲೀಸು ಮಾಡಿಕೊಳ್ಳುವಷ್ಟು ನಿಸ್ಸೀಮನಾಗಿದ್ದ. ಅವಳಿ ನಗರದ ಬಗ್ಗೆ ಐಡಿಯಾ ಇಲ್ಲದೆ, ಕಮೀಷನರಾಗಿ ಬಂದು ಕೂತಿದ್ದ ಶಿವಕುಮಾರ್ ಇವನ ಮೊದಲ ಬಲಿ. ಬರೋಬ್ಬರಿ 7 ತಿಂಗಳು ಇವರಿಗೆ ಬಂದು ಸೇರಬೇಕಾಗಿದ್ದ ಅಷ್ಟೂ ಮಾಮೂಲಿಯನ್ನ ತಾನೇ ಗುಳುಂ ಮಾಡಿ ಏನೂ ತಿಳಿಯದಂತೆ ನಟಿಸಿದ. ವಿಷಯ ಗೊತ್ತಾಗಿ ಮಾಹಿತಿ ಸಂಗ್ರಹಿಸಿದ ಶಿವಕುಮಾರ್ ಬೆಚ್ಚಿ ಬಿದ್ದಿದ್ದಲ್ಲದೆ, ಇವನನ್ನು ದೂರವಿಟ್ಟಿದ್ದರು. ಇದರಿಂದ ಕಂಗಾಲಾದ ಚಾಂದಿರಾಮ ಸಿಂಗ್ ಕಮೀಷನರ್ ಶಿವಕುಮಾರ ಅವರ ಪರ್ಸ್‌ನಲ್ ವಿಚಾರಗಳನ್ನು ಆಫ್ ದಿ ರೆಕಾರ್ಡ್ ಎಂದು ತನಗೆ ಬೇಕಾದ ಪತ್ರಕರ್ತರಿಗೆ ಸುದ್ದಿ ಮುಟ್ಟಿಸಿ ತನ್ನ ಬಾಯಿ ಚಟ ತೀರಿಸಿಕೊಳ್ಳುತ್ತಿದ್ದ. ನಂತರ ಬಂದ ರಾಘವೇಂದ್ರ ಔರಾದಕರ್ ಇವನ ದಂಧೆಗೆ ರೋಸಿ ಹೋಗಿ ಸ್ವಲ್ಪೇ ದಿನದಲ್ಲಿ ಖುದ್ದು ತಾವೇ ವರ್ಗಾವಣೆ ಮಾಡಿಸಿಕೊಂಡರು. ಈಗಿನ ಕಮೀಷನರ್ ರಾಮಚಂದ್ರರಾವ್ ಬರುವುದಕ್ಕೆ ಮೊದಲು ಎರಡು ತಿಂಗಳು ಅವಳಿ ನಗರದ ಕಮೀಷನರ್‌ಗಿರಿ ನಡೆಸಿದ ಚಾಂದಿರಾಂ ಸಾಹೇಬರು ಫುಲ್ ಪವರ್‌ನಲ್ಲಿ ಅದೆಷ್ಟು ಪೀಕಿದರೋ. ಭಗವಂತನೇ ಬಲ್ಲ.

ಬಂದವನೂ ಭಟ್ಟಂಗಿ

ಚಾಂದಿರಾಂ ಸಿಂಗ್‌ನ ಜಾಗೆಗೆ ಈಗ ಡಿ.ಸಿ.ಪಿಯಾಗಿ ವಕ್ಕರಿಸಿರುವ ಎಸ್.ಎಮ್. ಪ್ರತಾಪನ್ ಕೂಡಾ ಸಾಚಾ ಏನಲ್ಲ. ಒಂದು ಅಂದಾಜಿನ ಪ್ರಕಾರ ಅವಳಿ ನಗರದಲ್ಲೇ ಪ್ರತಾಪನಿಗೆ 9 ಮನೆಗಳಿವೆಯಂತೆ. ಆಗಿರುವ ಮದುವೆಗೆ ಸರಿಯಾದ ಲೆಕ್ಕ ಇನ್ನೂ ಯಾರಿಗೂ ಸಿಕ್ಕಿಲ್ಲವಂತೆ. ಕಳೆದ ಅವಧಿಯಿಂದ ಈ ಜಾಗೆಗೆ ಬರಲೆಂದೇ ಪ್ರದೀಪ ಶೆಟ್ಟರಿಗೆ ಸದಾ ಸಲಾಮು ಹೊಡೆಯುತ್ತಿದ್ದ ಪ್ರತಾಪನ್ ಕೊನೆಗೂ ಅವನಿಂದಲೇ ಜಾಗ ದಕ್ಕಿಸಿಕೊಂಡಿದ್ದಾರೆ. ಮೂರು ವರ್ಷದಿಂದ ಕೆಪಿಟಿಸಿಎಲ್‌ನಲ್ಲಿ ಎಸ್‌ಪಿಯಾಗಿ ಆಮದನಿ ಇಲ್ಲದೆ ಕೈ ಬಾಯಿ ಕೆರೆಯುತ್ತಾ ಕುಳಿತಿದ್ದ ಸಾಹೇಬರು ಈಗ ಉಳಿದಿರುವ ಹದಿನಾರು ತಿಂಗಳ ಸರ್ವೀಸ್‌ನಲ್ಲಿ ಅದೇನು ಟಾರ್ಗೆಟ್ ಇಟ್ಟುಕೊಂಡಿದ್ದಾರೋ ಗೊತ್ತಿಲ್ಲ.

ಗೋಕುಲ್ ರೋಡ್ ಠಾಣೆಯ ಪಂಪನ ಗೌಡ, ಕಸಬಾ ಪೇಟೆಯ ಕೆ.ಡಿ.ಪುಟ್ಟಯ್ಯ, ಹಳೆ ಹುಬ್ಬಳ್ಳಿಯ ಸಚಿನ್ ಚಲುವಾದಿ, ಗಂಟಿಕೇರಿ ಠಾಣೆಯ ಸಂಗಪ್ಪ ತುಂಬಗಿ, ಕಮರಿಪೇಟೆಯ ಅಮರೇಶ್ ಬಾರಿಕೇರ, ನಾರ್ತ್ ಟ್ರಾಫಿಕ್‌ನ ಲಕ್ಷ್ಮಣ ಶಿರಕೋಳರೆಲ್ಲಾ ಹೊಸಬರೇ. ಇವರನ್ನೆಲ್ಲಾ ಪ್ರತಾಪನ್ ಯಾವ ರೀತಿ ಸಂಭಾಳಿಸುತ್ತಾರೋ ಕಾದುನೋಡಬೇಕಿದೆ.

ಇದೆಲ್ಲ ಏನೇ ಇದ್ದರೂ ಚಾಂದಿರಾಮನಿಂದ ರೋಸತ್ತಿರುವ ಜನ ಹೊಸದಾಗಿ ಬಂದ ಪ್ರತಾಪನ್ ಬಗ್ಗೆ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಅದು ಎಷ್ಟರಮಟ್ಟಿಗೆ ನಿಜವಾಗುತ್ತದೆಂಬುದಕ್ಕೆ ಕಾಲವೇ ಉತ್ತರಿಸಬೇಕು.

ದಂಡಕಾರಣ್ಯದಲ್ಲಿ ನಕ್ಸಲ್ ಜನಪದ

ಪುಸ್ತಕ ವಿಮರ್ಶೆ

ಎಡಪಂಥೀಯ ಚಳವಳಿಗಾರರಾಗಿರುವ ಸತ್ನಾಮ್, 2002ರಲ್ಲಿ ಛತೀಸ್‌ಗಢ ರಾಜ್ಯದ ಬಸ್ತಾರ್ ಜಿಲ್ಲೆಯ ದಟ್ಟಾರಣ್ಯಗಳಲ್ಲಿರುವ ಮಾವೋವಾದಿ ಗೆರಿಲ್ಲಾ ವಲಯದೊಳಗೆ ಎರಡು ತಿಂಗಳ ಕಾಲ ಸುತ್ತಿ ಪಡೆದ ಅನುಭವವನ್ನು ಈ ಪುಸ್ತಕದಲ್ಲಿ ನಿರೂಪಿಸಿದ್ದಾರೆ. ಪ್ರಸ್ತುತ ಕನ್ನಡ ಅನುವಾದದಲ್ಲಿ ಈ ಪುಸ್ತಕವನ್ನು 'ಪ್ರವಾಸ ಕಥನ' ಎಂದು ಗುರುತಿಸಲಾಗಿದೆ. ತಾವು ಸುತ್ತಲಿರುವ ಪ್ರದೇಶ ಹಾಗು ಅಲ್ಲಿನ ಜನರ ಬದುಕು ತಮ್ಮ ಬುದ್ಧಿ-ಭಾವಗಳ ಹೊರಗೆ ಎಗ್ಗಿಲ್ಲದೆ ಚೆಲ್ಲಿಕೊಂಡಿರುವ ನಿಶ್ಚಲ ವಸ್ತುವಿಶೇಷ; ಅದರಲ್ಲಿ ತನಗೆ ಬೇಕಾದ್ದನ್ನು ಮಾತ್ರ ಕಣ್ಣಿನ ಕ್ಯಾಮೆರಾದ ಚೌಕಟ್ಟಿನಲ್ಲಿ ಕೂಡಿಸಿ ಮನಃಪಟಲದಲ್ಲಿ ನಿರ್ಭಾವುಕವಾಗಿ ಪಡಿಮೂಡಿಸಿಕೊಳ್ಳಬಲ್ಲೆವು ಎಂಬ ಅಹಂಕಾರದಲ್ಲಿ 'ಟೂರಿಸ್ಟ'ರು ಸುತ್ತುತ್ತಾರೆ. ಬಸ್ತಾರ್ ಕಾಡಿನಲ್ಲಿ ಸತ್ನಾಮ್‌ರ ಸುತ್ತಾಟ ಈ ಬಗೆಯ ಪ್ರವಾಸವಲ್ಲ. ದಶಕಗಳ ಕಾಲ ಎಡಪಂಥೀಯ ಚಳವಳಿಯಲ್ಲಿ ತೊಡಗಿಕೊಂಡಿರುವ ಅವರಿಗೆ ಮಾವೋವಾದಿ ಚಳವಳಿಯ ಬಗ್ಗೆ ಮೆಚ್ಚುಗೆ ಸಹಿತವಾದ ಸಹಮತವಿದೆ. ಕಾಡಿನಲ್ಲಿ ಜೀವಿಸುವ ಆದಿವಾಸಿ ಸಮುದಾಯಗಳ ಬದುಕಿನ ಬವಣೆಗಳೇನು? ಮಾವೋವಾದಿಗಳ ಪ್ರವೇಶ ಆದಿವಾಸಿಗಳ ಬದುಕಿನಲ್ಲಿ ಯಾವ ಬದಲಾವಣೆಗಳನ್ನು ತಂದಿದೆ? ಲಾಗಾಯ್ತಿನ ಬದುಕು




ಹಾಗು ಮಾವೋವಾದಿಗಳ ಉದ್ದೇಶಿತ ಮಧ್ಯಪ್ರವೇಶದ ಹೆಣಿಗೆಯಲ್ಲಿ ಕ್ರಾಂತಿಕಾರಿ ರಾಜಕೀಯದ ಹೊಸ ವ್ಯಾಖ್ಯಾನವೇನಾದರೂ ಕಟ್ಟಿಕೊಂಡಿದೆಯೋ? ಎಂದು ವಸ್ತುನಿಷ್ಠವಾಗಿ ಅರಿಯುವ ಹಾಗು ಆ ಅನುಭವವನ್ನು, ಅಧಿಕಾರಸ್ಥರು ರೂಢಿಸಿರುವ ಅಭಿಪ್ರಾಯವನ್ನೇ ನಿಜವೆಂದು ನಂಬಿರುವ ನಾಡಿನ ಜನರಿಗೆ ತಿಳಿಹೇಳುವ ಸ್ಪಷ್ಟ ಉದ್ದೇಶವನ್ನಿಟ್ಟುಕೊಂಡೆ ಸತ್ನಾಮ್ ಕಾಡಿನ ಯಾತ್ರೆಗೆ ಹೊರಟವರು. ಹಾಗಾಗಿ 'ಜಂಗಲ್‌ನಾಮಾ'ದ ನಿರೂಪಣೆಯಲ್ಲಿ ಮುಚ್ಚುಮರೆ ಇಲ್ಲ. ಪ್ರಸ್ತುತ ಕೃತಿ ರಚನೆಯ ಧ್ಯೇಯವನ್ನು ಸತ್ನಾಮ್ ಹೀಗೆ ವಿವರಿಸುತ್ತಾರೆ:

"ತನ್ನ ಭಾರತೀಯ ಮೂಲವನ್ನು ಕೇವಲ ಹಿಂದೂತ್ವದಲ್ಲಿ ಕಾಣುವ ನೈಪಾಲ್‌ನಂಥ ಬರಹಗಾರರು ತಮ್ಮ ನೊಬೆಲ್ ಪ್ರಶಸ್ತಿಯ ಗುಂಗಿನಲ್ಲಿ ಬಂದು ಈ ಜನರ ಪರಿಸರದ ಬಗ್ಗೆ ಹಾಗು ಅವರ ಚಳವಳಿಯ ಬಗ್ಗೆ ಬರೆಯುವ ಮೊದಲು ಅಥವಾ ಇದನ್ನೇ ಪ್ರಶಸ್ತಿ-ಪುರಸ್ಕಾರಗಳಿಗೆ ಬಂಡವಾಳ ಮಾಡಿಕೊಳ್ಳುವ ಮೊದಲು ನಾನೇ ಈ ಚಳವಳಿಯ ಬಗ್ಗೆ, ಅದರಲ್ಲಿ ಪಾಲ್ಗೊಂಡಿರುವ ಜನರ ಬಗ್ಗೆ, ಅವರ ಸರಳತೆಯ ಬಗ್ಗೆ, ಅವರ ಬದುಕಿನ ಬಗ್ಗೆ, ಅವರ ಆದರ್ಶಗಳ ಬಗ್ಗೆ, ಅವರ ಸಮಸ್ಯೆಗಳ ಬಗ್ಗೆ, ಅವರು ಸಾಧಿಸಿರುವ ಅಮೋಘ ಕೆಲಸಗಳ ಬಗ್ಗೆ ಬರೆದು ಹೊರಜಗತ್ತಿಗೆ ತೋರಿಸಬೇಕೆಂದುಕೊಂಡಿದ್ದೆ. ಆದ್ದರಿಂದಲೇ ಈ ಕಾಡಿನಲ್ಲಿ ನಾನು ಭೇಟಿಯಾದ ಪ್ರತಿಯೊಬ್ಬ ವ್ಯಕ್ತಿಯ ಬಗ್ಗೆ ಸಾಧ್ಯವಾದಷ್ಟೂ ಮಾಹಿತಿಯನ್ನು ಕೇಳಿ ತಿಳಿದುಕೊಳ್ಳುತ್ತಾ ಬಂದಿದ್ದೆ. ...... ಇಲ್ಲಿ ಮಾನವ ಒಡನಾಟ-ವಿಶ್ವಾಸಗಳ ಆಧಾರದ ಮೇಲೆ ತಮ್ಮ ಸಂಸ್ಕೃತಿಯನ್ನು ಕಟ್ಟಿಕೊಂಡಿದ್ದ ಜನರ ನಡುವೆ ನಾನಿದ್ದೆ; ಅವರ 'ಭಾರತೀಯ ಮೂಲ'ದ ಪರಿಕಲ್ಪನೆ ಹಿಂದೂ ಅಥವಾ ಮುಸ್ಲಿಂ ಸಂಕುಚಿತತೆಗಳಾಚೆಗಿತ್ತು." (ಪು. 209-10).

ಸತ್ನಾಮ್ ಇಲ್ಲಿ ನೈಪಾಲ್‌ರ 'ಇಂಡಿಯಾ: ಎ ಮಿಲಿಯನ್ ಮ್ಯುಟಿನಿಸ್ ನವ್' ಪುಸ್ತಕದಲ್ಲಿ ಬರುವ ನಕ್ಸಲೈಟರ ಬಗೆಗಿನ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡಿದ್ದಾರೆ ಎಂದು ಕಾಣುತ್ತದೆ. ನೈಪಾಲ್‌ರ ಪ್ರಕಾರ ನಕ್ಸಲೈಟ್ ಚಳವಳಿ ಬಂಡುಕೋರ ವ್ಯಕ್ತಿಗಳ ಹತಾಶ ಆಕ್ರೋಶದ ವಿಷಾದಮಯ ಪ್ರದರ್ಶನ. ಖ್ಯಾತಿವಂತರಾದ ನೈಪಾಲ್‌ರ ಇಂಥ ನಿಲುವುಗಳನ್ನು ಅಧಿಕಾರಸ್ಥರು ನಕ್ಸಲೈಟರ ವಿರುದ್ಧ ಜನಾಭಿಪ್ರಾಯ ರೂಪಿಸುವುದಕ್ಕೆ ಉಪಯೋಗಿಸಿಕೊಳ್ಳುತ್ತಾರೆ ಎಂಬ ಅರಿವಿನಿಂದ ಸತ್ನಾಮ್ ನಕ್ಸಲೈಟ್ ಚಳವಳಿಯ ಕುರಿತಾಗಿ ಭಿನ್ನವೂ, ಧನಾತ್ಮಕವೂ ಆದ ನಿರೂಪಣೆಗೆ ಮುಂದಾಗಿದ್ದಾರೆ.


ಸತ್ನಾಮ್ ಈ ಕೆಲಸಕ್ಕೆ ಕೈಹಾಕುವ ಹೊತ್ತಿಗೆ ನಕ್ಸಲೈಟ್ ಚಳವಳಿ ಶುರುವಾಗಿ 33 ವರ್ಷಗಳಾಗಿತ್ತು. 1967ರ ನಕ್ಸಲ್‌ಬಾರಿ ಸಶಸ್ತ್ರ ಹೋರಾಟ, ತತ್ಫಲವಾಗಿ ಸಿಪಿಐ (ಎಂಎಲ್) ಪಕ್ಷದ ನಂತರದಲ್ಲಿ ಚಳವಳಿಯು ಅನೇಕ ಏಳು-ಬೀಳುಗಳನ್ನು ಅನುಭವಿಸಿದೆ. ಅಂತೆಯೇ, ಈ 33 ವರ್ಷಗಳ ಅವಧಿಯಲ್ಲಿ ನಕ್ಸಲೈಟ್ ಚಳವಳಿಯ ಚರಿತ್ರೆ ಹಾಗು ಸಾಧಕ-ಬಾಧಕಗಳ ಬಗ್ಗೆ ಘನವೆತ್ತ ಲೇಖಕರು 50ಕ್ಕೂ ಹೆಚ್ಚಿನ ಪುಸ್ತಕ-ಲೇಖನಗಳನ್ನು ಬರೆದಿದ್ದಾರೆ. ಅದರಲ್ಲೂ, ಆಂಧ್ರಪ್ರದೇಶದಲ್ಲಿ ಕಾರ್ಯಶೀಲವಾಗಿರುವ ನಕ್ಸಲೈಟ್ ಸಂಘಟನೆಗಳ ಜನಪರ ರಾಜಕೀಯಕ್ಕೆ ಬೆಂಬಲವನ್ನೂ, ಅವರ ಅತಿರೇಕಗಳ ಬಗ್ಗೆ ವಿಮರ್ಶಾತ್ಮಕ ಭಿನ್ನಮತವನ್ನೂ ಪ್ರಕಟಿಸುತ್ತ ಬಂದಿರುವ ಕೆ.ಬಾಲಗೋಪಾಲ್, ಕನ್ನಬೀರನ್, ಹರ್‌ಗೋಪಾಲ್, ಕಲ್ಪನ ಕನ್ನಬೀರನ್‌ರಂತಹ ಧೀಮಂತ ಮಾನವಹಕ್ಕು ಹೋರಾಟಗಾರರ ಬರಹಗಳ ಭಂಡಾರ ಪ್ರಮುಖವಾದದ್ದು. ಈ ಸಮೀಕ್ಷೆಯನ್ನು ಕೊಟ್ಟಿರುವುದಕ್ಕೆ ಕಾರಣ ಇಷ್ಟೇ: 'ಜಂಗಲ್‌ನಾಮಾ' ಕಾಲಿ ಹಾಗು ಬೌದ್ಧಿಕ ಜ್ಞಾನಗಳ ಪ್ರಭಾವದಿಂದ ತಪ್ಪಿಸಿಕೊಂಡು, ಕೋರ ಕಾಗದದ ಮೇಲೆ ಗೆರಿಲಾ ವಲಯದ ಆದಿವಾಸಿಗಳ ಬದುಕಿನ ಗತಿಯನ್ನು ಪ್ರತ್ಯಕ್ಷ ಅನುಭವದ ಆಧಾರದ ಮೇಲೆ ನಿರೂಪಿಸುವ ಪ್ರಯತ್ನವಾಗಿದೆ. ಈ ತೆರನಾದ ನಿರೂಪಣೆಯ ಆಯ್ಕೆ ಪುಸ್ತಕದ ಶಕ್ತಿಯಾಗಿರುವ ಹಾಗೆಯೇ ಅದರ ಮಿತಿಯೂ ಆಗಿಬಿಟ್ಟಿದೆ.



'ಆದಿವಾಸಿಗಳು ಪ್ರಭುತ್ವ ಹಾಗು ಮಾವೋವಾದಿಗಳ ನಡುವೆ ನಡೆಯುತ್ತಿರುವ ಹಿಂಸಾತ್ಮಕ ಸಂಘರ್ಷದ ಅಡಕತ್ತಿನಲ್ಲಿ ಸಿಕ್ಕಿ ನರಳುತ್ತಿದ್ದಾರೆ' ಎಂಬುದು ಭಾರತದ ಬೌದ್ಧಿಕವಲಯದಲ್ಲಿ ಬಹಳ ಸಾಮಾನ್ಯವಾಗಿರುವ ದೇಶಾವರಿ ನುಡಿಗಟ್ಟು (ಕ್ಲೀಷೆ). ಸಮಾಜ ಶಾಸ್ತ್ರಜ್ಞೆ ನಂದಿನಿ ಸುಂದರ್ ಅವರ ಅಂದಾಜಿನ ಪ್ರಕಾರ, ದಂಡಕಾರಣ್ಯ ಪ್ರದೇಶದಲ್ಲಿ ಮಾವೋವಾದಿ ಗೆರಿಲಾ ಪಡೆ, ರೈತಸಂಘ ಹಾಗು ಮಹಿಳಾ ಸಂಘಗಳ ಸದಸ್ಯರು ಹಾಗು ಸಕ್ರಿಯ ಬೆಂಬಲಿಗರ ಒಟ್ಟು ಸಂಖ್ಯೆ 6 ಲಕ್ಷ; ಇವರಲ್ಲಿ ಶೇ.99 ಸ್ಥಳೀಯ ಆದಿವಾಸಿಗಳು. ಸತ್ನಾಮ್ ಬೌದ್ಧಿಕ ವಲಯದ ಈ ದೇಶಾವರಿ ವರಸೆಯನ್ನು ಮುರಿಯುತ್ತಾರೆ; ತಮ್ಮ ಪ್ರವಾಸದುದ್ದಕ್ಕೂ ಮಾತನಾಡಿಸಿದ ಜನರನ್ನು-'ಮಾವೋವಾದಿಗಳು' ಮತ್ತು 'ಆದಿವಾಸಿಗಳು' ಎಂದು ಪ್ರತ್ಯೇಕಿಸುವ ಜರೂರೇ ಇಲ್ಲ ಎನ್ನುವುದನ್ನು ಸತ್ನಾಮರ ನಿರೂಪಣೆ ಅನಾಯಾಸವಾಗಿ ತೋರಿಸಿಬಿಡುತ್ತದೆ. ದಂಡಕಾರಣ್ಯದ ಆದಿವಾಸಿಗಳಲ್ಲೇ ಜನ ಹಲವಾರು ಅರ್ಥಗಳಲ್ಲಿ 'ಮಾವೋವಾದಿ'ಗಳಾಗಿದ್ದಾರೆ. ಬಹುಪಾಲು ಜನ, ಬಂಡವಾಳ ಶಾಹಿ-ದಲ್ಲಾಳಿ-ಪ್ರಭುತ್ವಗಳ ಅಧಿಕಾರಸ್ಥ ಮೈತ್ರಿಕೂಟ ಲಾಗಾಯ್ತಿನಿಂದ ತಮ್ಮ ಬದುಕಿಗೆ ಆಸರೆಯಾದ ಕಾಡಿನ ಸಂಪನ್ಮೂಲಗಳನ್ನು ತಮ್ಮಿಂದ ಕಿತ್ತುಕೊಂಡು, ದುಗ್ಗಾಣಿ ಬೆಲೆಗೆ ಸ್ವದೇಶಿ-ವಿದೇಶಿ ಆಸ್ತಿವಂತರಿಗೆ ಕಪ್ಪವಾಗಿ ಕೊಡುತ್ತಿದ್ದಾರೆ ಎಂಬುದನ್ನು ತಿಳಿದುಕೊಂಡಿದ್ದಾರೆ; ತಮ್ಮ ಬದುಕಿನ ಹಕ್ಕನ್ನು ಉಳಿಸಿಕೊಳ್ಳಲು ಈ ಲೂಟಿಯ ವಿರುದ್ಧ ಸಂಘಟಿತವಾಗಿ ಹೋರಾಡಬೇಕು ಎಂಬ ಜಾಗೃತಿಯನ್ನು ಪಡೆಯುವ ಮೂಲಕ ಅವರು 'ಮಾವೋವಾದಿ'ಗಳಾಗಿದ್ದಾರೆ. ಮತ್ತೆ

ಮಲದ ಗುಂಡಿಯಲ್ಲಿ ಇನ್ನಿಬ್ಬರು ಸತ್ತರು, ನಮ್ಮ ಮನುಷ್ಯತ್ವ ಯಾವಾಗಲೋ ಸತ್ತಿದೆ...

ಕೆಲವರ ಬದುಕೂ ಸುದ್ದಿಯಾಗುವುದಿಲ್ಲ, ಸಾವೂ ಸುದ್ದಿಯಾಗುವುದಿಲ್ಲ. ಜಗತ್ತು ಹಾಗೇ ಮುಂದುವರೆಯುತ್ತದೆ. ಸಾವು ಹೇಗೆ ಬೇಕಾದರೂ ಬರಬಹುದು. ಆದರೆ ಮಲದ ಗುಂಡಿಯಲ್ಲಿ ಉಸಿರುಗಟ್ಟಿ ಹುಳಗಳಂತೆ ಸಾಯುವ ಪಾಡು ಯಾರಿಗೂ ಬರಬಾರದು. ಶನಿವಾರ (ಜುಲೈ 9ರಂದು) ಸಂಜೆ 4-30ರ ಸುಮಾರಿಗೆ ಹಾಸನ ಜಿಲ್ಲೆ ಆಲೂರು ತಾಲ್ಲೂಕು ಕೆಂಚಮ್ಮನಹೊಸಕೋಟೆ ಬಳಿಯ ಕಾಫಿ ಎಸ್ಟೇಟ್‌ನ ಮಲದ ಗುಂಡಿಯಲ್ಲಿ ಇಬ್ಬರು ಯುವಕರು ನೀಗಿ ಹೋದರು. ಯಥಾಪ್ರಕಾರ ನಮ್ಮ ಮಾಧ್ಯಮಗಳಿಗೆ ಇದು ಬ್ರೇಕಿಂಗ್ ನ್ಯೂಸ್ ಅಲ್ಲ, ಜೀವ ಅಮೂಲ್ಯ, ಆದರೆ ಎಲ್ಲರದೂ ಅಲ್ಲ, ಇಂಥವರ ಸಾವು ಸಹ ಸುದ್ದಿಯಾಗುವುದಿಲ್ಲ.



ಆ ಭಾಗದ ಜನರಿಗೆ ಇಂಥ ಸಾವುಗಳು ಹೊಸದೇನೂ ಅಲ್ಲ, ಇತ್ತೀಚಿನ ವರ್ಷಗಳಲ್ಲಿ ಚನ್ನರಾಯಪಟ್ಟಣ, ಅರಸೀಕೆರೆ, ಕೆ.ಆರ್. ನಗರ ತಾಲ್ಲೂಕುಗಳಲ್ಲಿ ಹೀಗೇ ಮಲದ ಗುಂಡಿಯಲ್ಲಿ ವಿಷಕಾರಿ ಅನಿಲ ಕುಡಿದು ಹಲವರು ಸತ್ತು ಹೋದರು. ಯಾರೂ ಸುದ್ದಿಯಾಗಲಿಲ್ಲ, ಶನಿವಾರ ಸತ್ತವರೂ ಅಷ್ಟೆ. ಅವರ ಸಾವು ನಮ್ಮ ಸಮಾಜವನ್ನು ಅಲುಗಾಡಿಸಲೇ ಇಲ್ಲ, ಅವರೇನೋ ಸತ್ತರು ನಿಜ, ಆದರೆ ನಮ್ಮೊಳಗಿನ ಮನುಷ್ಯತ್ವ ಸತ್ತು ಯಾವ ಕಾಲವಾಯಿತು?

ಸತ್ತ ಇಬ್ಬರೂ ಸಕಲೇಶಪುರದವರು. ಒಬ್ಬ ಮಹದೇವ, ಮತ್ತೊಬ್ಬ ಅರ್ಜುನ. ದಿನಗೂಲಿ ಗುತ್ತಿಗೆ ಆಧಾರದಲ್ಲಿ ಸಕಲೇಶಪುರ ಪುರಸಭೆಯಲ್ಲಿ ಕೆಲಸ ಮಾಡುತ್ತಿದ್ದವರು. ಈ ಇಬ್ಬರೂ ಮತ್ತು ಮಂಜ, ಮುರುಗ ಎಂಬ ಇನ್ನಿಬ್ಬರು ಯಕಶ್ಚಿತ್ ಮೂರೂವರೆ ಸಾವಿರ ರೂಪಾಯಿಗಳ ಒಂದು ಕೆಲಸ ಒಪ್ಪಿಕೊಂಡಿದ್ದರು. ಈ ನಾಲ್ವರೂ ಸೋದರ ಸಂಬಂಧಿಗಳೇ. ಕೆಂಚಮ್ಮನ ಹೊಸಕೋಟೆ ಬಳಿಯ ಪೂರ್ಣರಾಮ ಎಸ್ಟೇಟ್‌ನಲ್ಲಿ ಮಲದ ಪಿಟ್ ತುಂಬಿಕೊಂಡಿತ್ತು, ಅದನ್ನು ಖಾಲಿ ಮಾಡಿಕೊಡಲು ನಾಲ್ವರು ಹೊರಟಿದ್ದರು. ಶನಿವಾರ ಮಧ್ಯಾಹ್ನ 12-30ರ ಸುಮಾರಿಗೆ ಅವರು ಅಲ್ಲಿಗೆ ತಲುಪಿದ್ದರು.


ಕಾಫಿ ಎಸ್ಟೇಟ್‌ಗಳಲ್ಲಿ ಲೈನ್ ಮನೆಗಳೆಂದು ಕರೆಯಲಾಗುವ ವಸತಿ ವ್ಯವಸ್ಥೆಯೊಂದು ಇರುತ್ತದೆ. ಐದೋ, ಹತ್ತೋ ಪುಟ್ಟಪುಟ್ಟ ಕೊಠಡಿಗಳ ಸಾಲು ಮನೆಗಳನ್ನು ನಿರ್ಮಿಸಲಾಗಿರುತ್ತದೆ. ಈ ಮನೆಗಳಲ್ಲಿ ತೋಟ ಕಾರ್ಮಿಕರು ಸಂಸಾರ ಸಮೇತ ವಾಸ ಮಾಡುತ್ತಾರೆ. ಇಂಥ ಲೈನ್ ಮನೆಗಳಿಗಾಗಿ ಒಂದು ಪಿಟ್ ನಿರ್ಮಿಸಲಾಗಿತ್ತು, ಈ ತೋಟದ ಲೈನ್ ಮನೆಗಳಲ್ಲಿ ಕೆಲವು ತಿಂಗಳುಗಳಿಂದ ಯಾರೂ ವಾಸವಾಗಿರಲಿಲ್ಲ, ಎಸ್ಟೇಟ್ ಮಾಲೀಕರು ಹೊಸದಾಗಿ ಒಂದಷ್ಟು ತೋಟ ಕೂಲಿಗಳನ್ನು ಕರೆಸಿಕೊಂಡಿದ್ದರು. ಆದರೆ ಈ ಮನೆಗಳ ಟಾಯ್ಲೆಟ್‌ಗಳು ಕಟ್ಟಿಕೊಂಡಿದ್ದವು. ಗುಂಡಿ ತುಂಬಿರಬಹುದು ಎಂದು ಭಾವಿಸಿದ ಎಸ್ಟೇಟ್ ಮಾಲೀಕರು ಸಕಲೇಶಪುರದಿಂದ ಮಹದೇವ ಮತ್ತು ತಂಡವನ್ನು ಕರೆಸಿಕೊಂಡಿದ್ದರು.

ಪಿಟ್‌ನ ಮೇಲೆ ಸುಮಾರು ಎರಡೂವರೆ ಅಡಿಗಳಷ್ಟು ಮಣ್ಣು ತುಂಬಿಕೊಂಡಿತ್ತು, ಮಹದೇವ ಮತ್ತು ಸಂಗಡಿಗರು ಆ ಮಣ್ಣನ್ನು ತೆಗೆದು ಪಿಟ್‌ನ ಕಲ್ಲನ್ನು ಸರಿಸುವಷ್ಟರಲ್ಲಿ ಹೈರಾಣಾಗಿ ಹೋಗಿದ್ದರು. ಪಿಟ್ ಕ್ಲೀನ್ ಮಾಡುವವರು ಕಡ್ಡಾಯವಾಗಿ ಕುಡಿದಿರುತ್ತಾರೆ. ಕುಡಿಯದ ಹೊರತು ಅವರು ಅಸಾಧ್ಯ ವಾಸನೆಯನ್ನು ಸಹಿಸಿಕೊಳ್ಳಲಾರರು. ವರ್ಷಾನುವರ್ಷಗಳ ಕೊಳೆತ ಮಲದ ದುರ್ವಾಸನೆಗೇ ಯಾರಾದರೂ ಮೂರ್ಛೆ ಹೋಗಿಬಿಡುತ್ತಾರೆ. ಹೀಗಾಗಿ ಕುಡಿದೇ ಕೆಲಸ ಮಾಡುವುದು ನಡೆದುಬಂದ ಸಂಪ್ರದಾಯ.

ಪಿಟ್ ತೆರೆದಾಗ ಅವರು ಗಮನಿಸಿದ್ದೇನೆಂದರೆ ಅದು ಎಸ್ಟೇಟ್ ಮಾಲೀಕರು ಭಾವಿಸಿದಂತೆ ಭರ್ತಿಯಾಗಿರಲಿಲ್ಲ, ಕೇವಲ ಮೂರು ಅಡಿಯಷ್ಟು ಮಾತ್ರ ಮಲ ಶೇಖರಣೆಯಾಗಿತ್ತು, ಬಹುಶಃ ಲೈನ್ ಮನೆಗಳಿಂದ ಮಲ ಹೊರ ಹೋಗಲು ಅಳವಡಿಸಿದ್ದ ಪೈಪ್‌ಗಳು ಬ್ಲಾಕ್ ಆಗಿರಬೇಕು. ಹೀಗಾಗಿ ಗುಂಡಿ ತುಂಬಿರಬಹುದು ಎಂದು ಎಸ್ಟೇಟ್ ಮಾಲೀಕರು ಅಂದುಕೊಂಡಿರಬಹುದು. ಹೇಗೂ ಬಂದಾಗಿದೆ, ಇರುವಷ್ಟು ಮಲವನ್ನು ಖಾಲಿ ಮಾಡಲು ಮಹದೇವ ಮತ್ತು ತಂಡ ಹೊರಟಿದೆ.

ಚಪ್ಪಡಿ ಕಲ್ಲು ಸರಿಸಿ ಪಿಟ್‌ನ ಮೇಲ್ಭಾಗದ ದ್ವಾರವನ್ನು ತೆರೆದ ನಂತರ ಕನಿಷ್ಠ ಒಂದು ದಿನವಾದರೂ ಹಾಗೇ ಬಿಡಬೇಕಿತ್ತು, ಯಾಕೆಂದರೆ ಶೇಖರಣೆಯಾದ ಮಲದಿಂದ ವಿಷಕಾರಿ ಅನಿಲಗಳು ಉತ್ಪತ್ತಿಯಾಗಿ ಅದು ಗುಂಡಿಯಲ್ಲಿ ಆವರಿಸಿಕೊಂಡಿರುತ್ತದೆ. ಪೂರ್ಣ ತುಂಬಿದ ಗುಂಡಿಗಳಾದರೆ ಈ ಅಪಾಯ ಕಡಿಮೆ, ಆದರೆ ಅರ್ಧಂಬರ್ಧ ತುಂಬಿದ ಗುಂಡಿಗಳು ಅಪಾಯಕಾರಿ.

ಹಿಂದೆ ಈ ಕೆಲಸ ಮಾಡುತ್ತಿದ್ದವರು ಒಂದು ದೀಪವನ್ನು ಗುಂಡಿಯಲ್ಲಿ ಇಳಿಬಿಟ್ಟು ಪರೀಕ್ಷಿಸುತ್ತಿದ್ದರು. ಹೀಗೆ ದೀಪವನ್ನು ಕೆಳಗೆ ಬಿಟ್ಟಾಗ ಗುಂಡಿಯಲ್ಲಿ ತುಂಬಿದ ಮೀಥೇನ್ ಮತ್ತಿತರ ಅನಿಲಗಳು ಭಗ್ಗನೆ ಉರಿಯುತ್ತಿದ್ದವು. ಹೀಗೆ ಬೆಂಕಿ ಕಾಣಿಸಿಕೊಂಡರೆ ಗುಂಡಿಯಲ್ಲಿ ಇಳಿಯಲು ಅದು ಸಕಾಲ ವಲ್ಲ ಎಂಬುದು ಅವರಿಗೆ ಗೊತ್ತಾಗುತ್ತಿತ್ತು. ಒಂದು ವೇಳೆ ಇಳಿ ಬಿಟ್ಟ ದೀಪವು ಆರಿಹೋದರೂ ಗುಂಡಿ ಯಲ್ಲಿ ಇಳಿಯುವಂತಿರಲಿಲ್ಲ, ಯಾಕೆಂದರೆ ಒಳಗೆ ಆಮ್ಲಜನಕವೇ ಇಲ್ಲ ಎಂಬುದು ಅವರಿಗೆ ಗೊತ್ತಾಗುತ್ತಿತ್ತು. (ಬಾವಿಗಳನ್ನು ಶುದ್ಧ ಮಾಡುವಾಗಲೂ ಕೆಲವೆಡೇ ಇದೇ ಕ್ರಮ ಅನುಸರಿಸಲಾಗುತ್ತದೆ.)


ಮಹದೇವ

ಕುಡಿದಿದ್ದ ಮಹದೇವ ಮತ್ತು ತಂಡ ಅದೇನು ಯೋಚನೆ ಮಾಡಿತೋ? ಹೇಗೂ ಇರುವುದು ಮೂರು ಅಡಿಯಷ್ಟು ಕೊಳಕು. ಬೇಗ ಬೇಗ ತೆಗೆದು ನಿಗದಿತ ಸ್ಥಳದಲ್ಲಿ ಖಾಲಿ ಮಾಡಿ, ಕಾಸು ಪಡೆದು ಹೋಗಿಬಿಡೋಣ ಎಂದುಕೊಂಡರೇನೋ? ಏಣಿಯೊಂದನ್ನು ಗುಂಡಿಯೊಳಗೆ ನಿಲ್ಲಿಸಲಾಗಿದೆ. ಮೊದಲು ಮಹದೇವ ಗುಂಡಿಯಲ್ಲಿ ಇಳಿದಿದ್ದಾನೆ. ಇಳಿದ ತಕ್ಷಣವೇ ಭಯಾನಕ ಅನಿಲ ಅವನನ್ನು ನುಂಗಿಹಾಕಿದೆ. ಅವನು ಅಲ್ಲೇ ವಿಲವಿಲ ಒದ್ದಾಡಿ ಪ್ರಾಣ ಬಿಟ್ಟಿದ್ದಾನೆ. ಅವನನ್ನು ಬದುಕಿಸಲು ಮೇಲೆ ನಿಂತಿದ್ದ ಅರ್ಜುನನೂ ಇಳಿದಿದ್ದಾನೆ. ಅವನೂ ಸಹ ವಿಷಕಾರಿ ಅನಿಲವನ್ನು ಸೇವಿಸಿ ಮಲದ ಮೇಲೆ ಅಂಗಾತ ಮಲಗಿ ಸತ್ತು ಬಿದ್ದಿದ್ದಾನೆ. ಮೇಲೆ ಇದ್ದ ಮಂಜ ಮತ್ತು ಮುರುಗನಿಗೆ ಅನಾಹುತದ ಅರಿವಾಗಿದೆ. ತಾವೂ ಇಳಿದರೆ ತಮ್ಮ ಸಾವೂ ಖಚಿತ ಎಂಬುದು ಅವರಿಗೆ ಸ್ಪಷ್ಟವಾಗಿ ಗೊತ್ತಾಗಿದೆ. ಬಾಯಿ ಬಡಿದುಕೊಳ್ಳುವ ಬದಲಾಗಿ ಅವರಿಗೆ ಮಾಡಲು ಇನ್ನೇನೂ ಉಳಿದಿರಲಿಲ್ಲ.

ಮಹದೇವನಿಗೆ ಇನ್ನೂ ಇಪ್ಪತ್ತೈದು ವರ್ಷ. ಮೂವರು ಮಕ್ಕಳಿದ್ದಾರೆ. ಇಬ್ಬರು ಗಂಡು, ಒಬ್ಬ ಹೆಣ್ಣುಮಗಳು. ಅರ್ಜುನನಿಗೆ ಇನ್ನೂ ಮದುವೆಯಾಗಿಲ್ಲ, ಬೆಳೆದು ನಿಂತ ತಂಗಿಯಿದ್ದಾರೆ. ಇಬ್ಬರ ದುರಂತವೆಂದರೆ ಇಬ್ಬರಿಗೂ ತಂದೆಯಿಲ್ಲ, ಅವರಿಬ್ಬರ ತಂದೆಯರು ಅಣ್ಣತಮ್ಮಂದಿರು. ಒಬ್ಬ ಅಪಘಾತಕ್ಕೆ ಸಿಕ್ಕಿ ಸತ್ತಿದ್ದರೆ, ಮತ್ತೊಬ್ಬ ಇದ್ದಕ್ಕಿದ್ದಂತೆ ರಸ್ತೆಯಲ್ಲೇ ಕುಸಿದು ಬಿದ್ದು ಸತ್ತು ಹೋಗಿದ್ದರು. ತಂದೆಯಿಲ್ಲದ ತಬ್ಬಲಿ ಮಕ್ಕಳಿಬ್ಬರೂ ಇಡೀ ಸಂಸಾರದ ನೊಗ ಹೊತ್ತು ದುಡಿಯುತ್ತಿದ್ದರು. ಈಗ ಇಬ್ಬರೂ ಸತ್ತಿದ್ದಾರೆ, ಇಬ್ಬರ ಕುಟುಂಬವೂ ಬೀದಿಗೆ ಬಂದಿದೆ.

ಈ ದುರ್ಘಟನೆಯ ನಂತರ ಎಲ್ಲ ಮಾಮೂಲಿ ಪ್ರಹಸನಗಳು ನಡೆದಿವೆ. ಸ್ಥಳೀಯ ನಾಯಕರು ಸೇರಿದ್ದಾರೆ. ಇಬ್ಬರ ಕುಟುಂಬಕ್ಕೂ ಎಸ್ಟೇಟ್ ಮಾಲೀಕರಿಂದ ಒಂದಷ್ಟು ಪರಿಹಾರ ಕೊಡಿಸುವ ರಾಜಿಪಂಚಾಯ್ತಿ ನಡೆದಿದೆ. ಇದರ ಫಲಶ್ರುತಿಯಾಗಿ ಪಿಟ್ ಕ್ಲೀನ್ ಮಾಡಲು ಬಂದವರು ಕಾಲು ಜಾರಿ ಬಿದ್ದು ಸತ್ತರೆಂಬ ಹೊಂದಾಣಿಕೆಯ ತೀರ್ಮಾನದ ಸುದ್ದಿಗೆ ಎಲ್ಲರೂ ಬದ್ಧರಾಗಿದ್ದಾರೆ. ಎರಡೂ ಕುಟುಂಬಗಳ ಹಿತದೃಷ್ಟಿಯಿಂದ ಮೃತರ ಸಂಬಂಧಿಗಳಿಗೆ ಈ ಒಪ್ಪಂದ ಅಗತ್ಯವಾಗಿತ್ತೇನೋ?

ಭಾನುವಾರ ಮಧ್ಯಾಹ್ನದ ಹೊತ್ತಿಗೆ ಪೋಸ್ಟ್‌ಮಾರ್ಟಂ ನಡೆದು, ನಂತರ ಸಂಬಂಧಿಕರು, ಗೆಳೆಯರ ರೋದನದ ನಡುವೆ ಇಬ್ಬರ ಅಂತ್ಯಕ್ರಿಯೆಯೂ ನಡೆದಿದೆ. ದಿನಗಟ್ಟಲೆ ಅಳುತ್ತಾ ಕೂರಲು ಅವರ ಬಳಿ ಸಮಯವೂ ಇಲ್ಲ, ಅವತ್ತಿನ ಕೂಳನ್ನು ಅವತ್ತೇ ದುಡಿದು ತಿನ್ನುವವರಿಗೆ ಸತ್ತವರಿಗಾಗಿ ಅಳುವ ಸಮಯವಾದರೂ ಎಲ್ಲಿರುತ್ತದೆ?

ಸರ್ಕಾರ ಎಷ್ಟೇ ಸುಳ್ಳು ಅಫಿಡೆವಿಟ್‌ಗಳನ್ನು ಕೊಟ್ಟರೂ ಮಲ ಹೊರುವ ವ್ಯವಸ್ಥೆ ಇಡೀ ರಾಜ್ಯದಲ್ಲಿ ನಡೆಯುತ್ತಲೇ ಇದೆ. ಅಂತಾರಾಷ್ಟ್ರೀಯ ನಗರಿ ಬೆಂಗಳೂರಿನ ಹೊರವಲಯದಲ್ಲೇ ಇನ್ನೂ ಪಿಟ್ ವ್ಯವಸ್ಥೆ ಇದೆ. ಪಿಟ್ ವ್ಯವಸ್ಥೆ ಇದ್ದ

ು, ಬಡತನ, ರೋಗರುಜಿನಗಳಿಗೆ ತುತ್ತಾಗಿರುವ ಸಮುದಾಯದ ಬದುಕನ್ನು ಸುಧಾರಿಸಲು, ವರಿಯಾಧಾರಿತ ಸ್ಥಿರ ಕೃಷಿ, ಮೀನುಗಾರಿಕೆ, ಆರೋಗ್ಯ ಆಧುನಿಕ ಶಿಕ್ಷಣ ಯೋಜನೆಗಳನ್ನು ತಾವೇ ರೂಪಿಸಿ ತ್ತ-ಸ್ವತಂತ್ರ ಸಮುದಾಯವಾಗುವ ಕಾರ್ಯಾಚರಣೆ ನಡೆಸುತ್ತ 'ಮಾವೋವಾದಿ'ಗಳಾಗಿದ್ದಾರೆ. ಮತ್ತೂ ಜನ, ತಮ್ಮ 'ಜನತಾ ಸರಕಾರ'ದ ಯೋಜನೆಯನ್ನು ಹೋರಾಟದ ಮೂಲಕ ದೆಹಲಿಯವರೆಗೂ ವಿಸ್ತರಿಸಿ, ದೇಶದಲ್ಲೇ 'ಜನತಾ ಸರಕಾರ'ವನ್ನು ಸ್ಥಾಪಿಸುವ ಯೋಜನೆಗೆ ಸೈದ್ಧಾಂತಿಕ-ಆಚರಣಾ ಯೋಗ್ಯ ಗಳನ್ನು ರೂಪಿಸುವ ಮಟ್ಟದಲ್ಲಿ 'ಮಾವೋವಾದಿ' ದ್ದಾರೆ. ಆಧುನಿಕ ಜಗತ್ತಿನಲ್ಲಿ ತಾವು ಬದುಕುತ್ತಿರುವ ಡಿಯ ಖನಿಜ ಸಂಪತ್ತನ್ನು ಯಾವ್ಯಾವ ಬಗೆಯ ೋರ ಉದ್ಯಮಗಳಿಗೆ ಬಳಸಿಕೊಳ್ಳಲಾಗುತ್ತದೆ ಎಂದು ುದ 'ಮಾವೋವಾದಿ'ಗಳಿದ್ದಾರೆ; 'ಹಸುವಿನ ಹಾಲು ಳಿಗೆ ಮಾತ್ರ'ವೆಂಬ ನೈಸರ್ಗಿಕ ಜೀವನವಿಧಾನವನ್ನು ಚಾನವಾಗಿ ಪಾಲಿಸಿಕೊಂಡು, ಹೈನುಗಾರಿಕೆಯ ಬಗ್ಗೆ ರಾಸಕ್ತರಾಗಿರುವ 'ಮಾವೋವಾದಿ' ಬೆಂಬಲಿಗರಿದ್ದಾರೆ; ುವ ನೀರಿನಲ್ಲಿರುವ ಮೀನುಗಳನ್ನು ಮಾತ್ರ ಡುವ, ನಿಂತ ನೀರಿನ ಕೆರೆಯ ಮೀನುಗಳು ತಿನ್ನುವುದಕ್ಕೆ ೂ ಯೋಗ್ಯವಲ್ಲವೆಂದು, ಭಿನ್ನ ಬಗೆಯ ಮೀನು ದನಾ ಯೋಜನೆಗಳನ್ನು ಸರಾಗವಾಗಿ ಒಪ್ಪಿಕೊಳ್ಳದ ವೋವಾದಿ' ಬೆಂಬಲಿಗರೂ ಇದ್ದಾರೆ. ಇವರು ದ್ದರೆ, ಆಹಾರ ಉತ್ಪಾದನೆಯಲ್ಲಿ ಸ್ವಾಯತ್ತತೆ ಕೊಳ್ಳುವುದು ಹೇಗೆಂದು ಚಿಂತಿಸುವ 'ಮಾವೋ 'ಗಳೂ ಈ ಹಳ್ಳಿಗಳಲ್ಲಿದ್ದಾರೆ. ಇಂಥ ಚಲನಶೀಲ ಮಾನವ ಯತ್ನಗಳನ್ನು ಸರಳ ಪ್ರಸಂಗ ನಿರೂಪಣೆಯ ಲಕ ಓದುಗರ ತಿಳಿವಿಗೆ ತರುವಲ್ಲಿ ಸತ್ನಾಮ್ ಸ್ವಿಯಾಗಿದ್ದಾರೆ.

1980ರ ನಂತರದ 30 ವರ್ಷಗಳ ಕಾಲಾವಧಿಯಲ್ಲಿ ವೋವಾದಿಗಳು ಅಧಿಕಾರಸ್ಥರ ದಬ್ಬಾಳಿಕೆಯ ವಿರುದ್ಧ ಾಸಿಗಳ ಪ್ರಜ್ಞೆಯನ್ನು ಜಾಗೃತಗೊಳಿಸಿದರು. ನೂರಾರು ಗಳನ್ನೊಳಗೊಂಡ 'ವಿಮೋಚಿತ ಪ್ರದೇಶ'ಗಳಲ್ಲಿ ವೋವಾದಿಗಳು ಆದಿವಾಸಿಗಳೇ ಆಡಳಿತ ನಡೆಸುವ ತಾ ಸರಕಾರ'ವನ್ನೂ ರಚಿಸಿದ್ದಾರೆ, ಪ್ರದೇಶದ ಸಂಪನ್ಮೂಲ ಆದಿವಾಸಿಗಳೇ ಉತ್ಪಾದಕವಾಗಿ ಬಳಸಿಕೊಂಡು ಹಸಿವು, ಅನಾರೋಗ್ಯ, ಅನಕ್ಷರತೆಯಿಂದ ಪಾರಾಗುವುದಕ್ಕೆ ಪೂರಕವಾದ ಸ್ವಾಯತ್ತ 'ಸಹಕಾರಿ ಉತ್ಪಾದನಾ ವ್ಯವಸ್ಥೆ'ಗೆ ತಳಪಾಯವನ್ನೂ ಹಾಕಿದ್ದಾರೆ. ಆದರೆ ಚಳವಳಿಯ ಟೀಕಾಕಾರರಿಗೆ ಮಾವೋವಾದಿಗಳ ಈ ಪ್ರಯೋಗ, ತಮ್ಮ ಉದ್ದೇಶಿತ ಸರ್ವಾಧಿಕಾರವನ್ನು ಸ್ಥಾಪಿಸಲು, ಆದಿವಾಸಿಗಳನ್ನು ಪ್ರಭುತ್ವದ ವಿರುದ್ಧ ಆಯುಧವನ್ನಾಗಿ ಬಳಸುತ್ತಿರುವ ತಾತ್ಕಾಲಿಕ ವರಸೆಯಾಗಿ ಕಾಣುತ್ತದೆ. ಈ ಟೀಕೆಯನ್ನೇನೋ ಒಪ್ಪಿಕೊಳ್ಳಬಹುದು. ಆದರೆ ದಮನಿತ ವರ್ಗಗಳ ಬದುಕಿನ ಬವಣೆಗಳಿಗೆ ನ್ಯಾಯಯುತ ಪರಿಹಾರವನ್ನು ಒದಗಿಸುವ ಬಗ್ಗೆ ಭಾರತದ ಯಾವ ಪ್ರಭಾವಿವಲಯವೂ ತಲೆಕೆಡಿಸಿ ಕೊಳ್ಳುತ್ತಿಲ್ಲ. ಆದಿವಾಸಿಗಳ ಬದುಕುವ ಹಕ್ಕನ್ನೇ ಕಿತ್ತುಕೊಳ್ಳುತ್ತಿರುವ ಪ್ರಭುತ್ವದ 'ಅಭಿವೃದ್ಧಿ ಯೋಜನೆ'ಗಳಿಗೆ ಪ್ರತಿಯಾಗಿ ಮಾವೋವಾದಿಗಳು 'ವಿಮೋಚಿತ ವಲಯ'ದಲ್ಲಿ ನಡೆಸುತ್ತಿರುವ 'ಅಭಿವೃದ್ಧಿ' ಕಾರ್ಯಕ್ರಮಗಳನ್ನು ಆದಿವಾಸಿಗಳೇ ನಿರ್ವಹಿಸುತ್ತಿದ್ದಾರೆ, ಅದರ ಫಲವೂ ಅವರಿಗೆ ಸಂಪೂರ್ಣವಾಗಿ ದಕ್ಕುತ್ತಿದೆ. ಆಯ್ಕೆಗಳೇ ಇಲ್ಲದ ವರ್ತಮಾನದಲ್ಲಿ ಆದಿವಾಸಿಗಳು ತಮಗೆ ಸಹ್ಯವಾದ ಒಂದೇ ಒಂದು 'ಅಭಿವೃದ್ಧಿ ಪಥ'ಕ್ಕೆ ತಮ್ಮನ್ನು ಕೊಟ್ಟುಕೊಂಡು 'ಮಾವೋವಾದಿ'ಗಳಾಗುತ್ತಿದ್ದಾರೆ. ಈ ಪಥ ಆದಿವಾಸಿಗಳಿಗೆ 'ವಿಮೋಚನೆಯ ಪಥ'ವಾಗಿ ಕಾಣುತ್ತಿದೆ. ಇಂತಹ ಸನ್ನಿವೇಶ ನಿರ್ಮಾಣವಾಗಲು ಭಾರತದ ಪ್ರಭುತ್ವ ಎಷ್ಟು ಕಾರಣ? ನಕ್ಸಲೈಟರು ಎಷ್ಟು ಕಾರಣ? ಎಂಬ ಪ್ರಶ್ನೆ ಬರಿ ನೈತಿಕ ಪ್ರಶ್ನೆಯಾಗಿರದೆ ಭಾರತದ ದಮನಿತ ವರ್ಗಗಳ ಸಾವು ಬದುಕಿನ ಪ್ರಶ್ನೆಯಾಗಿ ಪರಿವರ್ತಿತವಾಗಿವೆ. 'ಜಂಗಲ್‌ನಾಮಾ' ಈ ಪ್ರಶ್ನೆಯನ್ನು ಭಿನ್ನ ಬಗೆಯಲ್ಲಿ ಎತ್ತುತ್ತದೆ.


ಇಷ್ಟಾಗಿಯೂ, 'ಜಂಗಲ್‌ನಾಮಾ'ಕ್ಕೆ ಎಡಪಂಥೀಯ ರಮ್ಯ ಕ್ರಾಂತಿ ಕಥಾನಕಗಳ ಲಾಗಾಯ್ತಿನ ದೌರ್ಬಲ್ಯವನ್ನು ಮೀರುವುದಕ್ಕೆ ಸಾಧ್ಯವಾಗಿಲ್ಲ. ಒಂದು ಛಾಪಿನ ಸಿದ್ಧಾಂತದ ವಿಜಯಗಾಥೆಯನ್ನು ಹೆಣೆಯಲು ಉತ್ಪ್ರೇಕ್ಷಿತ ರಮ್ಯ ಭಾಷೆಯಲ್ಲಿ ಚಳವಳಿಯ ಸಾಧನೆಗಳನ್ನು ಬಣ್ಣಿಸುವುದು ಪಕ್ಷಪಾತಿ ನಿರೂಪಕರ ಲಾಗಾಯ್ತಿನ ಚಾಳಿ. ವಿವರಗಳ ಹಿಂದಿನ ಸೂಕ್ಷ್ಮಗಳನ್ನು ಗ್ರಹಿಸಬಲ್ಲ ಶಕ್ತಿಯುಳ್ಳ 'ಜಂಗಲ್‌ನಾಮಾ'ದ ನಿರೂಪಕನಲ್ಲೂ ಈ ಚಾಳಿ ಇದೆ. ಅಷ್ಟರಮಟ್ಟಿಗೆ ಕೃತಿ ಬಡವಾಗಿದೆ.

• ಕೆ.ಫಣಿರಾಜ್

ಗುಂಡಿಗಿಳಿದು, ಮಲ ಹೊತ್ತು ಶುದ್ಧ ಮಾಡುವವರೂ ೇಬೇಕಲ್ಲವೇ? ಬೆಂಗಳೂರಿನ ಕಥೆಯೇ ಹೀಗಿರುವಾಗ ದರಂಡಿ ವ್ಯವಸ್ಥೆಯೇ ಇಲ್ಲದ ಸಣ್ಣಪುಟ್ಟ ನಗರಗಳು, ಗಳಲ್ಲಿ ಮಲ ಹೊರುವ ಪದ್ಧತಿ ಇಲ್ಲವೆಂದು ುವುದು ಹೇಗೆ?

ಸಕಲೇಶಪುರ-ಆಲೂರಿನಂಥ ಮಲೆನಾಡಿನ ಪ್ರದೇಶದಲ್ಲಿ ತಿ ಗಂಭೀರ. ಯಾಕೆಂದರೆ ಇಲ್ಲಿ ಪಿಟ್‌ಗಳು ಬೇಗಬೇಗ ುತ್ತವೆ. ಮಳೆ ನೀರು ಗುಂಡಿಯಲ್ಲಿ ಶೇಖರಣೆ ುವುದರಿಂದ ಪಿಟ್‌ಗಳನ್ನು ಆಗಾಗ ಶುದ್ಧಗೊಳಿಸಲೇ , ಅದು ಅನಿವಾರ್ಯ. ಗುಂಡಿಗಳಿರುವುದರಿಂದ, ನ್ನು ಆಗಾಗ ಖಾಲಿ ಮಾಡಬೇಕಿರುವುದರಿಂದ ದೇವ, ಅರ್ಜುನರಂಥವರು ಹಣದ ಆಸೆಗೆ ಇಂಥ ಗಳನ್ನು ಒಪ್ಪಿಕೊಳ್ಳುತ್ತಾರೆ.

ಸಕಲೇಶಪುರದಲ್ಲಿ ಇಂಥ ಕೆಲಸಗಳನ್ನು ಮಾಡುವವರು ಕಾರ್ಮಿಕರು ಮತ್ತು ಅವರ ಸಂಬಂಧಿಗಳು. ಅವರದ್ದೇ ಸಂಘಟನೆಯಿದೆ. ಈ ಸಂಘಟನೆಯ ಮುಖ್ಯಸ್ಥರಲ್ಲಿ ಾದ ಕೃಷ್ಣ ಹೇಳುವ ಪ್ರಕಾರ ಮಲದ ಗುಂಡಿಯ



ಳನ್ನು ಕಳೆದುಕೊಂಡು ರೋದಿಸುತ್ತಿರುವ ತಾಯಂದಿರು....

ಮಾಡದಂತೆ ಅವರೆಲ್ಲರೂ ಬಹಳ ಹಿಂದೆಯೇ ರಿಸಿದ್ದಾರೆ. ಆದರೆ ಹಣದ ಆಸೆಗೆ ಕೆಲವರು ಕದ್ದುಮುಚ್ಚಿ ಕೆಲಸ ಮಾಡುತ್ತಾರೆ. ಹಾಗೆ ಮಾಡಿದ್ದು ಬೆಳಕಿಗೆ ಾಗಲೆಲ್ಲ ಅವರಿಂದ ದಂಡವನ್ನೂ ಕಟ್ಟಿಸಿಕೊಳ್ಳಲಾಗಿದೆ. ಂಶ ದಂಡ ಕಟ್ಟುವುದೂ ಮಹದೇವ ಅಂಥವರಿಗೆ ಸವಾಗಿರಬಹುದು.

ಸರ್ಕಾರದ ಚಿತ್ರವಿಚಿತ್ರ ನಿಯಮಾವಳಿಗಳಿಂದಾಗಿ ಗೆ ಖಾಯಂ ನೇಮಕಾತಿ ಪಡೆದಿದ್ದ ಒಟ್ಟು ಹನ್ನೊಂದು ದಿಯ ನೌಕರಿಯನ್ನು ವಾಪಾಸು ಕಿತ್ತುಕೊಳ್ಳಲಾಗಿದೆ. ಾಗಿ ಅವರೆಲ್ಲರೂ ಈಗಲೂ ದಿನಗೂಲಿ ಆಧಾರದಲ್ಲೇ ಮಾಡುತ್ತಾರೆ. ಬದುಕಿನ ಅನಿವಾರ್ಯತೆಗಳಿಗಾಗಿ ಹಣದ ಆಸೆಗೆ ಇಂಥ ಕೆಲಸಗಳನ್ನು ಒಪ್ಪಿಕೊಳ್ಳುವವರು ಒಂದೇ ಗುಂಡಿಯಲ್ಲಿ ಬಿದ್ದು ಪ್ರಾಣ ಕಳೆದುಕೊಳ್ಳುತ್ತಾರೆ, ಅಥವಾ ಬರಬಾರದ ಖಾಯಿಲೆಗಳಿಗೆ ಗುರಿಯಾಗುತ್ತಾರೆ.

ವ್ಯಂಗ್ಯವೆಂದರೆ ಇತ್ತೀಚೆಗೆ ಹದಿನೈದು ದಿನಗಳ ಹಿಂದೆಯಷ್ಟೇ ಮಲದ ಪಿಟ್‌ಗಳನ್ನು ಖಾಲಿ ಮಾಡುವ ಸಕ್ಕಿಂಗ್ ಮೆಷಿನ್ ಹೊಂದಿದ ವಾಹನವೊಂದು ಸಕಲೇಶಪುರ ಪುರಸಭೆಗೆ ಬಂದಿದೆ. ಆದರ ಉದ್ಘಾಟನೆ ಸಂದರ್ಭದಲ್ಲಿ ಜನಪ್ರತಿನಿಧಿಗಳು, ಅಧಿಕಾರಿಗಳು ಮಾಮೂಲಿನಂತೆ ಮಲ ಹೊರುವ ಪದ್ಧತಿ ಅನಿಷ್ಟ, ಅದನ್ನು ಓಡಿಸಬೇಕು, ವಾಹನ ಬಂದಿರುವುದರಿಂದ ಸಮಸ್ಯೆ ಬಗೆಹರಿದಿದೆ ಎಂಬ ಧಾಟಿಯಲ್ಲಿ ಮಾತನಾಡಿದ್ದರು. ವಾಹನ ಬಂದ ಹದಿನೈದು ದಿನಗಳಿಗೇ ಇವರಿಬ್ಬರು ತೀರಿಕೊಂಡಿದ್ದಾರೆ.

ಇಂಥವರ ಸಾವಿಗಾಗಿ ಮರುಗುವವರು ಕಡಿಮೆ. ಸತ್ಯಶೋಧನಾ ಸಮಿತಿಗಳು ಮಲೆನಾಡಿನ ಈ ಹಳ್ಳಿಗಳನ್ನು ತಲುಪುವ ಸಾಧ್ಯತೆಗಳು ಕಡಿಮೆ. ಮಾನವ ಹಕ್ಕು ಹೋರಾಟಗಾರರು ಸಾಧಾರಣವಾಗಿ ಬೆಂಗಳೂರು-ಮೈಸೂರುಗಳಂಥ ನಗರಗಳಲ್ಲೇ ವಾಸವಾಗಿರುವುದರಿಂದ, ಅವರಿಗೆ ಈ ಹುಡುಗರ ಸಾವಿನ ಆಕ್ರಂದನವೂ ಕೇಳಿಸುವುದಿಲ್ಲ, ವರ್ಷದ ಆರು ತಿಂಗಳು ಮಳೆಯಲ್ಲೇ ಇರುವ ಮಲೆನಾಡಿನ ಹಳ್ಳಿಗಳಲ್ಲಿ ಮನುಷ್ಯರು ವಾಸವಾಗಿದ್ದಾರೆಂದು ನಮ್ಮ ಬೆಂಗಳೂರು ಸಮಾಜ ನಂಬಿದೆ ಎಂದು ಹೇಳುವಂತೆಯೂ ಇಲ್ಲ. ಮನುಷ್ಯರೇ ಇಲ್ಲದ ಮೇಲೆ ಮಾನವ ಹಕ್ಕುಗಳ ಪ್ರಶ್ನೆಯಾದರೂ ಎಲ್ಲಿಂದ ಉದ್ಭವಿಸುತ್ತದೆ?

ಸತ್ತವರ ಪೈಕಿ ಅರ್ಜುನ ಎಳೆಯವನು, ಮುಗ್ಧ ಸಕಲೇಶಪುರದಲ್ಲಿ ರಸ್ತೆಗಳಲ್ಲಿ ಹಿರಿಯರು, ಗಣ್ಯರು ಎದುರಿಗೆ ಸಿಕ್ಕರೆ ದುನಿಯಾ ಸಿನಿಮಾದಲ್ಲಿ ವಿಜಯ್ ಮಾಡುತ್ತಿದ್ದಂತೆ ಭರ್ಜರಿಯಾಗಿ ಸೆಲ್ಯೂಟ್ ಹೊಡೆದು ನಮಸ್ತೆ ಸಾರ್ ಎನ್ನುತ್ತಿದ್ದ. ಅವನೀಗ ಬದುಕಿಗೇ ಒಂದು ದೊಡ್ಡ ಸಲಾಮ್ ಹೊಡೆದು ಹೋಗಿದ್ದಾನೆ.

ಯಾರ್‍ಯಾರೋ ಹೇಗೆ ಹೇಗೋ ಸಾಯುತ್ತಾರೆ. ಆದರೆ ಸಮಾಜದ ಕೊಳಕು ತೆಗೆಯುವ ಕಾಯಕ ಮಾಡುವ ಈ ಜನರು ಅದೇ ಕೊಳಕಿನ ಮೇಲೆ ಅಂಗಾತ ಬಿದ್ದು ಸಾಯುವುದನ್ನು ನೆನಪಿಸಿಕೊಂಡರೆ ಸಂಕಟವಾಗುತ್ತದೆ.

ಇಂಥ ಸಾವುಗಳಿಗೂ ನಮ್ಮ ಸಮಾಜ, ನಾವು, ನಮ್ಮ ಮಾಧ್ಯಮಗಳು ಮೌನವಾಗಿ ಪ್ರತಿಕ್ರಿಯಿಸುವಷ್ಟು ನಿರ್ಭಾವುಕ ಸ್ಥಿತಿಗೆ ತಲುಪಿರುವುದು ಆಧುನಿಕ ಜಗತ್ತಿನ ಬದಲಾದ ಭಾಷೆಯನ್ನು ಬಿಂಬಿಸುತ್ತದೆ. ಕೊಳಕೆನ್ನುವುದು ಗುಂಡಿಯಲ್ಲಿ ಮಾತ್ರವಿದೆಯೋ, ನಮ್ಮ ಎದೆಗಳಲ್ಲೇ ವರ್ಷಾನು ವರ್ಷಗಳಿಂದ ಶೇಖರಣೆಗೊಂಡು ಕೊಳೆತು ನಾರುತ್ತಿದೆಯೋ?

ಕೃಪೆ: ಸಂಪಾದಕೀಯ ಬ್ಲಾಗ್

ಪುಸ್ತಕ ಪರಿಚಯ




• ಚಂದ್ರಶೇಖರ್ ಐಜೂರ್

ಸಮಾಜದ ಕಾಯಿಲೆಗಳು... ಲೇಖಕರ ತಲ್ಲಣಗಳು...

'ಇಂಡಿಯಾದ ಯಾವುದಾದರೂ ಮೂಲೆಯೊಂದರಲ್ಲಿ ಮುಸ್ಲಿಂ ಹೆಣ್ಣುಮಗಳೊಬ್ಬಳಿಗೆ ತೊಂದರೆಯಾದ ಸುದ್ದಿ ಬಂದರೆ ಅವತ್ತೆಲ್ಲ ಲಂಕೇಶರ ಬಿ.ಪಿ. ಹೆಚ್ಚಾಗಿರುತ್ತಿತ್ತು' ಎಂದು ಅಗ್ರಹಾರ ಕೃಷ್ಣಮೂರ್ತಿಯವರು ಬಹಳ ಹಿಂದೆ ಹೇಳಿದ ಮಾತೊಂದನ್ನು ಮೊನ್ನೆ 'ಲಂಕೇಶ್ 76'ರ ಕಾರ್ಯಕ್ರಮದಲ್ಲಿ ಡಾ. ನಟರಾಜ್ ಹುಳಿಯಾರ್ ನೆನಪು ಮಾಡಿಕೊಂಡರು. ಕನ್ನಡದಲ್ಲಿ ಜನಪ್ರಿಯ ಬರಹಗಾರರೆಂದೇ ಕರೆಸಿಕೊಳ್ಳುವ ಬಹಳಷ್ಟು ಲೇಖಕರುಂಟು. ವರ್ತಮಾನದ ನೋವಿಗೆ ಕಣ್ಣು ಕಿವಿಯಾಗುವ ಲೇಖಕರು ಕನ್ನಡದಲ್ಲಷ್ಟೆ ಅಲ್ಲ, ಇಡೀ ಭಾರತೀಯ ಸಾಹಿತ್ಯದಲ್ಲಿ ಕಮ್ಮಿ ಎಂದೇ ಹೇಳಬೇಕು. ಜನತೆಯ ಸಂಕಟಗಳನ್ನು ತನ್ನದೆಂದು ತಿಳಿದು ಬರವಣಿಗೆ ಮಾಡುವ ಲೇಖಕನೊಬ್ಬ ಸಮಾಜದ ಕಾಯಿಲೆಗಳನ್ನು ತನ್ನೊಳಗೆ ಆವಾಹಿಸಿಕೊಂಡು ನರಳುವುದು ಶ್ರೇಷ್ಠ ಸಾಹಿತ್ಯ ಕೃತಿಯೊಂದನ್ನು ರಚಿಸಿದ್ದಕ್ಕಿಂತಲೂ ಹೆಚ್ಚು ಮಹತ್ವದಂತೆ ಕಾಣುತ್ತದೆ. ಹೀಗಾಗಿಯೇ ಲಂಕೇಶರು ತೀರಿಕೊಂಡಾಗ ಮಲ್ಲಿಕಾರ್ಜುನ ಖರ್ಗೆಯವರು 'ಲಂಕೇಶ್ ನಮ್ಮನ್ನು ಸದಾ ಆತಂಕದಲ್ಲಿಟ್ಟಿದ್ದ ನಿಜವಾದ ರಾಜಕಾರಣಿ' ಎಂದು ಪ್ರಾಮಾಣಿಕವಾಗಿ ಹೇಳಿಕೊಳ್ಳಲು ಸಾಧ್ಯವಾಗುತ್ತದೆ. ಹೆಚ್ಚು ಜನಪ್ರಿಯತೆ ಪಡೆದಿರುವ ಕೋಮುವಾದಿ ಲೇಖಕರೊಬ್ಬರನ್ನು ಖಂಡಿಸಿ ಹಿರಿಯ ಲೇಖಕರೊಬ್ಬರು ಮಾತನಾಡಿದರೆ ಅವರ ವಿರುದ್ಧ ಪುಟಪುಟವೂ ವೈದಿಕ ವಿಷ ಕಾರುವ ಪತ್ರಿಕೆಯೊಂದು ಎಸ್ಸೆಮ್ಮೆಸ್ ಸಮೀಕ್ಷೆ ನಡೆಸಿ ಕೋಮುವಾದದ ಪರ ದಿಗ್ವಿಜಯ ಸಾಧಿಸಿದೆವು ಎಂದು ಹೇಳಿಕೊಳ್ಳುತ್ತದೆ.

ಇಂಥ ಪ್ರಕ್ಷುಬ್ಧ ಹೊತ್ತಲ್ಲಿ, ಶೂದ್ರ ಪತ್ರಿಕೆಯನ್ನು 36 ವರ್ಷಗಳ ಕಾಲ ಮುನ್ನಡೆಸಿರುವ ಶೂದ್ರ ಶ್ರೀನಿವಾಸರು ಸಮಾಜದ ತಲ್ಲಣಗಳಿಗೆ ಕನ್ನಡನಾಡಿನ ಲೇಖಕರ ಒಳಗುದಿ ಎಂಥದ್ದು ಎಂಬುದನ್ನು ತೋರಿಸುವ ಪ್ರಯತ್ನವನ್ನು 'ಲೇಖಕನಾಗಿ ನನ್ನ ತಲ್ಲಣಗಳು' ಕೃತಿಯಲ್ಲಿ ಮಾಡಿದ್ದಾರೆ. ಜಿ.ರಾಜಶೇಖರರಿಂದ ಹಿಡಿದು ವೀಣಾ ಬನ್ನಂಜೆವರೆಗೆ ಒಟ್ಟು 30 ಲೇಖಕರು ಈ ಕೃತಿಯಲ್ಲಿ ವರ್ತಮಾನದ ತಲ್ಲಣಗಳಿಗೆ ಮುಖಾಮುಖಿಯಾಗಿ ನಿಂತಿದ್ದಾರೆ. 'ಅಂಬೇಡ್ಕರರನ್ನು ದಲಿತ ನಾಯಕ ಮಾತ್ರರಾಗಿ ಕಂಡ ಭಾರತೀಯ ಚರಿತ್ರೆ, ಆ ಮೂಲಕ ಅಂಬೇಡ್ಕರ್ ಎತ್ತಿದ ಜೀವನ್ಮರಣದ ಪ್ರಶ್ನೆಗಳ ಮುಜುಗರದಿಂದ ಪಾರಾಗಿಬಿಟ್ಟಿತು. ಈಗಲೂ ಸಂವಿಧಾನಕರ್ತೃ, ದಲಿತ ನಾಯಕ ಎಂಬ ವಿಶೇಷಣಗಳಾಚೆ ಅಂಬೇಡ್ಕರರನ್ನು ಸ್ವೀಕರಿಸುವ ಆತ್ಮವೇ ಈ ಭವ್ಯ ದೇಶಕ್ಕಿಲ್ಲ. ನಮ್ಮ ದಲಿತರಿಗೆ ಅವರ ಫೋಟೋ ಸಾಕು, ಮಿಕ್ಕವರಿಗೆ ಅದೂ ಬೇಕಿಲ್ಲ...!' ಎಂಬ ಎನ್.ಎಸ್.ಶಂಕರರ ಆತಂಕ ಹಾಗೂ 'ಬಲಪಂಥೀಯ ವಲಯಗಳ ಸೈತಾನರ ಕಾರ್ಖಾನೆಯಲ್ಲಿ ತಯಾರಾಗುವ ವಿತಂಡವಾದಗಳನ್ನು ಸತ್ಯವೆಂದು ಬಿಂಬಿಸಲು ನಮ್ಮ ಮಾಧ್ಯಮಗಳಲ್ಲಿನ ಅರ್ಧಭಾಗದಷ್ಟು ಮಂದಿ ಮಾಡುತ್ತಿರುವ ಸಂಚು ಅತ್ಯಂತ ಅಪಾಯಕಾರಿಯಾಗಿದೆ. ಈ ನೀಚತನದಲ್ಲಿ ಕನ್ನಡನಾಡಿನ ಮೇಲುಜಾತಿಗಳ ಹಾಗೂ ಎಲ್ಲ ಜಾತಿಗಳ ವಿಕೃತ ಅಕ್ಷರಸ್ಥ ಲೋಕ ಭಾಗಿಯಾಗುತ್ತಿರುವುದು ಕನ್ನಡ ಸಂಸ್ಕೃತಿ ಈಚೆಗೆ ತಲುಪುತ್ತಿರುವ ಭಯಾನಕ ಘಟ್ಟಕ್ಕೆ ಸಾಕ್ಷಿಯಂತಿದೆ' ಎಂಬ ನಟರಾಜ್ ಹುಳಿಯಾರರ ಮಾತುಗಳು ಇವತ್ತಿನ ಈ ಬಿಕ್ಕಟ್ಟಿನ ಕಾಲಘಟ್ಟದಲ್ಲಿ ಸಾಮಾಜಿಕ ಚಳವಳಿಗಳು ಮತ್ತು ಮಾಧ್ಯಮಗಳು ತಲುಪಿರುವ ರಸಾತಳವನ್ನು ತೋರಿಸುತ್ತಿವೆ. ಜಿ.ರಾಜಶೇಖರ್, ಯು.ಆರ್.ಅನಂತಮೂರ್ತಿ, ನಟರಾಜ್ ಹುಳಿಯಾರ್, ಎನ್.ಎಸ್.ಶಂಕರ್, ಚಂದ್ರಶೇಖರ ತಾಳ್ಯ, ಓ.ಎಲ್.ನಾಗಭೂಷಣಸ್ವಾಮಿ, ಸಿರಾಜ್ ಅಹಮದರ ಲೇಖನಗಳು ಈ ಕೃತಿಯ ಮೌಲ್ಯವನ್ನು ಹೆಚ್ಚಿಸಿವೆ.




ಲೇಖಕನಾಗಿ ನನ್ನ ತಲ್ಲಣಗಳು
ಸಂಪಾದಕ: ಶೂದ್ರ ಶ್ರೀನಿವಾಸ್
ಪ್ರಕಾಶಕರು: ಶೂದ್ರ ಪ್ರಕಾಶನ, ನಂ.573, 'ಕೋಟೆಮನೆ' 17ನೇ ಕ್ರಾಸ್ ಇಸ್ರೋ ಬಡಾವಣೆ, ಬೆಂಗಳೂರು-78
ಪುಟಗಳು: 220, ಬೆಲೆ: 125, ಪ್ರಕಟಣೆ: 2009

ನಮ್ಮ ಗರ್ವ ಗಾಯಗೊಂಡಾಗಲೂ ತೋರಿಕೆ ಗಟ್ಟಿಯಾಗಿರುತ್ತದೆ

ಒಬ್ಬನನ್ನೇ ಪ್ರೀತಿಸುವುದು ನಿಜಕ್ಕೂ ಮೃಗಪ್ರವೃತ್ತಿ, ಏಕೆಂದರೆ ಆಗ ಉಳಿದೆಲ್ಲರಿಗೂ ವಂಚನೆ ಮಾಡಿದ ಹಾಗಾಗುತ್ತದೆ -ದೈವ ಪ್ರೀತಿಯೂ ಕೂಡ.

ರಾಕ್ಷಸನೊಂದಿಗೆ ಸೆಣಸಾಡುವವನು ತಾನೂ ರಾಕ್ಷಸನಾಗದಂತೆ ಜಾಗ್ರತೆ ವಹಿಸಬೇಕು. ನೀವು ಆಳದತ್ತ ಇಣುಕಿದರೆ ಆಳವೂ ನಿಮ್ಮೊಳಗೆ ಇಣುಕುತ್ತದೆ.

Friedrich Wilhelm Nietzsche ಎಂಬ ಜರ್ಮನಿಯ ಈ ತತ್ವಜ್ಞಾನಿ ರಕ್ತದಾಹಿ ಹಿಟ್ಲರ್‌ನ ಖಾಸಗಿ ಸಖ ಎಂಬ ಒಂದೇ ಕಾರಣಕ್ಕೆ ಕನ್ನಡಕ್ಕೆ ಬರಲು ಕೊಂಚ ತಡವಾಗಿರಬಹುದು ಎಂದುಕೊಂಡವರಿಗೆ ಬ್ರೆಕ್ಟ್, ಅನಾ ಅಹ್ಮತೋವಾ, ಸ್ಯಾಫೋರನ್ನು ಕನ್ನಡಕ್ಕೆ ಕರೆತಂದಷ್ಟು ಸರಳವಲ್ಲ ಎನ್ನುವ ಸತ್ಯದ ಸಣ್ಣ ಎಳೆಯೊಂದನ್ನು 'ಹುಚ್ಚುತನವೇ ಅನುಗ್ರಹ' ಕಾಣಿಸುತ್ತದೆ. ಗುಂಡು ಹೊಡೆದಂತೆ ಮಾತನಾಡುತ್ತಲೇ ಅತಿಮಾನುಷ ಶಕ್ತಿಯೊಂದರ ಹುಟುಕಾಟದಲ್ಲಿ ಧಾರ್ಮಿಕ ಕೊಳಕರನ್ನು ಬೆತ್ತಲು ಮಾಡುತ್ತಾ, ಶಿಷ್ಟಾಚಾರದ ನಿಯಮಗಳನ್ನು ಮುರಿಯುತ್ತಾ, ಸಾಂಪ್ರದಾಯಿಕ ಲೋಕ ಗ್ರಹಿಕೆಗಳನ್ನೆಲ್ಲ ಒಡೆಯುತ್ತಾ, ಬದುಕಿನ ಎಲ್ಲ ಸಂಗತಿಗಳಲ್ಲೂ ವಕ್ರವನ್ನೇ ತೋರಿಸುತ್ತಾ ಕಡೆಗೆ ಸಮಾಜದ ಗೌರವಾನ್ವಿತ ಮುಖಗಳ ವಿಕೃತ ಪೊರೆ ಕಳಚುತ್ತಾ ಅಲ್ಲೆಲ್ಲ ತನ್ನ ಅಟ್ಟಹಾಸದ ಕುದಿಯನ್ನೇ ಅಂತಿಮ ಎನ್ನುವಂತೆ ಇಡಲು ಹೆಣಗುವುದು ನೀಷೆಯ ಎಲ್ಲ ಬರೆಹಗಳಲ್ಲೂ ಕಾಣುವ ಸಾಮಾನ್ಯ ಸಂಗತಿಯಾಗಿದೆ.



ನೀಷೆಯನ್ನು ಅನುವಾದ ಮಾಡಲು ಹೊರಡುವುದು ಕೂಡ ಹುಲಿಸವಾರಿಗೆ ಸಮವಾಗಿಬಿಡಬಲ್ಲದು. ಸವಾಲೊಡ್ಡುವ, ಒಮ್ಮೆಗೇ ಇಡೀ ಮುಷ್ಟಿಗೆ ಸಿಗದ ನೀಷೆಯನ್ನು ಹಿಡಿಯಲು ಟಿ.ಎನ್. ವಾಸುದೇವ ಮೂರ್ತಿಯವರು ಇನ್ನೂ ಹೆಚ್ಚಿನ ಶ್ರಮ ವಹಿಸಬಹುದಿತ್ತು. ಆದರೂ ಕನ್ನಡಕ್ಕೆ ಪ್ರಾತಿನಿಧಿಕವೆಂಬಂತೆ ಬಂದಿರುವ ಈ ನೀಷೆ ಓದು ಖುಷಿಕೊಡುತ್ತಲೇ ಹಠಾತ್ ಬೆಚ್ಚಿಬೀಳಿಸುತ್ತದೆ. 'ನಮ್ಮ ಗರ್ವ ಗಾಯಗೊಂಡಾಗಲೂ ನಮ್ಮ ತೋರಿಕೆ ಮಾತ್ರ ಗಾಯಗೊಳ್ಳಲಾರದಷ್ಟು ಗಟ್ಟಿಯಾಗಿರುತ್ತದೆ' ಎನ್ನುವ ಸತ್ಯದ ದರ್ಶನ ಮಾಡಿಸುತ್ತಲೇ ನೀಷೆ 'ವಿಜ್ಞಾನ ಶ್ರೇಷ್ಠ ಹೆಂಗಸರ ಘನತೆಗೇ ಕಳಂಕ ಉಂಟುಮಾಡಿದೆ. ತನ್ನ ಚರ್ಮದೊಳಗೆ, ತನ್ನ ಒಳ ಉಡುಪಿನ ಒಳಗೆ ಮತ್ತೊಬ್ಬನು ಇಣುಕುತ್ತಿರುವನು ಎಂದು ಅವರು ಭಾವಿಸುವಂತೆ ಮಾಡಿದೆ' ಎಂಬ ದ್ವಂದ್ವಗಳನ್ನು ಹುಟ್ಟುಹಾಕಬಲ್ಲ, ಸಂವರ್ತ 'ಸಾಹಿಲ್'ರ ಮುನ್ನುಡಿ ಮತ್ತು ಯು.ಆರ್.ಅನಂತಮೂರ್ತಿಯವರ ಬೆನ್ನುಡಿ ಈ ಪುಸ್ತಕದ ತೀವ್ರ ಓದಿಗೆ ಪ್ರೇರೇಪಿಸಬಲ್ಲವು.

ಹುಚ್ಚುತನವೇ ಅನುಗ್ರಹ: ಟಿ.ಎನ್.ವಾಸುದೇವ ಮೂರ್ತಿ
ಪ್ರಕಾಶಕರು: ಅಹರ್ನಿಶಿ, ಜ್ಯೋತಿರಾವ್ ಬೀದಿ, 4ನೇ ತಿರುವು, ವಿದ್ಯಾನಗರ, ಶಿವಮೊಗ್ಗ
ಪುಟಗಳು: 128, ಬೆಲೆ: ರೂ. 85, ಪ್ರಕಟಣೆ: 2010

ಒಡೆಯರ ಮಠದ ಸಾವುಗಳು ಮತ್ತು ಮಾತು ಕಳೆದುಕೊಂಡ ಬಾಲಕ

ಮೊದಲು ಗೌತಮನನ್ನು ಕೊಂದ ಪೊಲೀಸರು ಅವನ ಹೆಣವನ್ನು ಒಮ್ಮೆ ಮನೆಯ ಹಿತ್ತಲಲ್ಲಿ ಆ ನಂತರ ಮನೆಯ ಮುಂಭಾಗಕ್ಕೂ ತಂದೆಸೆದಿದ್ದರು. ಅದಾದ ಒಂದೆರಡು ಗಂಟೆ ಯಾವ ಗುಂಡಿನ ಸದ್ದೂ ಜನರಿಗೆ ಕೇಳಿಸಿರಲಿಲ್ಲ. ಆದರೆ ಹತ್ತು ಗಂಟೆಯ ವೇಳೆಗೆ ಬೆಂಗಳೂರಿನಿಂದ ಯಾವ ಆದೇಶ ಬಂತೋ, ಯಾರು ಹೇಳಿದರೋ ಏನೋ ಸೆರೆಯಾಳುಗಳ ಪೈಕಿ ಒಬ್ಬೊಬ್ಬರನ್ನೇ ಎಳೆತಂದು ಮನಸೋ ಇಚ್ಛೆ ಹೊಡೆದು ಗುಂಡಿಕ್ಕಿ ಕೊಲ್ಲುವ ಕೆಲಸ ಆಯಿತು.

ಇದಾಗಿ ನಾಲ್ಕು ವರ್ಷಗಳಾದವು.


ಕರ್ನಾಟಕ ಸರ್ಕಾರ ನಡೆಸಿದ ಐವರ ಭಯಾನಕ ಕೊಲೆಗಳ ಬಗ್ಗೆ ಈಗ ಬಹುತೇಕರಿಗೆ ಮರೆತೇ ಹೋಗಿರಬಹುದು. ಬೆಲೆ ಏರಿಕೆ, ನಿತ್ಯ ಬದುಕಿನ ಜಂಜಾಟ, ರಾಜಕಾರಣಿಗಳ ಎಂದೆಂದೂ ಮುಗಿಯದ ಹಗರಣಗಳ ಗದ್ದಲದಲ್ಲಿ ಅವತ್ತು ವಿನಾಕಾರಣ ಬಲಿಯಾದವರ ಬದುಕಿನ ಕತೆ ಮುಖ್ಯ ಅಂತ ಈಗ ಕೆಲವರಿಗೆ ಅನ್ನಿಸದಿರಬಹುದು.

ಆದರೂ ಆ ಹೃದಯವಿದ್ರಾವಕ ಘಟನೆ ಅಷ್ಟು ಸಲೀಸಾಗಿ ಮರೆತು ಬಿಡುವಂತದ್ದಲ್ಲ. ಒಡೆಯರ ಮಠ ಎನ್‌ಕೌಂಟರ್ ಘಟನೆ ಅದು. ಮಲೆನಾಡಿನ ನಕ್ಸಲ್ ಹೋರಾಟದ ದುರಂತ ಅಧ್ಯಾಯಗಳಲ್ಲಿ ಇದೂ ಒಂದು. ಮೆಣಸಿನಹಾಡ್ಯ ಹತ್ಯಾಕಾಂಡ ಅಥವಾ ಅತ್ಯಡ್ಕ ಎನ್‌ಕೌಂಟರ್ ಎನ್ನಲಾಗುವ ಈ ಘಟನೆ ನಡೆದು ಈ ಜುಲೈ 10ಕ್ಕೆ ನಾಲ್ಕು ವರ್ಷ ಆಯಿತು. ಈ ನಾಲ್ಕು ವರ್ಷಗಳಲ್ಲಿ ಏನೇನೆಲ್ಲ ಆಗಿಹೋಗಿದೆ. ಅವತ್ತಿನ ಹತ್ಯಾಕಾಂಡದಲ್ಲಿ ಸತ್ತವರು ಗೌತಮ ಯಾನೆ ಚೆನ್ನಪ್ಪ ಎನ್ನುವ ರಾಯಚೂರಿನ ಯುವಕ (ಈತ ನಕ್ಸಲನಾಗಿದ್ದವ) ಮತ್ತು ಸುಂದರೇಶ್ ಹಾಗೂ ಪರಮೇಶ್ವರ್ ಸ್ಥಳೀಯ ಯುವಕರು. ತಮ್ಮ ಮನೆಯಲ್ಲೇ ಕೊಲೆಯಾದವರು ರಾಮಗೌಡ್ಲು -ಕಾವೇರಮ್ಮ ದಂಪತಿ. ಅವತ್ತು ಆ ಕೊಲೆಗಳಿಗೆ ಒಪ್ಪಿಗೆ ಕೊಟ್ಟ ಗೃಹಸಚಿವ ಎಂ.ಪಿ. ಪ್ರಕಾಶ್ ತೀರಿಕೊಂಡಿದ್ದಾರೆ. ಕೊಲೆ ಶಿಕ್ಷೆ ಜಾರಿ ಮಾಡಿಸಿದ ಶಂಕರ್ ಬಿದರಿ ರಾಜ್ಯ ಪೊಲೀಸ್ ಮುಖ್ಯಸ್ಥರಾಗಲು ಲಾಬಿ ನಡೆಸುತ್ತಿದ್ದಾರೆ.

ಈ ಐವರನ್ನು ಗುಂಡಿಟ್ಟು ಕೊಂದ ಪೊಲೀಸರ ತಂಡದಲ್ಲಿದ್ದವರ ಪೈಕಿ ಪತ್ತೆಯಾದ ಹೆಸರು ರಾಘವನದ್ದು ಮಾತ್ರ. ಅವನೀಗ ಎಲ್ಲಿದ್ದಾನೋ ಗೊತ್ತಿಲ್ಲ.

ಅವತ್ತು 2007ರ ಜುಲೈ 10ರ ಬೆಳಗ್ಗೆ ಎಂಟು ಗಂಟೆಯ ಸುಮಾರಿಗೆ ಪತ್ರಿಕೆಯ ಮಾಹಿತಿದಾರನೊಬ್ಬ ನನಗೆ ಫೋನ್ ಮಾಡಿ 'ಎನ್‌ಕೌಂಟರ್' ಬಗ್ಗೆ ಹೇಳಿದ. ಅದೇ ಸ್ಥಳದಲ್ಲಿ ಸ್ವಲ್ಪ ದೂರದಲ್ಲಿ ನಿಂತು ಎಲ್ಲವನ್ನು ಗಮನಿಸುತ್ತಿದ್ದ ಆತ ಒಬ್ಬನ ಹತ್ಯೆಯಾಗಿದೆ. ನಾಲ್ವರು ಅರೆಸ್ಟಾಗಿದ್ದಾರೆ' ಅಂತಲೂ ಹೇಳಿದ್ದ. ಅದೇ ದಿನ ಬೆಳಗ್ಗೆ ಹನ್ನೊಂದೂವರೆಗೆ ವಿಧಾನಸಭೆಯಲ್ಲಿ ಮಾತನಾಡಿದ ಎಂ.ಪಿ. ಪ್ರಕಾಶ್ 'ಒಬ್ಬನ ಹತ್ಯೆ ನಾಲ್ವರ ಬಂಧನ'ವೆಂಬ ಹೇಳಿಕೆಯನ್ನು ಕೊಟ್ಟರು. ಆದರೆ ಅದೇ ದಿನ ಮಧ್ಯಾಹ್ನದೊಳಗೆ ಎಲ್ಲವೂ ಬದಲಾಯಿತು.

ಪೊಲೀಸರ ವಶದಲ್ಲಿದ್ದ ಐದೂ ಜನರ ಪ್ರಾಣ ತೆಗೆಯಲಾದ ಸುದ್ದಿ ಬಂತು. ಅವತ್ತು ಮಂಗಳವಾರ. ಗುರುವಾರ ಸಂಜೆ ಪ್ರಿಂಟ್‌ಗೆ ಹೋಗಬೇಕಿದ್ದ 'ಲಂಕೇಶ್'ಗಾಗಿ ಕೆಲಸ ಆರಂಭಿಸಿದ್ದ ನಾವು ಎಲ್ಲಾ ಕೆಲಸ ಬದಿಗಿಟ್ಟು ಮಂಗಳವಾರ ರಾತ್ರಿಯೇ ಮೆಣಸಿನಹಾಡ್ಯಕ್ಕೆ ಹೊರಟೆವು. ಮಾನವ ಹಕ್ಕುಗಳ ಕಾರ್ಯಕರ್ತರು, ಲಾಯರ್‌ಗಳು, ಕೆಲ ಪತ್ರಕರ್ತರು ಬೆಂಗಳೂರು, ಮೈಸೂರು, ಚಿಕ್ಕಮಗಳೂರು, ಶಿವಮೊಗ್ಗದಿಂದ ಹೊರಟುಬಂದರು. ಸ್ವಾತಂತ್ರ್ಯೋತ್ತರ ಕರ್ನಾಟಕದ ಇತಿಹಾಸದಲ್ಲೇ ನಡೆದಿರದ, ರಾಜ್ಯ ಪೊಲೀಸರು ನಡೆಸಿದ ಅಮಾನವೀಯ ನೀಚ ಕೊಲೆಗಳ ಬಗ್ಗೆ ಖುದ್ದಾಗಿ ತಿಳಿಯಲು ನಾವು ಹೊರಟಿದ್ದೆವು. ಬೆಳಗಿನ ಜಾವದ ಹೊತ್ತಿಗೆ ಚಿಕ್ಕಮಗಳೂರು ದಾಟಿ ಬಾಳೆಹೊನ್ನೂರು, ಜಯಪುರ ಹಾದು ಕೊಗರೆ ಮಾರ್ಗ ಹಿಡಿದಾಗ ಭಾರೀ ಮಳೆ. ಅಲ್ಲಲ್ಲಿ ನಿಂತು ನಮ್ಮನ್ನೆಲ್ಲಾ ಹರಿದು ಚೂರು ಮಾಡುವಂತೆ ನೋಡುತ್ತಿದ್ದ ಬಿಜೆಪಿಗಳನ್ನು ನಿರ್ಲಕ್ಷಿಸಿ ಕಲ್ಲುಗುಡ್ಡೆ ಗ್ರಾಮದ ಹಾದಿ ಹಿಡಿದು ನಮ್ಮ ತಂಡ ಮೆಣಸಿನಹಾಡ್ಯ ತಲುಪಿದಾಗ ಬೆಳಗ್ಗೆ ಹನ್ನೊಂದು ಗಂಟೆಯಾಗಿತ್ತು. ಮಳೆ ಇನ್ನೂ ಹೆಚ್ಚಾಗಿತ್ತು. ಐವರ ದಾರುಣ ಕೊಲೆಯಾಗಿದ್ದ


ಪರಮೇಶ

ರಾಮಗೌಡ್ಲುವಿನ ಮನೆಯೊಳಗೆ, ಹೊರಗೆ ಅಸಂಖ್ಯ ಜನ. ಮನೆಯ ಅಂಗಳ ಹಾಗೂ ಹಿತ್ತಲಿನಲ್ಲಿ ಮಾನವ ರಕ್ತ ಅದೆಷ್ಟು ಹರಿದು ಹೆಪ್ಪುಗಟ್ಟಿತ್ತೆಂದರೆ ದಿನವಿಡೀ ಸುರಿಯುತ್ತಿದ್ದ ಮಳೆಯೂ ಅದನ್ನು ಅಳಿಸಲಾಗಿರಲಿಲ್ಲ.

ಸತ್ತ ಐವರಲ್ಲಿ ಗೌತಮ ಯಾನೆ ಚೆನ್ನಪ್ಪ ನಕ್ಸಲನಾಗಿದ್ದ. ಅದನ್ನು ನಂತರ ಮಾವೋವಾದಿ ಪಕ್ಷವೇ ಒಪ್ಪಿಕೊಂಡಿತು. ಆದರೆ ಪರಮೇಶ್ ಹಾಗೂ ಸುಂದರೇಶ್ ನಕ್ಸಲೀಯರಾಗಿರಲಿಲ್ಲ. ಇಳಿವಯಸ್ಸಿನ ರಾಮಗೌಡ್ಲು-ಕಾವೇರಮ್ಮ ಗೆರಿಲ್ಲಾಗಳಾಗಲು ಸಾಧ್ಯವಿರಲಿಲ್ಲ.

ಹಾಗಾದರೆ ಅವರನ್ನೆಲ್ಲಾ ಕೊಲ್ಲಲಾಯಿತೇಕೆ? ಆ ಕೊಲೆಗಳು ಹೇಗೆ ನಡೆದವು? ಎಷ್ಟು ಹೊತ್ತಿಗೆ ನಡೆದಿರಬಹುದು?

ನಮ್ಮ **Fact finding** ತಂಡ ಸ್ಥಳ ಪರಿಶೀಲನೆ ಮಾಡುತ್ತಾ ಸ್ಥಳೀಯರೊಂದಿಗೆ ಮಾತನಾಡುತ್ತಾ ಇದ್ದಾಗ ಈ ಎಲ್ಲಾ ಪ್ರಶ್ನೆಗಳಿಗೂ ಅರೆಬರೆ ಮಾಹಿತಿಗಳು ಸಿಗತೊಡಗಿದವು.

ಆಗಲೇ ನನಗೆ ಪ್ರಶಾಂತ ಸಿಕ್ಕಿದ್ದು!

ಕಾವೇರಮ್ಮ-ರಾಮಗೌಡ್ಲು ಮಗನಾಗಿದ್ದ ಪ್ರಶಾಂತ ಅವತ್ತು ಆಕಸ್ಮಾತ್ತಾಗಿ ಪೊಲೀಸರ ಗುಂಡೇಟಿನಿಂದ ಪಾರಾಗಿದ್ದ. ಗೌತಮ್ಮ. ಪರಮೇಶ್, ಸುಂದರೇಶ್, ರಾಮಗೌಡ್ಲು, ಕಾವೇರಮ್ಮ.... ಹೀಗೆ ಒಬ್ಬರಾದ ಮೇಲೆ ಒಬ್ಬರನ್ನು ಪೊಲೀಸರು ಎಳೆತಂದು ಗುಂಡು ಹೊಡೆಯುತ್ತಿದ್ದಾಗ ಅದನ್ನೆಲ್ಲ ನೋಡಿದ್ದಿರಬಹುದಾದ ಪ್ರಶಾಂತ ಮನೆಯ ಹಿತ್ತಲ ಬಾಗಿಲಿನತ್ತ ನುಗ್ಗಿ ಕಾಡಿನತ್ತ ಓಡಿಹೋಗಿದ್ದ. ಪೊಲೀಸರು ಎಚ್ಚೆತ್ತುಕೊಳ್ಳುವಷ್ಟರಲ್ಲಿ ಹದಿಮೂರು ವರ್ಷದ ಆ ಬಾಲಕ ಕಾಡಿನೊಳಗೆ ನುಸುಳಿಕೊಂಡಿದ್ದ.

ಆ ದುರ್ಘಟನೆಯಾಗಿ ಇನ್ನೂ ಇಪ್ಪತ್ನಾಲ್ಕು ಗಂಟೆಯಷ್ಟೇ ಆಗಿತ್ತು. ಪ್ರಶಾಂತ ಇನ್ನೂ ಕಾಡಿನೊಳಗೆ ಇದ್ದ. 'ಅವನನ್ನು




● ಪಾರ್ವತೀಶ ಬಿಡಿ ಚಿತ್ರಗಳು

ಕಂಡು ಮಾತಾಡುತ್ತೀರಾ?' ಅಂತ ಯಾರೋ ಗುಟ್ಟಾಗಿ ಕೇಳಿದರು.

ನಾನು 'ಆಗಲೆಂದು' ನಮ್ಮ ತಂಡದ ಹಿರಿಯರಿಬ್ಬರಿಗೆ ಮಾತ್ರ ವಿಚಾರ ತಿಳಿಸಿ ಹೊರಟೆ. ದಾರಿಯ ನಡುವೆ ಪೊಲೀಸರಿಂದ ತೊಂದರೆಯಾದರೆ ನಮ್ಮವರಿಗೆ ಗೊತ್ತಾಗಬೇಕಲ್ಲ. ಎಡಬಿಡದೆ ಸುರಿಯುತ್ತಿದ್ದ ಮಳೆ ಕಣ್ಣು ಬಿಡಲೂ ಆಗದಂತೆ ರಾಚುತ್ತಿತ್ತು. ಕಂಬಳಿ ಕೊಪ್ಪೆ ಹಾಕಿಕೊಂಡಿದ್ದ ಇಬ್ಬರು ಆದಿವಾಸಿಗಳ ಹಿಂದೆ ನಾನೊಂದು ಕೊಪ್ಪೆ ಹೊದ್ದು ಅರ್ಧ ಗಂಟೆ ಕಾಡಿನೊಳಗೆ ನಡೆದಾದಮೇಲೆ ಒಂದು ಗುಡ್ಡದ ಬುಡದ ಬಳಿ ಹೋಗಿ ನಿಂತಾಗ ನನಗೆ ಇಬ್ಬರು ಕಂಡರು. ಆಳೆತ್ತರದ ಪೊದೆಗಳ ನಡುವೆ ಸುರಿವ ಮಳೆಯಲ್ಲೇ ನಿಂತಿದ್ದವರ ಪೈಕಿ ಒಬ್ಬ ಬಾಲಕನಿದ್ದ.

ಪ್ರಶಾಂತನವನು.

ಅವನು ಹೇಳಿದ ಕತೆ ದಾರುಣವಾಗಿತ್ತು. ಆ ನಂತರ ನಮಗೆ ಸಿಕ್ಕ ಮಾಹಿತಿಗಳನ್ನು ಜೋಡಿಸಿಕೊಂಡಾಗ ನಡೆದ ಘಟನೆ ಹೀಗಿತ್ತು. 2007ರ ಜುಲೈ 8 ರಂದು ನೆಮ್ಮಾರು ವೆಂಕಟೇಶನ ಮನೆಗೆ ಹನ್ನೆರಡು ಮಂದಿ ನಕ್ಸಲ್ ಗೆರಿಲ್ಲಾಗಳ ದಳವೊಂದು ಹೋಗಿ ಅನೇಕ ವಿಚಾರ ಮಾತಾಡಿದ್ದ ಸಂಗತಿ ಪೊಲೀಸರಿಗೆ ಗೊತ್ತಾಗಿತ್ತು. ಅಲ್ಲಿಗೆ ಬೇರೆ ಬೇರೆ ಕಡೆಯಿಂದ ಬಂದಿದ್ದಿರಬಹುದಾದ ನಕ್ಸಲರು ಮತ್ತೆ ವಿಭಜನೆಯಾಗಿ ನಾನಾ ದಿಕ್ಕುಗಳಲ್ಲಿ ಮೂರ್ನಾಲ್ಕು ಜನರಂತೆ ಚೆದರಿ ಹೋಗುತ್ತಾರೆಂದು ಗೆಸ್ ಮಾಡಿದ್ದ ಪೊಲೀಸರು ನಕ್ಸಲರು ಹಾದಿಯ ನಡುವೆ ಯಾವ್ಯಾವ ಹಳ್ಳಿಗೆ, ಯಾರ್‍ಯಾರ ಮನೆಗೆ ಹೋಗಬಹುದೆಂದು ಊಹಿಸಿ ಅಲ್ಲೆಲ್ಲಾ ತಲಾಶ್ ಆರಂಭಿಸಿದ್ದರು. ಒಡೆಯರ ಮಠದ ರಾಮೇಗೌಡ್ಲು ವಿನ ಮನೆಯೂ ಅದರಲ್ಲಿ ಒಂದಾಗಿತ್ತು. ಪೊಲೀಸರ ಊಹೆಯಂತೆ ಚನ್ನಪ್ಪ ಕಲ್ಲೂರ ಅಲಿಯಾಸ ಗೌತಮ ಜುಲೈ 9ರ ರಾತ್ರಿ ಅಲ್ಲಿಗೆ ಬಂದೇ ಬಂದ. ಹುಷಾರಿರಲಿಲ್ಲವಾದ ಕಾರಣ ಗೌತಮ ಆ ರಾತ್ರಿ ಅಲ್ಲೇ ಉಳಿದ ಎನ್ನಲಾಗಿದೆ.


ರಾಮಗೌಡ್ಲು ಮನೆ-ಕೊಲೆಯಾದ [illegible]- ಪರಮೇಶ್

ಈ ಬಾಲಕ ಪ್ರಶಾಂತನಿಗೆ ಹಿಂದಿನ ರಾತ್ರಿಯ ವಿದ್ಯಮಾನ ತಿಳಿದಿರಲಿಲ್ಲ. ಅವನು ಬೆಳಗ್ಗೆ ಕಣ್ಣು ಬಿಟ್ಟು ನೋಡಿದಾಗ ಗೌತಮ ಎದ್ದು ಹಲ್ಲುಜ್ಜುತ್ತಿದ್ದಾನೆ. ಪಕ್ಕದ ಮೆಣಸಿನ ಹಾಡ್ಯದ ಪರಮೇಶ್ ಹಾಗೂ ಸುಂದರೇಶ್ ಅಡಿಕೆ ತೋಟಕ್ಕೆ ಔಷಧ ಹೊಡೆಯಲು ಬಂದವರು ಕೆಲಸಕ್ಕೆ ತಯಾರಾಗುತ್ತಿದ್ದುದು ಕಾಣಿಸಿದೆ. ಅಮ್ಮ ಕಾವೇರಮ್ಮ ಅಡುಗೆ ಮನೆಯಲ್ಲಿ ಕಾಫಿ ಕಾಸುತ್ತಿದ್ದಾರೆ. ಅಪ್ಪ ರಾಮೇಗೌಡ್ಲು ನಿರಾಳವಾಗಿ ಕೂತು ಅಂದಿನ ಕೆಲಸದ ಬಗ್ಗೆ ಮಾತಾಡುತ್ತಿದ್ದಾರೆ.

ಆಗಲೇ ಆರು ಜನ ಪೊಲೀಸರು ಏಕಾಏಕಿ ಮನೆ ಬಾಗಿಲಲ್ಲಿ ಕಾಣಿಸಿಕೊಂಡರು. ಅದಾದ ಎರಡೇ ನಿಮಿಷದಲ್ಲಿ ಗೌತಮನಿಗೆ ಗುಂಡೇಟು ಬಿತ್ತು. ಉಳಿದ ನಾಲ್ವರು ಭೀತಿ ಆತಂಕದಿಂದ ಪೊಲೀಸರೆದುರು ನಿಂತಿದ್ದಾಗ ಪ್ರಶಾಂ ಹಿತ್ತಲ ಬಾಗಿಲಿಂದ ಓಡಿಹೋದ.

ಇಷ್ಟು ವಿವರ ಹೇಳಿದ ಪ್ರಶಾಂತನ ಮುಖ ನಿರ್ಭಾವುಕವಾಗಿತ್ತು. ಮಳೆಯ ನೀರಿನಲ್ಲಿ ನೆನೆಯುತ್ತಿ ಅವನ ಮುಖದಲ್ಲೂ ಕಣ್ಣಿನಿಂದ ಹರಿದು ಬಂ ನೀರು ಕಾಣಿಸುತ್ತಿತ್ತು.

ಪ್ರಶಾಂತನಿಗೆ ತನ್ನಪ್ಪ ಅಮ್ಮನನ್ನು ಪೊಲೀಸರು ಸಾಯಿಸಿದ ವಿಚಾರ ಕೊಂಚ ತಡವಾಗಿ ಗೊತ್ತಾಗಿತ್ತು. ಆದರೆ ಆ ಬಗ್ಗೆ ಏನನ್ನೂ ಹೇಳಲಿಲ್ಲ. ನಾನು ಹೆಚ್ಚು ಹೊತ್ತು ಅಲ್ಲಿರುವಂತಿರಲಿಲ್ಲ. ಪ್ರಶಾಂತ ಸಿಕ್ಕರೆ ಅವನು ಕೊಲೆಯಾಗುವ ಸಾಧ್ಯತೆ ಜಾಸ್ತಿಯಿತ್ತು. ಅಲ್ಲಿಂದ ಹೊರ ನಾನು ತಂಡದ ಇನ್ನೊಬ್ಬ ಗೆಳೆಯನನ್ನು ಕರೆದುಕೊಂಡು ಎರಡನೇ ಸಾರಿ ರಾಮೇಗೌಡ್ಲುವಿ ಮನೆಗೆ ಹೋದೆ. ಮನೆಯ ಮುಂಭಾ ಹಾಗೂ ಹಿತ್ತಲಿನಲ್ಲಿ ಪೊಲೀಸರು ನಿಂತು ಗಂಟೆಗಟ್ಟಲೆ ಗುಂಡು ಹಾರಿ ದ್ದಕ್ಕೆ ಸಾಕ್ಷಿ ಅಲ್ಲಿತ್ತು. ಮೊದಲು ಗೌತಮ ನನ್ನು ಕೊಂದ ಪೊಲೀಸರು ಅವ ಹೆಣವನ್ನು ಒಮ್ಮೆ ಮನೆಯ ಹಿತ್ತಲ ಆ ನಂತರ ಮನೆಯ ಮುಂಭಾಗಕ್ಕೂ ತಂದೆಸೆದಿದ್ದರು. ಅದಾದ ಒಂದೆರಡು ಗಂಟೆ ಯಾವ ಗುಂಡಿನ ಸದ್ದೂ ಜನರಿ ಕೇಳಿಸಿರಲಿಲ್ಲ. ಆದರೆ ಹತ್ತು ಗಂಟೆಯ ವೇಳೆ ಬೆಂಗಳೂರಿನಿಂದ ಯಾವ ಆದೇಶ ಬಂತೋ, ಯಾರು ಹೇಳಿದರೋ ಏನೋ ಸೆರೆಯಾಳುಗಳ ಪೈಕಿ ಒಬ್ಬೊಬ್ಬರ ಎಳೆತಂದು ಮನಸೋ ಇಚ್ಛೆ ಹೊಡೆದು ಗುಂಡಿ ಕೊಲ್ಲುವ ಕೆಲಸ ಆಯಿತು.

ಏನಿದರ ಉದ್ದೇಶ?

ಭಯ ಹುಟ್ಟಿಸುವುದು ಅಷ್ಟೆ.

ಪರಮೇಶ್ ಹಾಗೂ ಸುಂದರೇಶ್ ಆ ಪ್ರಾಂತ್ಯ ಅತ್ಯಂತ ಜನೋಪಕಾರಿ ಯುವಕರಾಗಿದ್ದವರು. ರೈತರು ಆದಿವಾಸಿಗಳ ಪರ ದನಿಯಾಗಿದ್ದವರು. ಇನ ರಾಮೇಗೌಡ್ಲು, ಕಾವೇರಮ್ಮ ತಮ್ಮ ಪಾಲಿನ ತುಂಡ ಭೂಮಿ ಹಾಗೂ ಮನೆ ಉಳಿಸಿಕೊಳ್ಳುವ ಆ ಹೊಂದಿದ್ದವರು. ಈ ಮೂರು ಹಿನ್ನೆಲೆಯ ಜನರ ಒಂದೇ ಸಾರಿ ಮರಣದಂಡನೆ ವಿಧಿಸಿ ಬಿಟ್ಟರೆ ಮುಂ ಯಾರೂ ಸರ್ಕಾರದ ವಿರುದ್ಧ ದನಿ ಎತ್ತುವ ಧೈರ್ಯ ಮಾಡುವುದಿಲ್ಲ ಎಂದು ಪೊಲೀಸ್ ಆಫೀಸರ್‌ಗಳ ತೀರ್ಮಾನಿಸಿದ್ದರು. ಇದನ್ನೆಲ್ಲಾ ಯೋಚಿಸುತ್ತಾ ಮನೆಯ ತಲಾಶ್ ನಡೆಸುತ್ತಿದ್ದಾಗ ಅಡುಗೆ ಮನೆ ಹಾಗೂ ಬಚ್ಚಲ ಮನೆಯ ಸಂದುಗೊಂದುಗಳಲ್ಲಿ ನನಗೆ ಡಜನ್‌ಗಟ್ಟಲೆ ಖಾಲಿ ಕಾಡತೂಸುಗಳು ಕಾಣಿಸಿದವು. ಕಾವೇರಮ್ಮ ಮನೆಯೊಳಗೆ ನಿಂತು ಪೊಲೀಸರು ಮನಬಂದಂ ಹಾರಿಸಿದ್ದ ಬುಲೆಟ್‌ಗಳ ಖಾಲಿ **Cortrige**ಗಳ ಪಾಪದ ಹೆಣ್ಣುಮಗಳು ಕಾವೇರಮ್ಮ ಅಸಹಾಯಕರಾ ಭೀತಿಯಿಂದ ನೋಡನೋಡುತ್ತಿದ್ದಂತೆಯೇ ಗಂ ರಾಮೇಗೌಡ್ಲುನನ್ನು ಎಳೆದುಕೊಂಡು ಹೋ ಪೊಲೀಸರು ಆತನ ಬಾಯೊಳಕ್ಕೆ ಗನ್ ಇಟ್ಟು ಗುಂಡು ಹಾರಿಸಿದ್ದರು. ಅದಾದ ಕೆಲವೇ ನಿಮಿಷಗಳ ಕಾವೇರಮ್ಮನಿಗೂ ಗುಂಡೇಟು ಬಿತ್ತು.

ಈ ದುರಂತ ಗಾಥೆಯನ್ನೆಲ್ಲಾ ನೋಡಿ ಗುರುವಾರ ಬೆಳಗ್ಗೆ ಬೆಂಗಳೂರಿಗೆ ಬಂದು ತರಾತುರಿಯಲ್ಲೇ ವರದಿ ಸಿದ್ಧಮಾಡಿ, ಫೋಟೋ ವ್ಯವಸ್ಥೆ ಮಾಡಿಕೊಂಡು ಪ್ರಕಟಿಸಲಾಯಿತು. ನಂತ ರಾಜ್ಯ ಮಾನವ ಹಕ್ಕುಗಳ ಆಯೋಗದವರು ಒಡೆಯರ ಮಠಕ್ಕೆ ಹೋಗಿಬಂದರು. ಆಗ ಮುಖ್ಯಮಂತ್ರಿಯಾಗಿದ್ದ ಕುಮಾರಸ್ವಾಮಿ ಬದುಕುಳಿದ 'ಪ್ರಶಾಂತನ ಯೋಗಕ್ಷೇಮ ನಾನು ನೋಡಿಕೊಳ್ಳುತ್ತೇನೆ' ಎಂದಿದ್ದರು ಇದ್ಯಾವುದರಿಂದ ಏನೂ ಆಗಲಿಲ್ಲ. ಮೊನ್ನೆ ಇದೆಲ್ಲಾ ನೆನಪಾಗಿ ಗೆಳೆಯ ವಿಠಲ್ ಹೆಗಡೆ ಫೋನ್ ಮಾಡಿದೆ.

ಪ್ರಶಾಂತನ ಬಗ್ಗೆ ಕೇಳಿದೆ. ಆದರೆ ವಿಠಲ್‌ಗೂ ಅವನ ಬಗ್ಗೆ ಮಾಹಿತಿ ಇರಲಿಲ್ಲ. 'ಯಾರನ್ನಾದರೂ ವಿಚಾರಿಸಿ ಹೇಳುತ್ತೇನೆಂದರು. ಸ್ವಲ್ಪಹೊತ್ತಿನ ಬಳಿ ವಿಠಲ್‌ರ ಫೋನ್ ಬಂತು.

'ಏನಾದರೂ ಗೊತ್ತಾಯಿತಾ? ಪ್ರಶಾಂತ್ ಎಲ್ಲಿದ್ದಾ ಹೇಗಿದ್ದಾನೆ?' ಅಂದೆ.

'ಅವನು ಚಿಕ್ಕಪ್ಪನ ಜೊತೆ ಇದ್ದಾನಂತೆ.'

'ಹೇಗಿದ್ದಾನಂತೆ?' ಅಂದೆ.

ಪ್ರಶಾಂತ ಮಾತು ಕಳೆದುಕೊಂಡಿದ್ದ.

...ಾಟಿಸ್ಸೆ ಇರೊ ಊರಿಗೆ ಭಗದ್‌ಗೀತೆ ಯಾಕ್ ಬೇಕು

...ಮ್ಮ ಅಪರೂಪದ ಕುಟುಂಬದ ಪರವಾಗಿ ...ಣಾಂತ ಉಪವಾಸ ಕುಳಿತಿದ್ದ ಕುಮಾರಸ್ವಾಮಿ ಬಗ್ಗೆ ...ಕೊಳ್ಳಲು ಕಾಳಮಾವ ಕಾತುರನಾಗಿದ್ದ. ಆದ್ದರಿಂದ ...ಬಂದ ಕೂಡಲೇ,

...ಲೀ ಉಗ್ರಿ, ಕುಮಾರಸ್ವಾಮಿ ಅನ್ನ ನೀರು ಬುಟ್ಟು

...ಯ ಲು ಸೀ ಮೆ

...ಕಟ್ಟೆಪುರಾಣ

▶ಬಿ. ಚಂದ್ರೇಗೌಡ

...ವ್ರುನೆ ಅಂದ್ರಲ್ಲಾ ಏನಾಯಿತ್ಲ ಅದು?" ಎಂದ.

...ಅವುನಾಗ್ಲೆ ಎದ್ದು ಉತ್ತರ ಕರ್ನಾಟಕದ ಕಡಿ ...ನನಂತೆ."

...ಅಂಗರೆ ಉಪಾಸ ನಿಲ್ಲಿಸಿಬುಟ್ಟ ಅನ್ನು."

...ಊ ಕಣ ಮಾವ. ಅವುನಿಗೆ ಸಕ್ಕರೆ ಕಾಯ್ಲುವಂತೆ. ... ಕಾಯ್ಲು ಇದ್ರೋರು ಉಪಾಸ ಮಾಡಿದ್ರೆ ...ಗೇಬುಡ್ತರಂತೆ. ಅದ್ಕೆಯ ಅವುರವ್ವ ಅತ್ತು ಕರದು ...ಕಣಪ್ಪ ಊಟ ಮಾಡು' ಅಂತ ಹೇಳಿ ಕಳಿಸಿದ್ಲಂತೆ. ...ದ್ಯಾವೇಗೌಡ್ರು ಅನಂತಮೂರ್ತಿಗೆ ಫೋನು ಮಾಡಿ, ...ಾಸ ನಿಲ್ಸಕ್ಕೆ ಹೇಳಿ ಗುರುಗಳೆ' ಅಂದರಂತೆ. ಅದ್ಕೆ ...ತಮೂರ್ತಿ ಆಯುರ್ವೇದಿ ದಾಗುಟ್ರು ತರ ಹೋಗಿ ... ರಸ ಕೊಟ್ಟು ಎಳಿಸತ್ಲಗೆ ಕಳಿಸಿದನಂತೆ."

...ಅನಂತಮೂತ್ರಿ ಅಂದ್ರೆ ಅವುನ್ಯಾರ್ಲ?" ಎಂದ

...ಹಿಂದೆ ಕುಮಾರಸ್ವಾಮಿ ನಿನ್ನಂಗೆ ಕೇಳಿದ್ದ ಕಣಮಾವ. ...ತಮೂರ್ತಿ ಅಂದ್ರೆ ಈಗ ಬದುಕಿರೊ ಸಾಯಿತಿಗಳಲ್ಲಿ ...ೀ ಬುದ್ಧಿವಂತನಂತೆ. ಅವುನೊಂದು ಸತಿ ಯಲಕ್ಷನ್ನಿಗೆ ...ಗ ಇದೇ ದ್ಯಾವೇಗೌಡ ಅಪ್ಪ ಮಕ್ಕಳು ಸೇರಿ ...ವಿಸಿದ್ರು. ಅಂಥೋನ್ನ ಕರದು 'ನನ್ನ ಮಗನ ಉಪಾಸ ...ಗುರುಗಳೆ' ಅಂತ ದ್ಯಾವೇಗೌಡ್ರು ಕೇಳಿಕಂಡರಂತೆ. ...ಅನಂತಮೂರ್ತಿ ಹೋಗಿ ಹಣ್ಣಿನ ರಸ ಕುಡಿಸಿ ...ಥವುನಿಗೆ ಉಪವಾಸ ಒಳ್ಳೆದಲ್ಲ, ನೀನು ...ಾರಣದಲ್ಲಿ ಮಾಡಬೇಕಾದ ಕೆಲಸ ತುಂಬ ಅವೆ. ...ಾಗಿ ನಿನ್ನ ಆರೋಗ್ಯವನ್ನ ಸರಿಯಾಗಿಟಕೊಬೇಕು. ...ೀಡು ಎಪ್ಪತ್ತೈದು ವರ್ಷವಾದ್ರು ಹೇಗಿದ್ದಿನಿ. ...ದಂಡನೆ ಒಳ್ಳೆದಲ್ಲ, ಎಡೂರಪ್ಪ ನಿಮ್ಮ ಕುಟುಂಬದ ಬಗ್ಗೆ ಸುಳ್ಳು ಆಪಾದನೆ ಮಾಡಿದ್ರೆ ನೀನೂ ಮಾಡು' ಅಂದರಂತೆ. ಕೂಡ್ಳೆ ಕುಮಾರಣ್ಣ ಎದ್ದು ಎಡೂರಪ್ಪನ ಹಗರಣ ಉಡಿಕ್ಯಂಡು ವಂಟನಂತೆ. ಅಂತು ಒಂದೇ ದಿನಕೆ ಆಮರಣಾಂತ ಉಪವಾಸ ಯಶಸ್ವಿಯಾಯ್ತು ಕಣಮಾವ" ಎಂದ ಉಗ್ರಿ.

"ಕುಮಾರಸ್ವಾಮಿಗೆ ಕುಟುಂಬದ ಮ್ಯಾಲೆ ಭಾಳ ಗೌರವಂತೆ ಕಂಡ್ರ" ಎಂದ ಸೀರ.

"ಊ ಕಣಮಾವ. ಏಟೇ ಆಗ್ಲಿ ದ್ಯಾವೇಗೌಡನ ಮಗಲವೆ. ನೋಡು ದ್ಯಾವೇಗೌಡ, ಈ ಎಡೂರಪ್ಪ ಹಾಸನ ಜಿಲ್ಲೆ ಕಡಿಗಣಿಸ್ಯವುನೆ ಅಂತ ಗೊತ್ತಾದೇಟಿಗೆ ಅವುನು ಒಂದಿನ ಉಪಾಸ ಮಾಡಿದ. ಅಷ್ಟಕ್ಕೇ ಎಡೂರಪ್ಪ ಹೆದ್ರಿಕಂಡು ದ್ಯಾವೇಗೌಡ್ರ ಮನೆತಕ್ಕೆ ಹೋಗಿ ಹಾಸನಕ್ಕೆ ನೂರು ಕೋಟಿ ಕೊಟ್ಟನಂತೆ."

"ನೂರು ಕೋಟಿ ಕೊಟ್ನೆ?" ಎಂದಳು ಜುಮ್ಮಿ.

"ಊ ಕಣೆ. ದ್ಯಾವೇಗೌಡನಿಗೆ ಈ ರಾಜ್ಯದಲ್ಲಿರೊ ಇಪ್ಪತ್ತೆಂಟು ಜಿಲ್ಲೆಗಿಂತ ಹಾಸನ ಕಂಡ್ರೆ ಭಾಳ ಅಭಿಮಾನ. ಅಲ್ಲಿ ಅವುನ ಕಳ್ಳುಬಳ್ಳಿ ಜನಗಳವುರೆ. ಅವುನು ಹಾಸನದೆಂಪಿ. ಮಗ ಹೊಳೆನರಸಿಪುರದ ಲೀಡ್ರು. ಅಂಗಾಗಿ ಕರ್ನಾಟಕ ಏನಾದ್ರೆ ಅವುನಿಗೇನು ಹಾಸನದ ಜನ ಮುಖ್ಯ."

"ದ್ಯಾವೇಗೌಡ ಪ್ರಧಾನಿಯಾಗಿದ್ದೊನು. ಅವುನು ಇಡೀ ರಾಜ್ಯದ ನಿಗಾ ನೋಡಬೇಕೆ ಹೊರತು ಬರೀ ಹಾಸನ ಅಂತ ಹೋರಾಡಬಾರದು ಕಂಡ್ರ" ಎಂದು ಸೀರ ದೇವೇಗೌಡರಿಗೆ ಬುದ್ಧಿ ಹೇಳಿದ ಗತ್ತಿನಲ್ಲಿ ಕೂತ.


"ನಿನ್ನ ವಿವೇಕ ಗೌಡ್ರಿಗಿಲವಲ್ಲ ಹೇಳು. ಆ ಕಾಲದಲ್ಲಿ ಗೌಡ್ರು ವಿರೋಧ ಪಕ್ಷದ ಲೀಡ್ರಾದ್ರೂ ಗುಂಡೂರಾಯನ್ನ ಊರಿಗೆ ಕರಕಂಡೋಗಿ, ಗಾಡಿಮ್ಯಾಲೆ ಮ್ಯರವಣಿಗೆ ಮಾಡಿ, ಹೊಳೆನರಸೀಪುರದ ಕ್ಯಲಸ ಮಾಡಿಸಿಗಂಡಿದ್ರು. ನೋಡೀಗ್ಲು ಅದೇ ಕ್ಯಲಸ ಮಾಡಿದ್ರು. ಅವುರು ಎಡೂರಪ್ಪನ ಮ್ಯಾಲೆ ಮಾಡ್ತಯಿರೊ ಜಗಳ ಸುಳ್ಳು ಕಣಮಾವ. ಅದ ನಿಜ ಅಂತ ತಿಳಕಂಡು ಜೆಡಿಎಸ್ಸು ಬಿಜೆಪಿಗಳು ಕಡದಾಡಿ ಸಾಯ್ತವೆ."

"ಅವುನೇನೊ ಹಾಸನಕ್ಕೆ ನೂರುಕೋಟಿ ಕೊಡಂಗೆ ಮಾಡಿದ. ಈ ನಮ್ಮ ಮಂಡ್ಯಾ ಜಿಲ್ಗೆ ದುಡ್ಡು ಬೇಕಾದ್ರೆ ಏನು ಮಾಡಬೇಕು?" ಎಂದ ಸೀರ.

"ಮಂಡ್ಯ ಜಿಲ್ಗೆ ಯಾಕ್ ಚಿಗಪ್ಪ ದುಡ್ಡು. ನಾವ್ಯಲ್ಲ ಸುಖವಾಗಿದ್ದಿವಿ. ಕೂಲಿಗೆ ಅಂತ ಕರದ್ರೆ ಯಾರೂ ಬರದಿಲ್ಲ. ಬಂದು ಉಂಡೋಗಿ ಅಂತ ಮದುವಿಗೆ ಕರದ್ರೆ ಆಗ್ಲೂ ಬರದಿಲ್ಲ. ಅಲ್ಲಿಗೆ ಜನ ಸುಖವಾಗ್ಯವುರೆ ಅಂತ ಲೆಕ್ಕ" ಎಂದುಕೊಂಡು ವಾಟಿಸ್ಸೆ ಬಂದ.

"ಆದ್ರೂ ಅಭಿವೃದ್ಧಿ ಕ್ಯಲಸ ನಿಂತೋಗ್ಯವೆ ಕಣ್ಲೊ" ಎಂದ ಉಗ್ರಿ.

"ನಿಂತೋಗ್ಯವೆ ಸರಿ. ಅಂಗಂತ ಯಾರ್ನ ಕರದು ಉಪಾಸ ಕೂರಸನ? ಎಸ್ಸೆಂ ಕೃಷ್ಣನ ಕರದಿಯ? ಅವುನ ಕಿವಿ ಇನ್ನೂ ಕೇಳದಂಗಾಯ್ತವೆ. ಇನ್ನ ಅಂಬುರೀಸನ್ನ ಕರದಿಯಾ? ಉಪವಾಸದ ಜಾಗದಲ್ಲೇ ಕುಡುದು ಮನಿಕಂಡ್ರೆ ಏನೀಸಗಂಡೀ? ಇನ್ನು ಚೆಲುವರಾಯಸ್ವಾಮಿಗೆ ಯಾರೂ ಕೇರ್ ಮಾಡದಿಲ್ಲ. ಮಾದೇಗೌಡ್ರು ಕೇಳಿದ್ರೆ ನಮಿಗೆ ಮಾಡಕ್ಕೆ ಬ್ಯಾರೆ ಕ್ಯಲಸವೆ ಅಂತರೆ. ಆದ್ರಿಂದ ಮುಖ್ಯಮಂತ್ರಿಯಾದೋನು ಪಾರ್ಶಾಲಿಟಿ ಮಾಡದಂಗೆ ಯಲ್ಲಾ ಜಿಲ್ಲೆನು ಒಂದೇ ತರ ನೋಡಬೇಕು. ತಾರತಮ್ಯ ಮಾಡಬಾರ್ದು."



"ಇಂತ ವಿವೇಕನ್ಯಲ್ಲ ಹೋಗಿಹೋಗಿ ಎಡೂರಪ್ಪನಿ ಗೇಳ್ತಿಯಲ್ಲೊ ನೀನು. ಅವುನು ಮಾಡ್ತಯಿರೊ ರಾಜಕಾರಣವ ಹಿಂದೆ ಇದೇ ದ್ಯಾವೇಗೌಡ್ರು ಕುಮಾರಸ್ವಾಮಿ ಮಾಡಿ ಮುಗಿಸ್ಯವುರೆ."

"ಅದೇನೊ ನಿಜಬುಡು. ಆದ್ರುವೆ ಕುಮಾರಣ್ಣ ಎಡೂರಪ್ಪನಿಗೆ ಸರಿಯಾಗಿ ನೀರು ಕುಡಿಸ್ತ ಎಡೂರಪ್ಪ ಧರಮುಸ್ಥಳದ ಪ್ರಮಾಣಕೆ ಬರದೆ ತಪ್ಪಿಸಿಗಂಡ. ಕುಮಾರಣ್ಣ ಉಪಾಸ ಕುಂತೇಟಿಗೆ ಬಚ್ಚ ಸೋಮು, ಅಶೋಕನ್ನ ಕಳಿಸಿ ಉಪಾಸ ನಿಲ್ಸಂಗೆ ಮಾಡಿದ. ಅಂತೂ ಎಡೂರಪ್ಪನೆ ಸೋಲ್ತಾ ಅವುನೆ."

"ಈ ನಡುವೆ ಕಾಂಗ್ರೆಸ್ಸಿನವು ಯತ್ಲಗೋದ್ರೊ?"

"ಅವುರಿಗೆ ಏನು ಮಾಡಬೇಕು ಅನ್ನದೇ ಗೊತ್ತಿಲ್ದೆ ಸುಮ್ಮನಾಗಿಬುಟ್ಟವುರೆ ಕಣ್ಲೊ. ಆ ಪಾರ್ಟಿಯ ಆ ದೇವರೇ ಕಾಪಾಡಬೇಕು. ಯಂತ್ಯಂತವ್ರೊ ಅಪಾಪೋಲಿಗಳನ್ನಲ್ಲ ಪದಾಧಿಕಾರಿ ಮಾಡಿದ್ರಿ ಅವುರ ತಗದು ವಳ್ಗೆ ಜನ ಮಾಡಿ ಅಂತ ಹೇಳಿದ್ರೆ ಕಿವಿನೆ ಕೇಳದಂಗೆ ಸುಮ್ಮನಾದ್ರು. ಸದ್ಯಕೆ ಅದು ಕೈ ಪಾರ್ಟಿಯಲ್ಲ ಕಿವುಡ ಪಾರ್ಟಿ ಕಣ್ಲೊ. ಅದ್ಕೆ ಬಿಜೆಪಿಗಳು ಮಾಡಬಾರದ್ದ ಮಾಡಕ್ಕೆ ವಂಟವುರೆ. ಪರೆಗ್ ಜಾಂಪಲ್ ಹೇಳದಾದ್ರೆ ಇಸುಗೂಲಿಗೋಗಿ ಭಗವದ್ ಗೀತೆ ಕಲಸಕ್ಕೆ ಸುರುಮಾಡ್ಯವುರೆ. ಇದಕೇನೇಳ್ತೀ?"

"ನೋಡು ಮತ್ತೆ, ಈ ಬಡ್ಡಿಹೈಕಳ ಇರಕ್ಕೆ ಬುಟ್ರೆ ಇನ್ನು ಏನೇನೊ ಮಾಡ್ತರೆ ಕಣ್ಲೊ."

"ನಮ್ಮೂರಿಗೂ ಅವುನ್ಯಾರೊ ಬಂದಿದ್ದ ಕಂಡ್ರ. ಯರಡ್ನೆ ಮದುವೆ ಮಾಡಸೊ ಕಳ್ಳ ದೊಸರಿದ್ದಂಗಿದ್ದ. ಇಸುಗೂಲಿಗೋಗಿ ಅದೇನೇನೊ ಹೇಳಿಬುಟ್ಟು ಹೋದನಂತೆ" ಎಂದಳು ಜುಮ್ಮಿ.

"ಅವುನು ಬಂದಾಗ ನಾನಿರಬೇಕಿತ್ತು ಕಣಕ್ಕ. ಬವತಾಹನಾಮ ಕಿಂ, ಗ್ರಾಮಸ್ಯ ನಾಮ ಕಿಂ ಅಂತ ಕೇಳಿ ಸೋಲಿಸಿ ಕಳುಸ್ತಿದ್ದೆ."

"ಅಂಗಂದ್ರೇನ್ಲ?"

"ಯಾವೂರು, ಹೆಸರೇನು ಅಂತ ಕಣಕ್ಕ. ಅಲ್ಲಾ ಈ ವಾಟಿಸ್ಸೆ ಇರೊ ಊರಿಗೆ ಭಗವದ್ಗೀತೆ ಹೇಳಿಕೊಡಕ್ಕೆ ಬಂದವುನಲ್ಲಾ ಅವುನಿಗೆ ಎಷ್ಟು ಧೈರ್ಯ ಇರಬೇಕು. ಮದ್ಲೆ ನಮ್ಮುಡಗರಿಗೆ ಹೋಂವರ್ಕ್ ಮಾಡಿಕಳಕ್ಕೆ ಟೈಮಿಲ್ಲ, ಆಟ ಆಡಕ್ಕೂ ಟೈಮಿಲ್ಲ, ಇದರ ನಡುವೆ ಕೃಷ್ಣ ಅರ್ಜುನನಿಗೆ ಹೇಳಿದ ಗೀತೆ ತಂದು ಸಣ್ಣುಡಗರಿಗೆ ಹೇಳಕ್ಕೆ ಬಂದಿದ್ದ ಅಂದ್ರೆ ಯಾವು ಯುದ್ದಕೆ ಹೋಗಬೇಕು ನಮುಡುಗ್ರು? ಹುಡುಗುರ್ನ ವಿದ್ಯಾವಂತ್ರ ಮಾಡಬೇಕೊ ಸೈನಿಕರ ಮಾಡಬೇಕೊ ನೀನೆ ಹೇಳು ದ್ವಡಪ್ಪ" ಎಂದ ವಾಟಿಸ್ಸೆ.

"ಹೇಳಿಕೊಡ್ಲಿ ಬುಡ್ರ. ಈ ನಮುಡುಗ್ರು ಕಲಿಯದು ಆಟ್ರಲ್ಲೇ ಅದೆ. ಮುಂದೆ ಕುರುಕ್ಷೇತ್ರ ನಾಟಕ ಕಲ್ತಾಗ ಬೇಕಾಯ್ತದೆ."

"ಥೂ ದ್ವಡಪ್ಪ ನಾನೋಗಿ ನಿನಿಗೇಳಿದೆ ನೋಡು. ಮುಂದೆ ಸಾಬರು ಕುರಾನ್ ಹೇಳಿಕೊಡಿ ಅಂದ್ರೆ, ಕಿರುಸ್ತಾನ್ರು ಬೈಬಲ್ ಹೇಳಿಕೊಡಿ ಅಂದ್ರೆ ಜಾತ್ಯತೀತ ಸಮಾಜದ ಕತೆ ಏನಾಗಬೇಕು ನೀನೆ ಹೇಳು!"

"!?"


...ೀಗೇ ಜಾರುವ ಕಾಲ

..."ನಿನ್ನಂಥ ಸೋಮಾರಿಗೆ ಕೂಡ ಇದು ಮೈಗಳ್ಳತನ ಅನ್ನಿಸುತ್ತೆ" ಎಂದು ಗೆಳೆಯರೊಬ್ಬರಿಗೆ ಹೇಳಿದಾಗ ಅವರು ...ವು ಸೋಮಾರಿ? ನಿಮ್ಮಂಥ ಸೋಮಾರಿಗಳಿದ್ದರೆ ಇಲ್ಲಿ ಎಲ್ಲ ಸರಿಹೋಗ್ತಿತ್ತು!" ಅಂದರು. ಅವರ ಪ್ರಕಾರ ನಾನು ...ಷವನ್ನು ಕೂಡ ಪೋಲು ಮಾಡದೆ ಕೆಲಸ ಮಾಡುವ ವ್ಯಕ್ತಿ. ನನಗೆ ನನ್ನ ಎಲ್ಲ ಸಾಹಿತ್ಯೇತರ ಕೆಲಸಗಳಿಗೆ ಹೇಗೆ ... ಸಿಗುತ್ತೆ ಅನ್ನುವುದೇ ಅವರ ಸೋಜಿಗ. ಅವರೆನ್ನುವುದು ನಿಜ. ...ಮ ರೀತಿಯಲ್ಲಿ ನಾನು ಜೇನ್ನೊಣದಂತೆ ಚುರುಕು, ಇನ್ನೊಂದು ರೀತಿಯಲ್ಲಿ ...ಾ ನಿಧಾನ. ಬೆಳಗ್ಗೆ ಐದು ಗಂಟೆಗೇ ಎಚ್ಚರವಾಗುತ್ತದೆ. ಎದ್ದು ನೋಡಿದರೆ ... ಮೋಡಗಳು. ತಣ್ಣನೆಯ ಗಾಳಿ, ಕತ್ತಲು. ರಾತ್ರಿ ಮಳೆ ಬಂದಿರಬಹುದೇ ...ಮು ಆಸೆಯಿಂದ ಅಲ್ಲಲ್ಲಿ ಉರಿಯುತ್ತಿರುವ ಬೀದಿದೀಪದ ಕೆಳಗೆ ...ಡುತ್ತೇನೆ. ತೇವ ಅನ್ನುವುದೇ ಇಲ್ಲ, ರಸ್ತೆ ಧೂಳುಧೂಳಾಗಿ ಒಣಗಿಕೊಂಡಿದೆ. ... ರಾತ್ರಿ ಮಲಗುವಾಗ 'ನಾಳೆ ನನ್ನ ಜೀವನಚರಿತ್ರೆಯಲ್ಲಿ ನಾನು ...ಸೂರಲ್ಲಿದ್ದದ್ದರ ಬಗ್ಗೆ ಬರೀಬೇಕು. ಅದು distinct ಆಗಿ ಮೈಸೂರು ...ಸಬೇಕು. ಅಲ್ಲಿ ನಾನು ಕಂಡ ಎಲ್ಲ ವೈಶಿಷ್ಟಗಳು, ಹಳೇ ಸ್ನೇಹಿತರು, ...ಾಲಯ, ಚಾಮುಂಡಿ ಬೆಟ್ಟ, ಬನ್ನಿ ಮಂಟಪ...' ಎಂದು ನೆನೆಸಿಕೊಂಡೆ. ...ಗ್ಗೆ ಎದ್ದಾಗ ಮೇಜಿನತ್ತ ಕಣ್ಣು ಹಾಯಿಸಿದೆ. ಇವತ್ತು ಮಂಗಳವಾರ. ...ಕೆ' ಇವತ್ತು ಹೊರಬಂದಿದೆ. ಕಚೇರಿಯಲ್ಲಿ ಕೆಲಸವಿಲ್ಲ. ಇವತ್ತಾದರೂ ...ಬದುಕಿನ ನೆನಪುಗಳನ್ನು ಬರೆಯಬೇಕು. 170 ಪುಟ ಆಗಿದೆ; ನನ್ನ ...ೃ ಮುಗಿದಿದೆ. ಅಲ್ಲಿ ಕೂಡ ಕೆಲವು ಬಿಟ್ಟುಹೋದ ನೆನಪುಗಳು ...ಗುತ್ತಿದೆ. ಪರವಾಗಿಲ್ಲ, ಮಹಾರಾಜಾ ಕಾಲೇಜಿನಲ್ಲಿ ಓದುತ್ತಿದ್ದಾಗ ...ನಾಯಿತು ಎಂದು ಯೋಚಿಸಿದೆ. ಐದೂವರೆ ಆಯಿತು. ಐದೂ ...ಕ್ಕಾಲು, ಮನಸ್ಸು ಸುಮ್ಮನೇ ಅಲೆಯುತ್ತಿದೆ; ಮೈಸೂರನ್ನು ನೆನೆಸಿಕೊಳ್ಳುತ್ತಿಲ್ಲ, ...ಶಿಪುರಂನಿಂದ ಹೊರಟು... ನರಸಿಂಹಯ್ಯ ಎಂಬ ಪ್ರೊಫೆಸರ್ ಇದ್ದಿದ್ದನ್ನು ...ಮ, ಅವರ ಕಾಂಪೌಂಡಿನಲ್ಲಿ ನಾನು ಒಮ್ಮೆ ಐದೂಮುಕ್ಕಾಲಿಗೆ ಹೋಗಿದ್ದನ್ನು ...ಸಿಕೊಂಡೆ. ನರಸಿಂಹಯ್ಯನವರಿಗೆ ನನ್ನನ್ನು ನೋಡಿ ಖುಷಿಯಾಗಲಿಲ್ಲ, ನನ್ನಲ್ಲಿದ್ದ ಪ್ರಶ್ನೆಗಳು ಅವರಿಗೆ ...ುವಾಗುವಂತಿರಲಿಲ್ಲ, 'ಸಾರ್ ನಾನು ತುಂಬ ಕಷ್ಟಪಟ್ಟು ಓದಬೇಕೆಂದಿದ್ದೇನೆ.' 'ನಿನಗೆ ಯಾವ ಇಂಗ್ಲಿಷ್ ಸಾಹಿತಿ ...?' 'ನಾನು ತುಂಬ ಇಷ್ಟಪಡೋದು ಇ.ಎಂ. ಫಾರ್‌ಸ್ಟರ್‌ನನ್ನು ಸಾರ್. ಜಾನ್‌ಸನ್ ಪರವಾಗಿಲ್ಲ, ಜೇನ್ ಆಸ್ಟೆನ್ ...ಗೆ ತುಂಬ ಬೋರ್ ಸಾರ್.' 'ನೀನು ಲಾರೆನ್ಸ್‌ನನ್ನ ಓದಿಲ್ಲವೆ?'



ಅಷ್ಟಕ್ಕೆ ನೆನಪು ಕತ್ತರಿಸಿತು. ವಾಕ್ ಹೊರಡಬೇಕಿತ್ತು, ಎಷ್ಟೇ ಪ್ರಯತ್ನಿಸಿದರೂ ನರಸಿಂಹಯ್ಯನ ಗೌನ್, ಅವನ ಫಾರಿನ್ ಬೂಟ್ಸ್, ನಿಷ್ಕಾರಣವಾಗಿ 'ಕಿಕ್' ಅಂತ ಅವನು ನಗುತ್ತಿದ್ದುದು-ಇದನ್ನು ಬಿಟ್ಟು ಮುಂದಕ್ಕೆ ಹೋಗದಿರುವ ನನ್ನ ಮನಸ್ಸು. ಆತನೊಬ್ಬ ಬೋಗಸ್ ಫೆಲೋ ಎಂದು ನನ್ನ ಮನಸ್ಸಿನಲ್ಲಿ ನೆಟ್ಟುಹೋಗಿತ್ತು. ಗೆಳೆಯರು ಆತನನ್ನು ತುಂಬ ಇಷ್ಟಪಡುತ್ತಿದ್ದರು. 'ತುಂಬಾ ಚೆನ್ನಾಗಿ ಪಾಠ ಮಾಡ್ತಾರೆ' ಅನ್ನುತ್ತಿದ್ದರು. ಆದರೆ ನನ್ನ ಹೃದಯಕ್ಕೆ ಆತ ಹೋಗಲೊಲ್ಲ, ನನ್ನಿಂದ ಗುರು ಅನ್ನಿಸಿಕೊಳ್ಳಲು ಆಗಲಿಲ್ಲ, ಅಲ್ಲದೆ ಆತ ನನಗೆ ಅವಮಾನ ಮಾಡಿದ್ದ. ನನ್ನ ಕೈಲಿದ್ದ ಬಿಳಿಹಾಳೆಗಳನ್ನು ಇಸಿದುಕೊಂಡು ಏನಿದು? **Dissertation** ನ ಟಿಪ್ಪಣಿಗಳ? ಅರೆ, ನಿನಗೆ ಪಿನ್ ಹಾಕೋದಕ್ಕೆ ಕೂಡ ಬರೋಲ್ಲವಲ್ಲ! ಈ ಇಂಗ್ಲಿಷ್ ಪದದ ಸ್ಪೆಲಿಂಗ್ ಹೀಗಲ್ಲ, ಹುಡುಗರು ಎಷ್ಟು ಕೆಟ್ಟುಹೋಗಿದ್ದಾರೆ! ಅವರಿಗೆ ಎಲಿಮೆಂಟರಿ ವಿಷಯ ಗೊತ್ತಿಲ್ಲ!' ಅಂತ ನನಗೇ ಹೇಳಿಬಿಟ್ಟಿದ್ದ. ನಾನು ನರಸಿಂಹಯ್ಯನಲ್ಲಿಗೆ ಬಂದದ್ದೇ ಬೇರೆ ಕಾರಣಕ್ಕೆ. 'ಸಾರ್, ನನಗೆ ಮಹಾರಾಜಾ ಕಾಲೇಜ್ ಹಾಸ್ಟೆಲ್‌ನಲ್ಲಿ ಒಂದು ಸೀಟ್ ಬೇಕು' ಅದನ್ನು ಹೇಳಲಾಗಲಿಲ್ಲ, ಸೀಟ್ ಅನ್ನಬೇಕೋ ರೂಮ್ ಅನ್ನಬೇಕೋ ಕಾಟ್ ಅನ್ನಬೇಕೋ ಎಂದು ಗೊಂದಲಗೊಂಡು ಆತ ಕೊರೆಯುತ್ತಿದ್ದದನ್ನೆಲ್ಲ ಕೇಳಿದೆ.....


ಇಡೀ ಮಂಗಳವಾರ ಫ್ರೆಂಚ್ ಸಾಹಿತಿ ಸಾರ್ತ್ರ್‌ನ ಹೆಂಗಸಿನ ಒಂದು ಕಾದಂಬರಿ ಓದಿದೆ. ತುಂಬ ಚೆನ್ನಾಗಿತ್ತು. ಆಮೇಲೆ ಗಾಂಜಾ ಕುರಿತು, ಹಿರಾಯಿನ್ ಕುರಿತು ಒಂದಷ್ಟು ಓದಿದೆ. ಸಂತರು, ಸನ್ಯಾಸಿಗಳು ಗಾಂಜಾ ಸೇದುತ್ತಾರಂತೆ, ಅವರ ದರ್ಶನಕ್ಕೆ ಅದೇ ಕಾರಣವಂತೆ. ಹಾಗಾದರೆ ವ್ಯಾಸ ಸ್ಫೂರ್ತಿಗಾಗಿ ಗಾಂಜಾ ಸೇದಿರಬಹುದೆ-ಎಂದುಕೊಂಡು ಕನ್ನಡ ಪುಸ್ತಕವೊಂದನ್ನು ಓದುವ ಆಸೆಯಾಗಿ ಪಂಡಿತ ತಾರಾನಾಥರ 'ಧರ್ಮಸಂಭವ' ತೆಗೆದುಕೊಂಡು ನೋಡತೊಡಗಿದೆ. ಅದನ್ನು ಪ್ರಕಟಿಸಿದವನ ಹೆಸರು ವಿಚಿತ್ರವಾಗಿತ್ತು. 'ಧರ್ಮಸಂಭವ'ದ ನಾಲ್ಕು ಸಾಲು ಓದಿ 'ದೊಡ್ಡ ರಗಳೆ' ಎಂದುಕೊಂಡು ಸುಮ್ಮನೆ ಕೂತು ಮತ್ತೆ ಗತಕಾಲದ ಮೈಸೂರಿನ ಬಗ್ಗೆ ಯೋಚಿಸಿದೆ. ಶೀಲಾ ಎಂಬ ಹುಡುಗಿ ಮತ್ತೆಮತ್ತೆ ನೆನಪಾದಳು. ಹಸಿರು ಸೀರೆ ಉಡುತ್ತಿದ್ದಳು. ಕೆನ್ನೆಯಲ್ಲಿ ಗುಳಿ ಬರುತ್ತಿತ್ತು, ಸೋಶಿಯಾಲಜಿ ಓದುತ್ತಿದ್ದಳು. ಆಕೆ ಈಗ ಏನು ಮಾಡುತ್ತಿರಬಹುದು ಎಂದು ಯೋಚಿಸಿದೆ.... ಅವತ್ತು ನೆನಪಿನ ಪುಟಗಳಲ್ಲಿ ಒಂದನ್ನೂ ಬರೆಯಲಾಗಲಿಲ್ಲ.



ಬರೆಯುವುದಕ್ಕೆ ವೇಳೆ ಇದ್ದರೆ ಸಾಲದು. ಸ್ಫೂರ್ತಿ ಇದ್ದರೆ ಸಾಲದು. ವಿಷಯಗಳಿದ್ದರೆ ಸಾಲದು... ಬರೆಯುವ ಪ್ರೀತಿ, ಸರಳ ಅಕ್ಕರೆ ಬೇಕು. ನರಸಿಂಹಯ್ಯ ಮತ್ತು ಅಕ್ಕರೆ-ಎಂದುಕೊಂಡು ಬೆಲ್ ಹೊಡೆದು ಕಾರಲ್ಲಿ ಕೂತೆ. ಈಗ ಮನೆಗೆ.... ನಾಳೆ ಏನೇನು ಬರೆಯಬೇಕು ಎಂದು ಚಿಂತಿಸುತ್ತಾ ನಿಟ್ಟುಸಿರುಬಿಟ್ಟೆ.

-ಜುಲೈ 26, 1995

ಒಳ್ಳೆ ಪೀಸ ಹಾಕ್ಲ ಮಗ



ಎಚ್.ಎಲ್. ಕೇಶವಮೂರ್ತಿ

ಅಣಕ

ಕ್ಯಾತೇಗೌಡರು ಊರಿನ ಗಣ್ಯಾತಿಗಣ್ಯರು. ಘನ, ಗಂಭೀರ ವ್ಯಕ್ತಿತ್ವ ಹೊಂದಿರುವಂತಹವರು. ಬಹಳ ಸಂಭಾವಿತರು. ಎಲ್ಲಿಯೂ ತಮ್ಮ ಘನತೆ ಮೀರಿ ನಡೆದವರೇ ಅಲ್ಲ. ಸಾಮೂಹಿಕ ಭೋಜನಕೂಟಗಳಲ್ಲಂತೂ ತಮಗಾಗಿ ಯಾವುದೇ ವಿಶೇಷ ಪದಾರ್ಥವನ್ನೂ ಬಯಸಿದವರಲ್ಲ. ಬೀಗರ ಊಟ ಅಂದರೆ ಈ ಸುತ್ತಿನಲ್ಲಿ 'ಪೆಸೆಲ್' ಎಂದು ಎಳೆಯ ಮಗುವಿಗೂ ತಿಳಿದಿರುವ ಸಂಗತಿ. ಅಲ್ಲಿಯೂ ಅದೇ ಪದ್ಧತಿ ಅನುಸರಿಸುತ್ತಿದ್ದರು. ಊಟಕ್ಕೆ ಪಂಕ್ತಿಯಲ್ಲೇ ಕೂರುತ್ತಿದ್ದರು. ಒಡಿಸಿದ ಪದಾರ್ಥಗಳ ರುಚಿ ನೋಡಿದ ನಂತರ ಪಕ್ಕದಲ್ಲಿರುತ್ತಿದ್ದ ಗೆಳೆಯನನ್ನು ಕೇಳುತ್ತಿದ್ದರು- 'ಹೆಂಗದೆ ಚಾಪೀಸು?'

'ಚೆಂದಾಗದೆ ಗೌಡ್ರೆ.'

'ಮಗಾ ಯಾರ್ಲ, ಚಾಪೀಸ್ನೋನು, ಬಾ ಇಲ್ಲಿ' ಗೌಡರ ಕೂಗು. ಚಾಪ್ಸ್ ಬಡಿಸುತ್ತಿದ್ದವನು ಓಡೋಡಿ ಬರುವನು.

'ಇವ್ರು ಚಾಪೀಸು ಚೆನ್ನಾಗದೆ ಅಂತವ್ರೆ. ಕೇಳಾಕೆ ನಾಚ್ಕತಾರೆ. ಒಂದು ಒಳ್ಳೆ ಪೀಸಿದ್ರೆ ತಂದಾಕು.'

ಗೌಡರ ಮಾತು. ಓಡಿಹೋಗಿ ಚಾಪ್ಸ್ ಬಕೀಟು ತರುವನು.

'ವಯಸ್ಸಾದೋರು, ಕಂಡದಂತದ್ದ ಹಾಕು.'

ಗೌಡರ ಮಾತು ಆಜ್ಞೆ ಇದ್ದಂತೆ. ಹಾಗೇ ಮಾಡುವನು.

'ಈ ಪೀಸ್ ಹೆಂಗಿದ್ದತ್ತು?' ಗೌಡರ ಪ್ರಶ್ನೆ.

'ಐಕ್ಲಾಸಾಗದೆ ಗೌಡ್ರೆ.'

'ಹಂಗಂತೀಯಾ. ಲೋ ಮಗಾ, ಅದೇನೋ ಚಾಪೀಸು ಐಕ್ಲಾಸಾಗದೆ ಅಂತವ್ರೆ ಅಂತದೇ ಪೀಸ ಇಲ್ಲೊಂದಾಕ್ಲ'

ಎಲೆಗೆ ಬಿದ್ದ ಚಾಪ್ಸ್ ಅನ್ನು ಕೈ ಬೆರಳಲ್ಲಿ ಹಿಸುಕಿ ಪರೀಕ್ಷಿಸುವರು.

'ಬರೀ ಮೂಳೇನೆ ಬಿದ್ದದೆ. ಬಾಯಿಗೆ ಹಾಕಿದ್ರೆ ಹಂಗೇ ಕರಗೋಗಿಬಿಡಬೇಕು ಅಂತ ಪೀಸ್ ಹಾಕ್ಲ.'

ಇದು ಘನತೆವೆತ್ತ ಗೌಡರ ರೀತಿ!

ಗೌಡರ ಈ ರೀತಿ ನೆನಪಾದದ್ದು ಯಾಕೆ ಅಂದರೆ....

ಬ್ರಿಟನ್ನಿನ ಪ್ರಧಾನಿ ಬೆಂಗಳೂರಿಗೆ ಬಂದಿದ್ದರಂತೆ. ಅಧಿಕಾರದಲ್ಲಿರೋರ್ಗೆ ಎಲ್ಲೆಲ್ಲೂ ಶತ್ರುಗಳೇ ಇರ್ತಾರೆ ಅನ್ನೊ ಭ್ರಮೆ ಇರುತ್ತೆ ಬಲವಾದ ಭದ್ರತೆ ಇಟ್ಟುಕೊಂಡೇ ಓಡಾಡ್ತಾರೆ. ಇಲ್ಲಿಗೆ ಬಂದಾಗಲೂ ಹಾಗೇ ಮಾಡಿಕೊಂಡಿದ್ದರಂತೆ. ಆದರೆ ಅವರ ಓಡಾಟಕ್ಕೆ ಒದಗಿಸಿದ್ದ ಗುಂಡು ನಿರೋಧಕ ಕಾರು 'ಲಡ್ಕಾಸಿ' ಅನ್ನಿಸ್ತಂತೆ ಅವರ ಸಿಬ್ಬಂದಿಗೆ. ಇಲ್ಲೇನೂ ಮಾತಾಡ್ಲಿಲ್ಲವಂತೆ. ವಾಪಸ್ಸು ಇಂಗ್ಲೆಂಡಿಗೆ ಹೋದ ಮೇಲೆ ಅಂತಹ ತರಕ್ಲಾಂಟಿ ಕಾರು ಕೊಡ್ತೀರಿ ಅಂತ ತಿಳಿದಿದ್ರೆ



ಇಲ್ಲಿಂದ್ಲೇ ಕಾರು ತಗೊಂಡು ಬರ್‍ತಿದ್ವೊ ಅಂತ ಜಾಡಿಸಿ ರಾಷ್ಟ್ರಪತಿಗಳಿಗೆ ಪತ್ರ ಬರೆದರಂತೆ. ಅವರಿಗೆ ಈ ಪತ್ರ ನೋಡಿ ಭಾರೀ ಅವಮಾನ ಆದಂಗೆ ಆಯ್ತಂತೆ. ಕೇಂದ್ರದಲ್ಲಿರೋ ಯುಪಿಎ ಸರ್ಕಾರಕ್ಕೆ ಅವಮಾನ ಮಾಡಕ್ಕೆ ಅಂತಾನೆ ರಾಜ್ಯದ ಬಿಜೆಪಿ ಸರ್ಕಾರ ಹಿಂಗೆ ಮಾಡದೆ. ಇಲ್ಲದೆ ಇದ್ರೆ ಅತಿಗಣ್ಯರಿಗೆ ಹೀಗೆ 'ಲಡಾಸ್' ಕಾರು ಕೊಡಲು ಬೇರೆ ಕಾರಣವೇ ಇಲ್ಲ ಎಂದು ಭಾವಿಸಿರಬಹುದು. ಅವರ ಕಾರ್ಯಾಲಯ ಗುಂಡು ನಿರೋಧಕ ಐಷಾರಾಮಿ ಕಾರ್ ಖರೀದಿಸಿ ವಿದೇಶಿ ಗಣ್ಯರ ಸಲುವಾಗಿಯೇ ಮೀಸಲಿಡಬೇಕು ಎಂದು ಪತ್ರ ಬರೆಯಿತಂತೆ. ರಾಷ್ಟ್ರಪತಿ ಕಾರ್ಯಾಲಯದ ಪತ್ರ ಅಂದಮೇಲೆ ಅದಕ್ಕೆ ಕೊಡಬೇಕಾದ ಮರ್ಯಾದೆ ಸಲ್ಲಿಸಲೇಬೇಕು. ಯಡ್ಯೂರಪ್ನೋರ ಸರ್ಕಾರ ಇದನ್ನ ಗಂಭೀರವಾಗಿ ಪರಿಗಣಿಸಿತಂತೆ. ಅದು 'ಅವರು ಮಾತ್ರ ಗಣ್ಯರಾ? ಅವರಿಗೇ ಪ್ರಾಣ ಬೆದರಿಕೆ ಇರೋದು? ನಂ ಸಾಹೇಬರಿಗೇನು ಇಲ್ವ? ಅವರಿಗೂ ಒಂದಿರ್ಲಿ' ಎಂದಿರಬೇಕು. ಯಡ್ಯೂರಪ್ನೋರು ಹೆಂಗೋ ನಿಮಗೆ ತಿಳಿದಂಗೆ ಮಾಡ್ರಪ್ಪ' ಅಂದಿರಬೇಕು. ಆಮೇಲೆ ರಾಜ್ಯಪಾಲರು ಸರ್ಕಾರ ಕಂಡರೇ ಸಿಡಿಸಿಡಿ ಅಂತಾರೆ. ಹೀಗಾದರೂ ಪೂಸಿ ಹೊಡೆಯೋಣ ಎಂದು 'ಅವರ್ಗೂ ಒಂದು ತಕ್ಕಳಿ' ಅಂದಿರಬೇಕು. ಈಗ್ಗೆ ಐವತ್ತು ವರ್ಷಗಳ ಹಿಂದೆ ಜಡ್ಜ್‌ಗಳಿಗೆ ದೇವಸ್ಥಾನಗಳಲ್ಲಿ ಪ್ರಸಾದ ನೀಡಲು ಬಂದರೂ ತೆಗೆದುಕೊಳ್ಳಲು ಹಿಂದೆಮುಂದೆ ನೋಡುತ್ತಿದ್ದರಂತೆ. 'ಇದೇನು ಪ್ರಸಾದ ಲಂಚಾನಾ' ಅಂತ ಕೇಳುತ್ತಿದ್ದರಂತೆ. ಪ್ರಸಾದ ಕೊಟ್ಟವನ ಮೇಲೇ ಅನುಮಾನ ಪಡುತ್ತಿದ್ದರಂತೆ. ಕೊಡದೇ ಇದ್ದರೇ ಕೋಪ ಮಾಡ್ಕೊಳ್ಳೋ ಕಾಲ ಇದು. ಅದ್ಕೇ ಅವರ್ಗೂ ಬಂದಿರ್ಲಿ ಅಂದಿರಬೇಕು. ಹಿಂಗಾಗಿ ಘನ ಸರ್ಕಾರ ಮೂರು ಬಿಎಂಡಬ್ಲ್ಯೂ ಗುಂಡು ನಿರೋಧಕ ಐಷಾರಾಮಿ ಕಾರುಗಳ ಖರೀದಿಸಲು ಮುಂದಾಗಿದೆಯಂತೆ. ಒಂದೊಂದು ಕಾರಿಗೂ 2 ರಿಂದ ಮೂರು ಕೋಟಿ ಆಗುತ್ತಂತೆ ಅಷ್ಟೆ!

ಈ ಸರ್ಕಾರದ ಸ್ಥಿತಿ ಹೇಗಾಗಿದೆ ಅಂದ್ರೆ ಎಲ್ಲಿ ಲಂಚ ಹೊಡುದ್ರು ಅಂದ್ರೂ ಜನ ನಂಬುವ ಹಾಗೆ ಆಗಿದೆ. ವಿಪಕ್ಷದೋರು ಕಾರು ಖರೀದೀಲಿ ಇಷ್ಟು ಕಮೀಷನ್ ಹೊಡ್ದವ್ರೆ ಅಂದ್ರೂ ನಂಬ್ತಾರೆ. ಇದ್ನೆಲ್ಲ ಕೇರ್ ಮಾಡಲ್ಲಬಿಡಿ ಯಡ್ಯೂರಪ್ನೋರು. ಅನುಭವಸ್ಥರು ಅವರು. ವಿಪಕ್ಷ ನಾಯಕರ ಬಾಯಿಗೂ ಒಂದು ಕಾರ ಹಾಕಿ ಬಾಯಿ ಬಂದ್ ಮಾಡ್ತಾರೆ!

ಇದು ಆಗಬಹುದಾ?

ಕೇರಳದ ತಿರುವನಂತಪುರದ ಪದ್ಮನಾಭಸ್ವಾಮಿ ತಿರುಪತಿ ವೆಂಕಟೇಶ್ವರನಿಗೆ ಸೈಡ್ ಹೊಡೆದಿದ್ದಾನಂತೆ. ಈ ಅಗಾಧ ಸಂಪತ್ತು ಯಾರಿಗೆ ಸೇರಬೇಕು ಎನ್ನುವ ಚರ್ಚೆ ಪ್ರಾರಂಭ ಆಗಿದೆ. ಇದನ್ನು ಜತನವಾಗಿ ಕಾಪಾಡಿದ ರಾಜವಂಶಸ್ಥರಿಗೆ ಸೇರಬೇಕು ಎನ್ನುವುದು ಕೆಲವರ ವಾದ. ಉಂಟೇ ಉಂಟೇ ಇದು ದೇವರಿಗೆ ಸೇರಿದ್ದು ದೇವಾಲಯದಲ್ಲೇ ಇರಬೇಕು ಎನ್ನುವುದು ಕೆಲವರ ನಂಬಿಕೆ. ಇಲ್ಲ ಇಲ್ಲ, ದೇವಾಲಯಗಳು ಎಂದರೆ ದೇಶದ ಖಜಾನೆಗಳು. ಅದು ಜನರ ಸ್ವತ್ತು, ಸರ್ಕಾರ ಅದನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಅನ್ನೋದು ಹಲವರ ವಾದ. ದೇವಸ್ಥಾನದಲ್ಲಿ ಸಿಕ್ಕಿರುವುದು ನಿಧಿಯಲ್ಲ ಪೂರ್ವಜರ ಸಂಪತ್ತು, ಪದ್ಮನಾಭನ ಹೆಸರಿನಲ್ಲಿ ಆಡಳಿತ ನಡೆಸುತ್ತಿದ್ದುದರಿಂದ ಅದು ಅವನಿಗೇ ಸೇರಿದ್ದು ಅಂತಾನೂ ಹೇಳುವವರಿದ್ದಾರೆ.

ಈ ನಡುವೆ ಇನ್ನೊಂದು ಗುಂಪು ಒಂದು ದೇವಾಲಯದಲ್ಲಿಯೇ ಇಷ್ಟೊಂದು ಸಂಪತ್ತು ಸಂಗ್ರಹವಾಗಿರಬೇಕಾದರೆ ದೇಶದ ಎಲ್ಲಾ ದೇವಾಲಯಗಳಲ್ಲಿಯೂ ಇನ್ನು ಎಷ್ಟು ಸಂಪತ್ತು ಇರಬಹುದು? ಚಿನ್ನ ದೇಶದ ಶ್ರೀಮಂತಿಕೆಯ ಮಾಪಕ. ಇದರಂತೆ ಇಡೀ ಪ್ರಪಂಚದಲ್ಲಿಯೇ ಅತಿ ಶ್ರೀಮಂತ ದೇಶ ಭಾರತ ಅಂದ ಹಾಗಾಯಿತು. ಆದರೂ ಬಡವರ ಸಂಖ್ಯೆ ಮಿತಿಮೀರಿದೆ. ಈ ಸಂಪತ್ತಿನ ಬಳಕೆ ಬಡತನ ನಿರ್ಮೂಲನಕ್ಕೆ ಮೀಸಲಿಡಬೇಕು. ಆದುದರಿಂದ ಸರ್ಕಾರ ಎಲ್ಲ ದೇವಸ್ಥಾನಗಳ ಸಂಪತ್ತನ್ನು ಮುಟ್ಟುಗೋಲು ಹಾಕಿಕೊಂಡು ಜನರ ಒಳಿತಿಗಾಗಿ ಬಳಸಲಿ ಎನ್ನುವುದು ಕೆಲವರ ವಾದ.

ದೇವರು, ದೇವಸ್ಥಾನ ಅಂದರೆ ಅಧಿಕೃತ ಮುದ್ರೆ ಬೀಳಬೇಕಾಗಿರುವುದು ಕಾವಿಧಾರಿಗಳಿಂದ. 'ಏನು ಸ್ವಾಮಿ ಹೀಗೆ ಮಾಡಬಹುದೆ' ಎಂದರೆ ಅವರು 'ಕೂಡದು, ಕೂಡದು. ಇದು ದೇವರ ಸೇವೆಗೆ ಮುಡುಪಾಗಿರುವ ಹಣ' ಎಂದು ಖಂಡಿತ ಹೇಳುತ್ತಾರೆ. ಅವರಿಗೂ ಭಯ ಪಾಪ, 'ಆಗಲಿ' ಎಂದರೆ ಮುಂದೆ 'ಮಠ'ಗಳ ಸಂಪತ್ತೆಲ್ಲವೂ ಸರ್ಕಾರಕ್ಕೆ ಸೇರಲಿ' ಎನ್ನಬಹುದು!

ಇದು ಹೇಗಾದರೂ ಇರಲಿ. ಸರ್ಕಾರಕ್ಕೆ ಸೇರಬೇಕು ಎಂದರೆ ಸಂಸತ್ತಿನ ಒಪ್ಪಿಗೆಬೇಕು. ಅವರಲ್ಲಿ ಆಸ್ತಿಕರೂ ಇದ್ದಾರೆ, ನಾಸ್ತಿಕರೂ ಇದ್ದಾರೆ. ಒಂದು ಗುಂಪುವ 'ಒಪ್ಪಿಗೆ' ಎಂದರೆ ಇನ್ನೊಂದು 'ಇಲ್ಲ' ಅನ್ನುತ್ತೆ. ಜನಪ್ರತಿನಿಧಿಗಳು ಅಂದರೆ ಸರ್ಕಾರ. ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಲಿ ಎನ್ನುವುದರ ಬದಲು ಈ ಸಂಪತ್ತನ್ನು ಎಲ್ಲಾ ಜನಪ್ರತಿನಿಧಿಗಳೂ ಹಂಚಿಕೊಳ್ಳಲಿ' ಎಂದರೆ.... ಆಸ್ತಿಕರು ನಾಸ್ತಿಕರೂ ಎಲ್ಲ ಕೈಜೋಡಿಸಿ 'ಹೂಂ' ಎನ್ನುವುದು ಖಚಿತ! ಹೀಗೆ ಮಾಡಬಹುದಾ ಎಂಬುದು ಒಬ್ಬರ ಸಲಹೆ ಅಷ್ಟೆ!

ಹಿಂದೂ ದೇವಸ್ಥಾನಗಳ ಆಸ್ತಿಯಿಂದ ಹಿಂದೂಗಳಿಗೆ ಯಾವ ಪ್ರಯೋಜನವೂ ಇಲ್ಲ!

ಮಾನವನು ತನ್ನೆಲ್ಲ ವೀಕ್‌ನೆಸ್‌ಗಳನ್ನು ದೇವರಿಗೂ ಆರೋಪಿಸಿ ಅದರಂತೆ ವರ್ತಿಸುತ್ತಾನೆ ಹಾಗೂ ತನ್ನಂತೆ ದೇವರೂ ರಸಿಕ, ಸಂಪತ್ತಿನ ಆಸೆಯುಳ್ಳವ ಎಂದೆಲ್ಲಾ ಭಾವಿಸುತ್ತಾನೆ. ತಾನೇ ಸೃಷ್ಟಿಸಿದ ಚಿನ್ನ-ವಜ್ರಗಳ ಆಸೆ ದೇವರಿಗೆ ಇದ್ದಿದ್ದೇ ಆಗಿದ್ದರೆ ಕಬ್ಬಿಣ ಗಣಿಗಳ ಬದಲಿಗೆ ಚಿನ್ನದ ಗಣಿಗಳನ್ನೂ, ಕಲ್ಲಿದ್ದಲು ಗಣಿಗಳ ಬದಲಿಗೆ ವಜ್ರದ ಗಣಿಗಳನ್ನೇ ದೇವರು ಸೃಷ್ಟಿಸುತ್ತಿರಲಿಲ್ಲವೇ?

ಭಾರತದ ದೇವಸ್ಥಾನಗಳಲ್ಲಿ ಹುದುಗಿರುವ ಚಿನ್ನವನ್ನೆಲ್ಲಾ ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡು ಮಾರುಕಟ್ಟೆಗೆ ಬಿಡುಗಡೆ ಮಾಡಿದರೆ, ಇನ್ನು 10 ವರ್ಷ ಭಾರತ ಚಿನ್ನವನ್ನು ಆಮದು ಮಾಡಬೇಕಾಗಿಯೇ ಇಲ್ಲ, ಇದರಿಂದ ಅಮೂಲ್ಯ ವಿದೇಶಿ ವಿನಿಮಯ ಉಳಿತಾಯವಾಗುತ್ತದೆ. ಜೊತೆಗೆ ಚಿನ್ನದ ದರ 30% ಆದರೂ ಇಳಿಯುತ್ತದೆ. ಸರ್ಕಾರದ ಅಭಿವೃದ್ಧಿ ಕಾರ್ಯಗಳಿಗೆ ದೇವಸ್ಥಾನಗಳ ಠೇವಣಿಯೂ ಲಭ್ಯವಾಗುತ್ತಿತ್ತು, ಈಗ ದೇವಸ್ಥಾನಗಳಲ್ಲಿ ಶೇಖರವಾಗಿರುವ ಸಂಪತ್ತೆಲ್ಲಾ ಅನುತ್ಪಾದಕ ಆಸ್ತಿ, ಅದರಿಂದ ಸಮಾಜಕ್ಕೆ ಯಾವ ಉಪಯೋಗವೂ ಇಲ್ಲ.

ಛತ್ರಪತಿ ಶಿವಾಜಿಯು ತನ್ನ ಅಣ್ಣನೊಡನೆಯೇ ವೈಮನಸ್ಸು ಹೊಂದಿದ್ದು, ಅಣ್ಣಾ ಏಕೋಜಿ ಭೋಸಲೆ ಆಳುತ್ತಿದ್ದ ಬೆಂಗಳೂರಿನ ಮೇಲೆ ದಂಡೆತ್ತಿ ಬಂದು ಒಪ್ಪಂದ ಮಾಡಿಕೊಂಡು ಹಿಂತಿರುಗುತ್ತಿದ್ದಾಗ ಶೃಂಗೇರಿಯ ಹತ್ತಿರ ಬಂದನಂತೆ. ಆಗ ಆ ಮಠದಲ್ಲಿ ಶೇಖರವಾಗಿದ್ದ ಅಗಾಧ ಸಂಪತ್ತನ್ನು ಲೂಟಿ ಮಾಡಲು ಶಿವಾಜಿ ಅನುವಾದಾಗ ಅಲ್ಲಿಯ ಮಠಾಧೀಶರು "ನೀನು ಹಿಂದೂವಾಗಿ, ಹಿಂದೂ ಮಠವನ್ನೇ ಲೂಟಿ ಮಾಡುವುದು ಸರಿಯೇ?" ಎಂದರಂತೆ.

ಅದಕ್ಕೆ ಶಿವಾಜಿಯು "ಹಿಂದೂ ದೇವಸ್ಥಾನದ ಸಂಪತ್ತು ಒಬ್ಬ ಹಿಂದೂ ರಾಜನಿಗೆ ಹಿಂದೂ ಧರ್ಮ ಕಾಪಾಡಲು ಶಕ್ತಿಶಾಲಿ ಸೈನ್ಯ ಕಟ್ಟಲು ಹಾಗೂ ಹಿಂದೂ ಜನರ ಅಭಿವೃದ್ಧಿಗೆ ಉಪಯೋಗ ಆದರೆ ಅದುವೇ ದೇವರಿಗೆ ಇಷ್ಟ. ಈ ಸಂಪತ್ತು ಈಗ ನಾನು ತೆಗೆದುಕೊಳ್ಳದಿದ್ದರೆ ಒಂದು ದಿನ ಯವನರು ಲೂಟಿಗೈದು ನಿಮ್ಮ ಸಂಪತ್ತಿನಿಂದ ತಮ್ಮ ಸೈನಿಕ ಶಕ್ತಿ ಹೆಚ್ಚಿಸಿಕೊಂಡು ನಿಮ್ಮ ಹಿಂದೂ ಧರ್ಮವನ್ನೇ ನಾಶ ಮಾಡಬಹುದು. ಅಂದರೆ ಹಿಂದೂಗಳ ಸಂಪತ್ತಿನಿಂದ ಹಿಂದೂಗಳದ್ದೇ ನಾಶ. ಹಾಗಾದರೆ ಯಾವುದು ಉಚಿತ? ನನ್ನ ಲೂಟಿಯೇ ಅಥವಾ ಯವನರ ಲೂಟಿಯೇ? ನೀವೇ ಹೇಳಿ ಗುರುಗಳೇ" ಎಂದು ಉತ್ತರಿಸಿದನಂತೆ!


- ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ಪತ್ರಿಕೆಯ ಜುಲೈ 20ರ ಸಂಚಿಕೆಯಲ್ಲಿ 'ಪದ್ಮನಾಭಸ್ವಾಮಿ ದೇವಸ್ಥಾನದಲ್ಲಿ ಒಂದು ಲಕ್ಷಕೋಟಿ ಚಿನ್ನಾಭರಣ' ವರದಿಯಲ್ಲಿ ಹೇಳಿರುವಂತೆ ಹಿಂದೂ ದೇವಾಲಯಗಳಲ್ಲಿ ಹೆಚ್ಚಿನವು ವಂಶಪಾರಂಪರ್ಯವಾಗಿ ಬಂದಿರುತ್ತವೆ. ಇವುಗಳ ಆಸ್ತಿಯನ್ನು ಯಾರೂ ಪ್ರಶ್ನಿಸುವಂತಿಲ್ಲ, ಆದೇ ಕ್ರೈಸ್ತ ಅಥವಾ ಮುಸ್ಲಿಂರದು ಹಾಗಲ್ಲ, ಅದು ಅವರ ಸಮಾಜದ ದೇವಾಲಯಗಳು, ಯಾರೊಬ್ಬರ ಸೊತ್ತಲ್ಲ, ಅವುಗಳ ಮೇಲೆ ಒಬ್ಬರ ಒಡೆತನ ಇರುವುದಿಲ್ಲ.



ಆದರೆ ಹಿಂದೂ ದೇವಾಲಯದ ಮಠಾಧೀಶರು ಮತ್ತು ಧರ್ಮಾಧಿಕಾರಿಗಳು 'ನಾವೆಲ್ಲ ಹಿಂದೂಗಳು, ನಾವೆಲ್ಲ ಒಂದು' ಎನ್ನುತ್ತಾರೆಯೇ ವಿನಃ 'ಈ ದೇವಸ್ಥಾನ ಮತ್ತು ಇದರ ಎಲ್ಲ ಆಸ್ತಿ ಎಲ್ಲರಿಗೂ ಸೇರಿದ್ದು' ಎಂದು ಮಾತ್ರ ಎಂದೂ ಹೇಳುವುದಿಲ್ಲ! ಇನ್ನು ಧರ್ಮದ ಹೆಸರಲ್ಲಿ ಇವತ್ತು ನಡೆಯುತ್ತಿರುವ ಹಿಂದೂ ಧಾರ್ಮಿಕ ಕೇಂದ್ರಗಳಿಂದಾಗಿ ಎಷ್ಟು ಹಿಂದೂಗಳ ಉದ್ಧಾರವಾಗಿದೆ? ಎಷ್ಟು ಹಿಂದೂಗಳು ಕಡುಬಡತನದಿಂದ ಬಿಡುಗಡೆ ಪಡೆದಿದ್ದಾರೆ? ಈ ಧಾರ್ಮಿಕ ಕೇಂದ್ರಗಳು ಹಿಂದೂಗಳಿಗಾಗಿ ಏನು ಮಾಡಿವೆ? ಹಿಂದೂ ಯುವಕರಿಗೆ ಯಾವ ರೀತಿ ಸಹಾಯ ಮಾಡಿವೆ?

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.



ಧರ್ಮಸ್ಥಳವನ್ನೇ ಉದಾಹರಣೆಯಾಗಿ ತೆಗೆದುಕೊಳ್ಳಿ. ಧರ್ಮಸ್ಥಳದ ವಾರ್ಷಿಕ ಆದಾಯ 6000 ಕೋಟಿ ರೂಪಾಯಿ. ಅದರಲ್ಲಿ ಎಷ್ಟು ಹಣವನ್ನು ಸಮಾಜೋದ್ಧಾರಕ್ಕೆ ಬಳಸಲಾಗಿದೆ? ಇವರ ವಿದ್ಯಾಸಂಸ್ಥೆಗಳಿಂದ ಎಷ್ಟು ಜನ ಹಿಂದೂಗಳು ಪ್ರಯೋಜನ ಪಡೆದಿದ್ದಾರೆ?

ಧರ್ಮಸ್ಥಳದವರು ಗ್ರಾಮಾಭಿವೃದ್ಧಿ ನೆಪದಲ್ಲಿ ಫೈನಾನ್ಸ್ ವ್ಯವಹಾರ ನಡೆಸುತ್ತಿದ್ದಾರೆ. ಅಣ್ಣಪ್ಪ ಪಂಜುರ್ಲಿ ಎಂಬುವವರ ಹೆಸರಿನಲ್ಲಿ ನಡೆಸುವ ಈ ವ್ಯವಹಾರ ಭಯೋತ್ಪಾದನೆಗೆ ಸಮಾನದ್ದಾಗಿದೆ. ಈ ವ್ಯವಹಾರಕ್ಕೆ ಕೇಂದ್ರ ಸರ್ಕಾರ 16 ಕೋಟಿ ರೂಪಾಯಿ ಸಬ್ಸಿಡಿ ಕೊಡುತ್ತದೆ. ಆದರೆ ಇದರಲ್ಲಿ ಬಡಜನರಿಂದ 14 ರಿಂದ 16% ಬಡ್ಡಿ ವಸೂಲಿ ಮಾಡುತ್ತಿದ್ದಾರೆ. ಅಂದರೆ ಹಿಂದೂಗಳನ್ನು ಕಡುಬಡವರನ್ನಾಗಿಸುವುದೇ ಇವರ ಉದ್ದೇಶ. ಇದು ಯಾವ ರೀತಿಯ ಗ್ರಾಮಾಭಿವೃದ್ಧಿಯಾಗಿದೆ?

ಇವರು ನಡೆಸುವ ಫೈನಾನ್ಸ್ ಕಂಪೆನಿಗೆ ಡಿಪಾಸಿಟ್‌ಗೆ ಬಡ್ಡಿ ಕೊಡಬೇಕಾಗಿಲ್ಲ, ಮರುಪಾವತಿಗೆ ನೋಟಿಸು ಕಳುಹಿಸಬೇಕಿಲ್ಲ, ಕಟ್ಟಡಕ್ಕೆ ಬಾಡಿಗೆ ಕೊಡಬೇಕಾಗಿಲ್ಲ, ಈ ವ್ಯವಹಾರ ಕುರಿತು ಪುಸ್ತಕಗಳನ್ನು ಇಡಬೇಕಿಲ್ಲ, ಮರುಪಾವತಿಗೆ ಸಿಬ್ಬಂದಿ ಬೇಕಾಗಿಲ್ಲ, ಗ್ರಾಮಕ್ಕೆ ಒಬ್ಬ ಇದ್ದು ಅವನಿಗೆ ವಾರಕ್ಕೆ 400 ರೂಪಾಯಿ ಕೊಟ್ಟರೆ ಸಾಕು. ಇನ್ನು ಮರುಪಾವತಿಗೆ ಕೋರ್ಟು ವಕೀಲರ ಅಗತ್ಯವೂ ಇಲ್ಲ, ಸ್ಟ್ಯಾಂಪ್ ಪೇಪರ್ ಬೇಕಿಲ್ಲ.


ಈ ರೀತಿ ಇವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಳ್ಳೆ ಹೊಡೆದು ಪಡೆಯುತ್ತಿರುವ ವಾರ್ಷಿಕ ಲಾಭ ಒಂಭತ್ತು ಕೋಟಿಗೂ ಅಧಿಕವಂತೆ. ಇವರಿಂದ ಸಾಲ ಪಡೆದವ ಅದನ್ನು ಕಟ್ಟಲು ಸಾಧ್ಯವಾಗದೆ ಒಂದು ಹೊತ್ತಿನ ಊಟಕ್ಕೂ ಪರದಾಡುವ ಸ್ಥಿತಿ ಊರಿನಲ್ಲಿದ್ದೆ. ದಿನಗೂಲಿ ಮಾಡುವವನಿಗೂ 50,000 ಸಾಲ ಕೊಡುತ್ತಾರೆ. ಅವನು ಜೀತದಾಳಾಗಿ ದಿನ ಕಳೆಯುತ್ತಾನೆ.

ಇಂತಹ ದಬ್ಬಾಳಿಕೆಗೆ, ದೌರ್ಜನ್ಯಕ್ಕೆ, ಸುಲಿಗೆಗೆ ಸರ್ಕಾರಗಳಿಂದ ಪ್ರಶಂಸೆ, ಪ್ರಶಸ್ತಿಗಳು ಬೇರೆ?!

ಭಾರತದ ಮೇಲೆ ದಾಳಿ ಇಟ್ಟ ಘಜನಿ ಮಹಮ್ಮದ್ ಸುಖಾಸುಮ್ಮನೆ ಸೋಮನಾಥ ದೇವಾಲಯವನ್ನು 17 ಬಾರಿ ಕೊಳ್ಳೆ ಹೊಡೆಯಲಿಲ್ಲ, ಬದಲಾಗಿ ಅರಮನೆಗಳಲ್ಲಿ, ಕೋಟೆಗಳಲ್ಲಿ ಹಣವನ್ನು ಇಟ್ಟಿಲ್ಲ, ಬದಲಾಗಿ ಅದೆಲ್ಲ ಸಂಪತ್ತು ಸೋಮನಾಥ ದೇವಾಲಯದಲ್ಲಿ ಇದೆ ಎಂಬುದು ಆತನಿಗೆ ಗೊತ್ತಿತ್ತು, ಆದ್ದರಿಂದಲೇ ಆತ ಆ ದೇವಾಲಯದ ಮೇಲೆ ದಾಳಿ ಮಾಡಿದನೇ ಹೊರತು ಹಿಂದೂ ಧರ್ಮವನ್ನು ನಾಶಮಾಡಬೇಕೆಂಬ ಉದ್ದೇಶದಿಂದಲ್ಲ.

ಓಬವ್ವನಿಗೆ ಅವಮಾನ!

ಐತಿಹಾಸಿಕ ವ್ಯಕ್ತಿಗಳ ಹೆಸರನ್ನು ಸಿನಿಮಾಗಳಿಗೆ ಇಡುವುದರ ವಿರುದ್ಧ ಎಲ್ಲೆಡೆ ಅಪಸ್ವರ ಕೇಳಿಬರುತ್ತಿದೆ. ಅದರಲ್ಲೂ 'ದಿವಂಗತ' ಇತಿಹಾಸಕಾರ ಚಿದಾನಂದ ಮೂರ್ತಿಯಂತೂ ಇದೇ ಕಾರಣವನ್ನಿಟ್ಟುಕೊಂಡು ಬುಸಬುಸ ಹೊಗೆ ಬಿಡುತ್ತಿದ್ದಾರೆ. ಇಂಥ ವೇಳೆಯಲ್ಲಿ ನಿರ್ದೇಶಕ ಆನಂದ್. ಪಿ ರಾಜು ಎಂಬಾತ ಮತ್ತೊಂದು ಅನಾಹುತ ಸೃಷ್ಟಿಸುತ್ತಿದ್ದಾರೆ!




ಮೊನ್ನೆಯಷ್ಟೇ ಲೇಡಿ ಬ್ರೂಸ್ಲಿ ಆಯೇಶಾಳನ್ನಿಟ್ಟುಕೊಂಡು 'ಚೆನ್ನಮ್ಮ ಐಪಿಎಸ್' ಎಂಬ ಸಿನಿಮಾವನ್ನು ತೆರೆಗೆ ತಂದಿರುವ ಆನಂದ್ ಪಿ. ರಾಜು ಈಗ 'ಒನಕೆ ಓಬವ್ವ' ಎಂಬ ಸಿನಿಮಾವೊಂದನ್ನು ಬರಬರನೆ ಸುತ್ತುತ್ತಿದ್ದಾರೆ. ಇದರಲ್ಲೂ ಅದೇ ಆಯೇಶಾಳೇ ಮೇನು. ಚಿತ್ರದುರ್ಗದ ಓಬವ್ವನಿಗೂ ಆನಂದಣ್ಣನ ಒನಕೆಗೂ ಎಲ್ಲಿಂದೆಲ್ಲಿಯ ಸಂಬಂಧವೂ ಇಲ್ಲ, ಈ 'ಓಬವ್ವ' ಚಿತ್ರದಲ್ಲಿ ಆಯೇಶಾ ಮತ್ತದೇ ಲೇಡಿ ಇನ್ಸ್‌ಪೆಕ್ಟರ್.

ಈಗ ಚಿತ್ರೀಕರಣಗೊಳ್ಳುತ್ತಿರುವ ಈ ಚಿತ್ರದ ದೃಶ್ಯವೊಂದರ ವಿವರ ಹೀಗಿದೆ: ನಾಯಕಿ ಆಯೇಶಾ ಒನಕೆ ಹಿಡಿದು ಅರಳಲ್ಲಿ ಅಕ್ಕಿ ಕುಟ್ಟುತ್ತಿರುತ್ತಾಳೆ. ಅದೇ ಸಂದರ್ಭದಲ್ಲಿ ವಿಲನ್ ಪೆಟ್ರೋಲ್ ಪ್ರಸನ್ನ ಹುಡುಗಿಯೊಬ್ಬಳನ್ನು ಕಿಡ್ನಾಪ್ ಮಾಡಿಕೊಂಡು ಬಂದು ಆಕೆಯನ್ನು ರೇಪ್ ಮಾಡುತ್ತಿರುತ್ತಾನೆ. ಒಂದೆಡೆ ಆಯೇಶಾ ಒನಕೆ ಕುಟ್ಟುವುದಕ್ಕೂ, ಇನ್ನೊಂದೆಡೆ ಪ್ರಸನ್ನ ಯುವತಿಯ ಶೀಲಹರಣ ಮಾಡುವುದಕ್ಕೂ ಅರ್ಥ ಕಲ್ಪಿಸಿ ನಿರ್ದೇಶಕ ಒನಕೆಯನ್ನು ಸಿಂಬಾಲಿಕ್ ಆಗಿ ತೋರಿದ್ದಾರಂತೆ.

ಓಬವ್ವನ ಒನಕೆಗೆ ಇಂಥ ಕೀಳು ಅರ್ಥವನ್ನು ನೀಡಿರುವುದು ಆನಂದ್ ಅವರ ಅಭಿರುಚಿಗೆ ಸಾಕ್ಷಿಯಂತಿದೆ.

ಈ ದೃಶ್ಯ ಸೆನ್ಸಾರ್ ಅವರ ಕಣ್ಣುಮೀರಿ ಬಿಡುಗಡೆಗೊಂಡರೆ ಕನ್ನಡಿಗರೇ ನಿರ್ದೇಶಕ ಆನಂದನಿಗೆ ಒನಕೆಯೇಟು ನೀಡುವುದು ಶತಸಿದ್ಧ!




ಮಣಿಕಾಂತ್ ನನ್ನನ್ನು ಮಾತಾಡಿಸೇ ಇಲ್ಲ ಎಂದರು ಕಲ್ಯಾಣ್!

ಸಿನಿಮಾ ಮತ್ತು ಪತ್ರಿಕೋದ್ಯಮದ ಇಬ್ಬರು ಸಜ್ಜನರ ನಡುವೆ ಸಣ್ಣದೊಂದು ವಿವಾದ ಉದ್ಭವಿಸಿದೆ.

ಅದು ಪತ್ರಕರ್ತ, ಬರಹಗಾರ ಎ.ಆರ್. ಮಣಿಕಾಂತ್ ಮತ್ತು ಪ್ರೇಮ ಕವಿ ಕಲ್ಯಾಣ್‌ಗೆ ಸಂಬಂಧಿಸಿದ್ದು.


ಇತ್ತೀಚೆಗೆ ಮಣಿಕಾಂತ್ ತಮ್ಮ 'ಹಾಡು ಹುಟ್ಟಿದ ಸಮಯ' ಎಂಬ ಅಂಕಣದಲ್ಲಿ ಕಲ್ಯಾಣ್ ಬರೆದಿರುವ 'ಅರಳುವ ಹೂಗಳೇ ಆಲಿಸಿರಿ' ಹಾಡಿನ ಸೃಷ್ಟಿಯ ಬಗ್ಗೆ ವಿವರಿಸಿದ್ದರು. ಆದರೆ ವಾಸ್ತವವಾಗಿ ಮಣಿಕಾಂತ್ ತಮ್ಮ ಲೇಖನದಲ್ಲಿ ಬರೆದಂತೆ ಈ ಹಾಡು ಕಲ್ಯಾಣ್ ಅವರ ಸ್ವಂತ ರಚನೆಯಲ್ಲ, ಬದಲಾಗಿ ಅದು ತಮಿಳಿನಿಂದ ಬಟ್ಟಿ ಇಳಿಸಿರುವ ಹಾಡು.

ಇದರ ಬಗ್ಗೆ ಕೆಲ ಓದುಗರು ತಕರಾರು ಎತ್ತಿದಾಗ ಮಣಿಕಾಂತ್ "ನನಗೆ ಸಿಕ್ಕ ಮಾಹಿತಿ ಸರಿ ಇದೆಯೋ, ಸುಳ್ಳು ಇದೆಯೋ ಹೇಗೆ ಅಂತ ಕಡಿಮೆ ಅಂದರೂ 10 ಬಾರಿ ಪರಿಶೀಲನೆ ಮಾಡಿದ ನಂತರವೇ ಅದನ್ನು ಅಂಕಣ ರೂಪಕ್ಕೆ ತರಲಾಗುತ್ತದೆ. 'ಅರಳುವ ಹೂಗಳೇ ಆಲಿಸಿರಿ' ಹಾಡಿನ ಬಗ್ಗೆ ಬರೆಯಬೇಕೆಂದು ಹಲವು ಮಿತ್ರರು ಆರು ತಿಂಗಳ ಹಿಂದಿನಿಂದ ಒತ್ತಾಯ ಮಾಡುತ್ತಲೇ ಇದ್ದರು. ಈ ಬಗ್ಗೆ ಕಲ್ಯಾಣ್ ಅವರನ್ನು ಸಂಪರ್ಕಿಸಿ ವಿವರಣೆ ಕೇಳಿದ್ದು ಎರಡು ತಿಂಗಳ ಹಿಂದೆ. ಕಡೆಗೂ ಒಂದು ದಿನ ಕಲ್ಯಾಣ್ ಸಿಕ್ಕರು. 'ಹಾಡಿನ ಟ್ಯೂನ್ ರಿಮೇಕ್. ಮ್ಯೂಸಿಕ್ ರಿಮೇಕ್. ಆದ್ರೆ ಹಾಡು ಸ್ವಮೇಕ್' ಅಂದರು" ಎಂದು ಮಣಿಕಾಂತ್ ಫೇಸ್ ಬುಕ್‌ನಲ್ಲಿ ಬರೆದುಕೊಂಡಿದ್ದಾರೆ.



ಆದರೆ ಕಲ್ಯಾಣ್‌ರನ್ನು ಸಂಪರ್ಕಿಸಿ "ನೀವು ಮಾಡಿದ್ದು ಸರಿಯೇ?" ಎಂದು ಕೇಳಿದರೆ ಕಲ್ಯಾಣ್ ಕಡೆಯಿಂದ ಬರುತ್ತಿರುವ ಮಾತುಗಳೇ ಬೇರೆ.

"'ಅರಳುವ ಹೂಗಳೇ ಆಲಿಸಿರಿ' ಹಾಡಿನ ಬಗ್ಗೆ ಮಣಿಕಾಂತ್ ನನ್ನ ಬಳಿ ಮಾತಾಡೇ ಇಲ್ಲ, ನಾನೂ ಸಹ ಅವರೊಟ್ಟಿಗೆ ಮಾತಾಡಿಲ್ಲ. ನಾನು ಮಾತಾಡಿದ್ದು ಮಣಿಕಾಂತ್ ಅವರ ಸಹೋದ್ಯೋಗಿ-ಸ್ನೇಹಿತ ರವಿಚಂದ್ರ ಎಂಬುವವರ ಬಳಿ. ನಾನು ರವಿಚಂದ್ರ ಅವರ ಬಳಿ ಸ್ಪಷ್ಟವಾಗಿ 'ಇಡೀ ಸಿನಿಮಾ ರಿಮೇಕ್, ಟ್ಯೂನ್‌ಗಳೂ ರಿಮೇಕ್. ಹೀಗಿರುವಾಗ ನಾನು ಮೂಲ ಸಾಹಿತ್ಯದ ಪ್ರೇರಣೆ ಪಡೆದೇ ಈ ಗೀತೆಯನ್ನು ರಚಿಸಿದ್ದೇನೆ' ಎಂದು ಹೇಳಿದ್ದೆ. ನಂತರ ಮಣಿಕಾಂತ್ ಮೆಸೇಜು ಮಾಡಿ 'ನೀವು ಈ ಗೀತೆಯನ್ನು ಬರೆಯಬೇಕಾದರೆ ಎಲ್ಲಿದ್ದಿರಿ?' ಎಂದು ಕೇಳಿದರು. ನಾನು ಕೂಡಾ ಮೆಸೇಜು ಕಳಿಸಿ 'ನಾನು ಡ್ರೈವ್ ಮಾಡುತ್ತಾ ಈ ಸಾಲುಗಳನ್ನು ಚಿಂತಿಸಿದೆ' ಎಂದೆ. ನಂತರ ಪ್ರತಿಕ್ರಿಯಿಸಿದ ಮಣಿ 'ನನಗೆ ಇಷ್ಟು ಮಾಹಿತಿ ಸಾಕು' ಎಂದು ಸುಮ್ಮನಾದರು. ಇಷ್ಟು ಬಿಟ್ಟು ಮಣಿಕಾಂತ್ ಬಳಿ ನಾನು ಯಾವ ಮಾಹಿತಿಯನ್ನೂ ನೀಡಿಲ್ಲ, ರವಿಚಂದ್ರ ಅವರಿಗೆ ನೀಡಿದ ಮಾಹಿತಿ ಈ ಪರಿ ತಪ್ಪಾಗಿದ್ದೇಕೆ ಎಂಬುದೂ ನನಗೆ ಗೊತ್ತಿಲ್ಲ, ಇಷ್ಟಕ್ಕೂ ನಾನೇ 'ಇದನ್ನು ರಿಮೇಕ್ ಅಂತಲೇ ಬರೆಯಿರಿ' ಎಂದು ಹೇಳಿದ್ದೆ, ಆದರೂ ಇಂಥ ತಪ್ಪು ಸಂಭವಿಸಿದೆ.



ಅಮೃತವರ್ಷಿಣಿ, ನಮ್ಮೂರ ಮಂದಾರ ಹೂವೆ, ಚಂದ್ರಮುಖಿ ಸೇರಿದಂತೆ ನನ್ನದು ಎಂದು ಹೇಳಿಕೊಳ್ಳುವುದಕ್ಕೆ ನೂರಾರು ಗೀತೆಗಳಿವೆ. ಯಾರದ್ದೋ ಸಾಹಿತ್ಯವನ್ನು 'ನನ್ನದು' ಎಂದು ಪ್ರತಿಪಾದಿಸುವಂಥ ಮನುಷ್ಯ ನಾನಲ್ಲ.

ನಾವು ಕ್ರಿಯಾಶೀಲರಾಗಿ ಮಾಡುವ ಕೆಲಸ ಬೇಕಾದಷ್ಟಿದೆ. ಹೀಗಿರುವಾಗ ಇಂಥ ವಿಚಾರಗಳಿಗೆ ಪ್ರಾಮುಖ್ಯತೆ ಕೊಡಬಾರದು ಎಂಬುದು ನನ್ನ ಅಭಿಪ್ರಾಯ. ಇಷ್ಟಾಗ್ಯೂ ಮಣಿಕಾಂತ್ ನನ್ನ ಆತ್ಮೀಯ ಸ್ನೇಹಿತರು. ಅವರ ಬರವಣಿಗೆಗೆ ನಾನೂ ಅಭಿಮಾನಿಯೇ" ಇದು ಕೆ.ಕಲ್ಯಾಣ್‌ರ ನೇರ ನುಡಿಗಳು.

ಮಣಿಕಾಂತ್ ಚೆಂದನೆಯ ಬರೆಹಗಾರ. ಅವರು ಬರೆದದ್ದನ್ನು ಓದುವ ದೊಡ್ಡ ಅಭಿಮಾನಿ ಬಳಗವೇ ಇದೆ. ಹಾಗೆಯೇ ಕಲ್ಯಾಣ್‌ರ ಹಾಡುಗಳು ಕನ್ನಡದ ಕೇಳುಗರ ಕರ್ಣಾನಂದಕ್ಕೆ ಕಾರಣವಾಗಿವೆ. ಇಂಥವರ ಮಧ್ಯೆ ತಪ್ಪು ಗ್ರಹಿಕೆ ದೊಡ್ಡ ಮನಸ್ತಾಪಕ್ಕೆ ಕಾರಣವಾಗುವುದು ಬೇಡ ಎನ್ನುವುದೇ ಎಲ್ಲರ ಆಶಯ.

ಹಿಂದಿನ ಕಾಲದಲ್ಲಿ ದೇವಾಲಯಗಳು ಬರೀ ಧಾರ್ಮಿಕ ಕೇಂದ್ರಗಳಾಗಿರಲಿಲ್ಲ, ಒಂದೆಡೆ ಅವು ದೇವಸ್ಥಾನಗಳಾಗಿ ಊರಜನರ ಸಭೆಸಮಾರಂಭಗಳಿಗೆ ಕೇಂದ್ರ ಸ್ಥಾನವಾಗಿದ್ದರೂ ಇನ್ನೊಂದೆಡೆ ಅವು ಊರ ಒಡೆಯರ, ಸಾಮಂತರ, ರಾಜರ ಖಜಾನೆ ಕೂಡ ಆಗಿದ್ದವೆಂದು ಪ್ರಸಿದ್ಧ ಐತಿಹಾಸಕಾರರೇ ಹೇಳಿದ್ದಾರೆ.

ಇವತ್ತಿಗೂ ಬಹಳಷ್ಟು ದೇವಾಯಲಗಳು, ಮಠಗಳು ಮತ್ತು ಧಾರ್ಮಿಕ ಕೇಂದ್ರಗಳು ಆಸ್ತಿವಂತರ ಖಜಾನೆ ತರಹದ ಪಾತ್ರವನ್ನು ಮುಂದುವರೆಸುತ್ತಿವೆ. ನಮ್ಮ ದೇಶದ ಭ್ರಷ್ಟ ರಾಜಕಾರಣಿಗಳು ಇವತ್ತು ತಮ್ಮ ಅಕ್ರಮ ಸಂಪತ್ತನ್ನು ಅಂತಹ 'ಧಾರ್ಮಿಕ' ಅಡ್ಡೆಗಳಲ್ಲಿ ಸಂಗ್ರಹಿಸಿಟ್ಟಿರುವುದು ಇಲ್ಲಲ್ಲ, ಆದ್ದರಿಂದ ವಿದೇಶಿ ಬ್ಯಾಂಕುಗಳಲ್ಲಿ 'ಬಚ್ಚಿಟ್ಟಿರುವ' ಹಣವನ್ನೆಲ್ಲ ವಾಪಸ್ ತರುವ ಮುನ್ನ ನಮ್ಮ ದೇಶದಲ್ಲಿರುವ ಮಠಮಂದಿರಗಳ ಮೇಲೆ ದಾಳಿ ಮಾಡಿ ಅಲ್ಲಿ ಬಚ್ಚಿಟ್ಟಿರುವ ಅಕ್ರಮ ಆಸ್ತಿಗಳನ್ನೆಲ್ಲ ಕಬ್ಜ ಮಾಡಿಕೊಂಡರೆ ನಮ್ಮ ದೇಶವನ್ನು ಸುಲಭವಾಗಿ ಉದ್ಧಾರ ಮಾಡಬಹುದು.

ಹಾಗೆ ಅವುಗಳಲ್ಲಿರುವ ಆಸ್ತಿಪಾಸ್ತಿಗಳನ್ನೆಲ್ಲ ವಶಪಡಿಸಿಕೊಂಡ ನಂತರ ಅವುಗಳ ಆಡಳಿತ ವ್ಯವಸ್ಥೆಯನ್ನು ಸರ್ಕಾರದ ಅಡಿ ತರಬೇಕಿದೆ.

- ರಾಧಾಕೃಷ್ಣ ಬೆಳ್ತಂಗಡಿ

...ಪ್ರೇಮವೇ ಬೇಗ ಬಾ
...ನ್ನ ಗೆಳೆಯ ಶಿವಸುಂದರನ ಬಳಿ ಸುಂದರಿಯಾಗಿ ಬಾ
...ವರ ಮಾತಿನಷ್ಟು ಮೃದುವಾಗಿ ಬಾ
...ಯಿಸದಷ್ಟು ಹರಿತವಾಗಿ ಬಾ
...ಷಣದಷ್ಟು ಮೊಣಚಾಗಿ ಬಾ
...ಹದಷ್ಟು ಮೆತ್ಗಗೆ ಬಾ
...ಂಬೆ ಹಣ್ಣಿನಂತೆ ಬಾ
...ಸುತುಷ್ಟವಾಗಿ ಬಾ
...ರ್ ಹೆಡ್‌ಆಗಿ ಬಾ.
...ಬರೇವಾಗಿ ಬಾ
...ಣವಾಗಿ ಬಾ



ಬೆಂಗಳೂರಿಗೆ ಬಾ
ಬಸವನಗುಡಿಗೆ ಬಾ
ಲಂಕೇಶ್ ಆಫೀಸಿಗೆ ಬಾ
ಬಾ ಪ್ರೇಮವೇ ಬಾ
ಕ್ರಾಂತಿಯನ್ನು ಮೆಲ್ಲಲು ಬಾ
ಇಲ್ಲಾ ಕೊಲ್ಲಲು ಬಾ!

-ಶಶಿಧರ ಹೆಮ್ಮಾಡಿ, ಕುಂದಾಪುರ


ಕೇಂದ್ರ ಯುಪಿಎ ಸರ್ಕಾರ ಆಹಾರ ಹಕ್ಕಿನ ವಿಚಾರದಲ್ಲಿ ಪದೇಪದೇ ಎಡಬಿಡಂಗಿತನ ಪ್ರದರ್ಶಿಸುತ್ತಿದೆ. ಸೋನಿಯಾ ಗಾಂಧಿ ಮುಂದಾಳತ್ವದ ನ್ಯಾಷನಲ್ ಅಡ್ವೈಸರಿ ಕೌನ್ಸಿಲ್ (NAC) ಆಹಾರ ಹಕ್ಕು ಪ್ರತಿಯೊಬ್ಬರಿಗೂ ಸಲ್ಲಬೇಕೆಂದು ಅಭಿಪ್ರಾಯಪಟ್ಟರೆ, ಪ್ರಧಾನಮಂತ್ರಿಗಳಿಂದ ನಿಯೋಜನೆಗೊಂಡಿರುವ ಸಿ. ರಂಗರಾಜನ್ ಕಮಿಟಿ ಆಹಾರ ಸರಬರಾಜಿನ ಕೊರತೆಯ ದೃಷ್ಟಿಯಿಂದ ಈ ಹಕ್ಕು ದುರ್ಬಲ ವರ್ಗದವರಿಗೆ ಮಾತ್ರ ಸೀಮಿತವಾಗಬೇಕೆಂದು ಪ್ರತಿಪಾದಿಸಿದ್ದಾರೆ.

ಆದರೆ ಈ ಕ್ಷಣಕ್ಕೂ ಯಾವುದೇ ನಿರ್ಧಾರ ಕೇಂದ್ರದ ಕಡೆಯಿಂದ ಪ್ರಕಟವಾಗಿಲ್ಲ; ಸದ್ಯಕ್ಕೆ ಆಗುವ ಲಕ್ಷಣಗಳೂ ಕಾಣಿಸುತ್ತಿಲ್ಲ.

ಇದೆಲ್ಲದರ ನಡುವೆಯೇ ಈ ನೆಲದ ಕೋಟ್ಯಂತರ ಜನ ತುತ್ತು ಅನ್ನಕ್ಕೂ ತತ್ವಾರಪಡುತ್ತಿದ್ದಾರೆ. ದುರಂತವೆಂದರೆ, ಟನ್ನುಗಟ್ಟಲೆ ಆಹಾರ ಪದಾರ್ಥ ಸರ್ಕಾರಿ ಉಗ್ರಾಣದಲ್ಲಿ ಕೊಳೆಯುತ್ತಿದೆ. ಅಷ್ಟೇ ಪ್ರಮಾಣದ ದವಸ ಧಾನ್ಯ ಇಲಿ ಹೆಗ್ಗಣಗಳ ಪಾಲಾಗುತ್ತಿದೆ. ಹೀಗೆ ಹಾಳಾದ ಪದಾರ್ಥಗಳಿಂದಲೇ ಎಷ್ಟೊಂದು ಬಡಜೀವಿಗಳ ಹಸಿವು ತಣಿಸಬಹುದಿತ್ತೋ.....

ಇದು ಕೇಂದ್ರ ಸರ್ಕಾರದ ಅಮಾನವೀಯ ನಡವಳಿಕೆ. ದಿನಕ್ಕೆ 20 ರೂಪಾಯಿ ದುಡಿಯುವವನು ಬಡವನಲ್ಲ ಎಂದು ಷರಾ ಬರೆಯುವ ನಿರ್ಲಜ್ಜರಿಗೆ ಬಡತನದ ಸಂಕಟ ಹೇಗೆ ಅರ್ಥವಾದೀತು.


- ರಾಜಪ್ಪ



ಹನ್ನೆರಡು ಕೋಟಿ ಎಲ್ಲಿಂದ ಬಂತೂ?

ಸಿನಿಮಾ ಮಂದಿಗೆ ಬೂಸಿ ಬಿಡುವುದು ಒಂದು ಚಾಳಿ. ಅದರಲ್ಲೂ ತಮ್ಮ ಸಿನಿಮಾಕ್ಕೆ ಖರ್ಚಾಗಿದ್ದಕ್ಕಿಂತ ದುಪ್ಪಟ್ಟು ಹೆಚ್ಚು ಹೇಳುವುದು ಗಾಂಧಿನಗರದಲ್ಲಿ ಒಂದು ಸಂಪ್ರದಾಯವಾಗಿದೆ. ಅಂಥವರಲ್ಲಿ ನಾಲ್ಕು ಪಟ್ಟು ಹೇಳುವವರೂ ಇದ್ದಾರೆ. ಉದಾಹರಣೆಗೆ ನಿರ್ಮಾಪಕ ಎಸ್.ಎಂ.ಸುರೇಶ್ ತಮ್ಮ 'ಚೆಲುವೆಯೇ ನಿನ್ನ ನೋಡಲು' ಚಿತ್ರಕ್ಕೆ ನಾಲ್ಕು ಕೋಟಿ ಖರ್ಚು ಮಾಡಿದ್ದರೂ ತಮ್ಮ ಇತರೆ ಸಿನಿಮಾಗಳಿಗೆ ವೆಚ್ಚ ಮಾಡಿದ್ದನ್ನೂ ಸೇರಿಸಿ "ಈ ಚಿತ್ರಕ್ಕಾಗಿ ಹತ್ತು ಕೋಟಿ ಇನ್‌ವೆಸ್ಟ್ ಮಾಡಿದ್ದೀನಿ" ಎಂದು ಡಂಗೂರ ಸಾರಿದ್ದರು. ನಿರ್ದೇಶಕ ಪ್ರೇಮ್ ಕೂಡಾ ಇಂಥದ್ದೇ ಬಂಡಲ್ ಬಿಡುವ ಆಸಾಮಿ. ಈಗ ಓಂ ಪ್ರಕಾಶ್ ಕೂಡಾ ಇಂತಹ ಜನರ ಪಟ್ಟಿ ಸೇರಿಕೊಂಡಿದ್ದಾರೆ.

ಎರಡು ವರ್ಷಗಳ ಹಿಂದೆ ಆರಂಭವಾದ ಓಂ ಪ್ರಕಾಶ್ ನಿರ್ದೇಶನದ 'ಎಕೆ 56' ಚಿತ್ರಕ್ಕೆ ಈಗಾಗಲೇ 12 ಕೋಟಿ ರೂಪಾಯಿ ವೆಚ್ಚವಾಗಿದೆಯಂತೆ. ಅಂದಹಾಗೆ ಈ ಚಿತ್ರಕ್ಕೆ ಸಿದ್ಧಾಂತ್ ಎಂಬಾತನೇ ಹೀರೋ. ವೃತ್ತಿಯಲ್ಲಿ ವೈದ್ಯನಾಗಿರುವ ಈತ ಈ ಹಿಂದೆ 'ಮಿಂಚು' ಎಂಬ ಸಿನಿಮಾದಲ್ಲಿ ನಟಿಸಿದ್ದ. ಆದರೆ 'ಮಿಂಚು' ಒಂದೇ ವಾರಕ್ಕೆ ಥಿಯೇಟರಿನಿಂದ ಮರೆಯಾಗಿತ್ತು. ಈ ಸಿದ್ಧಾಂತ್ ಬೇರೆ ಯಾರೂ ಅಲ್ಲ, ಮಾಜಿ ಸಚಿವ ಮತ್ತು ಹಾಲಿ ರಾಜ್ಯ ಕಾಂಗ್ರೆಸ್ ನಾಯಕರಾಗಿರುವ ಜಿ.ಪರಮೇಶ್ವರ್ ಅವರ ಖಾಸಾ ಅಣ್ಣನ ಮಗ. ಈ ಚಿತ್ರಕ್ಕೆ ಹನ್ನೆರಡು ಕೋಟಿ ಖರ್ಚು ಮಾಡಿರುವುದಂತೂ ಪಕ್ಕಾ ಬಂಡಲ್. ಆಕ್ಷನ್ ಸೀನ್‌ಗಳು, ದುಬಾರಿಯಾದ ಹೆಲಿಕಾಪ್ಟರ್ ಚೇಸಿಂಗ್ ದೃಶ್ಯಗಳು, ಎಲ್ಲಾ ಸೇರಿ ಈ ಚಿತ್ರಕ್ಕೆ ಆರೇಳು ಕೋಟಿ ರೂಪಾಯಿ ಖರ್ಚಾಗಿರಬಹುದಷ್ಟೇ.



ಅಂದಹಾಗೆ ಈ ಚಿತ್ರದ ನಿರ್ಮಾಪಕ ಯಾರು? ಗುರುತು ಪರಿಚಯವಿಲ್ಲದ ಹೀರೋ ಒಬ್ಬನ ಚಿತ್ರದ ಮೇಲೆ ಇಷ್ಟೆಲ್ಲಾ ದುಡ್ಡು ಅವರು ಯಾಕೆ ಸುರಿಯುತ್ತಿದ್ದಾರೆ? ಎಂಬುದೆಲ್ಲ ಇವತ್ತಿಗೂ ನಿಗೂಢವಾಗಿ ಉಳಿದಿವೆ. ಆತ ವೆಂಕಟೇಶ ಮೂರ್ತಿ ಎಂಬ ಡಮ್ಮಿ ಕ್ಯಾಂಡಿಡೇಟನ್ನು ನಿರ್ಮಾಪಕ ಎಂದು ತೋರಿಸಲಾಗುತ್ತಿದೆಯಾದರೂ ಆತ ಬರೀ ಪ್ರೊಡಕ್ಷನ್ ಇನ್‌ಚಾರ್ಜ್ ಅಷ್ಟೇ ಎಂಬುದು ಬಹುತೇಕರಿಗೆ ಗೊತ್ತಿರುವ ವಿಚಾರ. ಹಲವು ಮೂಲಗಳ ಪ್ರಕಾರ ಸ್ವತಃ ಪರಮೇಶ್ವರ್ ಅವರೇ ಈ ಸಿನಿಮಾಕ್ಕೆ ಹಣ ಹೂಡಿದ್ದಾರಂತೆ.

Regd.No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 27-7-2011 RNI No. KARKAN2005/1

'ಜೋಗಯ್ಯ' ಚಿತ್ರ ವರಮಹಾಲಕ್ಷ್ಮಿ ಹಬ್ಬದಂದು ಬಿಡುಗಡೆಯಾಗಲಿದೆ. ಅದಕ್ಕೆ ಹಿನ್ನೆಲೆಯಾಗಿ 'ಜೋಗಯ್ಯ' ಚಿತ್ರದ ನಿರ್ದೇಶಕ ಪ್ರೇಮ್ ಮತ್ತು ನಿರ್ಮಾಪಕಿ ರಕ್ಷಿತಾ ಬಗ್ಗೆ ಒಂದು ಸಣ್ಣ ಫ್ಲ್ಯಾಷ್‌ಬ್ಯಾಕ್.

ಇದು ಐದು ವರ್ಷಗಳ ಹಿಂದಿನ ಕಥೆ. ಆಗಷ್ಟೇ 'ಜೋಗಿ' ಚಿತ್ರ ಬಿಡುಗಡೆಯಾಗಿತ್ತು. ಉದ್ಯಮದ ಅನೇಕ ಕಲಾವಿದರಿಗೆ "ನನ್ನ ನಿರ್ದೇಶನದ 'ಜೋಗಿ' ಸಿನಿಮಾ ನೋಡಿ" ಎಂದು ಪ್ರೇಮ್ ಗೌರವದಿಂದ ಟಿಕೆಟ್ ಕೊಟ್ಟು ಕಳಿಸಿದ್ದರು. ಅದೇರೀತಿ ಆಗಿನ ನಂ.1 ನಾಯಕಿ ರಕ್ಷಿತಾಗೂ ಟಿಕೆಟ್ ಕಳಿಸಿಕೊಟ್ಟಿದ್ದರು ಪ್ರೇಮ್! ಆಗ ಅನೇಕರು ಸಿನಿಮಾ ನೋಡಿ ಪ್ರೇಮ್ ಕೆಲಸವನ್ನು ಹೊಗಳಿದರೆ ರಕ್ಷಿತಾ ಮಾತ್ರ "ನಾನು ಈ ಸಿನಿಮಾ ನೋಡಬೇಕಾದರೆ ನಿರ್ದೇಶಕರು ನನ್ನ ಜೊತೆ ಸಿನಿಮಾ ನೋಡಬೇಕು. ಇಲ್ಲದಿದ್ದರೆ ನಾನೇ ಟಿಕೆಟ್‌ಅನ್ನು ಖರೀದಿಸಿ ಸಿನಿಮಾ ನೋಡಬಲ್ಲೆ" ಎಂದು ಆ ಟಿಕೆಟ್ ಅನ್ನು ಹಿಂದಿರುಗಿಸಿದ್ದರು!



ಕೊನೆಗೆ ಪ್ರೇಮ್ ಮತ್ತು ರಕ್ಷಿತಾ ಜೊತೆಯಾಗಿ 'ಜೋಗಿ'ಯನ್ನು ವೀಕ್ಷಿಸಿದರು. ಆಗಲೇ ಅವರಿಬ್ಬರ ನಡುವೆ ಪ್ರೇಮಾಂಕುರವಾದುದು. ಆ ನಂತರ ಮದುವೆಯಾಗಿದ್ದು, ಮೊನ್ನೆಮೊನ್ನೆ ಡೈವೋರ್ಸ್‌ನ ಗಾಳಿ ಸುದ್ದಿ ಹರಡಿದ್ದು ಇವೆಲ್ಲವೂ ಹಳೇ ವಿಷಯಗಳು.

ಇವರಿಬ್ಬರು ಸತಿಪತಿಗಳಾಗದಿದ್ದರೆ ಬಹುಶಃ 'ಜೋಗಿ' ಚಿತ್ರದ ಮುಂದುವರೆದ ಭಾಗವಾದ 'ಜೋಗಯ್ಯ' ನಿರ್ಮಾಣವಾಗುತ್ತಿತ್ತೋ ಇಲ್ಲವೋ ಗೊತ್ತಿಲ್ಲ. ಆದರೆ ಇವರಿಬ್ಬರು ಈಗ ಕನ್ನಡ ಚಿತ್ರರಂಗ ಕಂಡಿರುವ ಅತ್ಯಂತ ಅದ್ದೂರಿ ಮತ್ತು ಭಾರೀ ನಿರೀಕ್ಷೆಯ 'ಜೋಗಯ್ಯ' ಚಿತ್ರವನ್ನು ಸಿದ್ಧಗೊಳಿಸಿ ಅದನ್ನು ಬಿಡುಗಡೆಮಾಡುತ್ತಿರುವುದು ಒಂದು ಸಾಹಸವೇ ಸೈ.

ಶುಭಶಕುನ

'ಜೋಗಯ್ಯ' ಬಿಡುಗಡೆಯಾಗುವ ಮುನ್ನವೇ ಪ್ರೇಮ್ ಸಂತೋಷದಿಂದ ಓಡಾಡುತ್ತಿದ್ದಾರೆ. ಇದಕ್ಕೆ ಮುಖ್ಯ ಕಾರಣ 'ಜೋಗಯ್ಯ' ಚಿತ್ರದ ಆಡಿಯೋ ಸಿಡಿ ಮತ್ತು ಕ್ಯಾಸೆಟ್‌ಗಳು ಮಾರುಕಟ್ಟೆಯಲ್ಲಿ ಚೆನ್ನಾಗಿ ಮಾರಾಟವಾಗಿರುವುದು. ಇದೊಂದು ರೀತಿಯಲ್ಲಿ ಶುಭಶಕುನ. ಯಾಕೆಂದರೆ ಚಿತ್ರದ ಆಡಿಯೋ ಕ್ಯಾಸೆಟ್ ಚೆನ್ನಾಗಿ ಮಾರಾಟವಾದ ಕೂಡಲೇ ಹಂಚಿಕೆದಾರರು ಸಿನಿಮಾವನ್ನು ಖರೀದಿಸಲು ಆಸಕ್ತಿ ತೋರಿಸುತ್ತಾರೆ.

'ಜೋಗಯ್ಯ'ನ ವಿಷಯದಲ್ಲೂ ಅದೇ ಆಗಿದೆ. ಪ್ರೇಂ ಈಗಾಗಲೇ ಈ ಚಿತ್ರದ ಹಕ್ಕುಗಳನ್ನು ದೊಡ್ಡ ಮೊತ್ತಕ್ಕೆ ಮಾರಾಟ ಮಾಡಿದ್ದಾರೆ. ಗಾಂಧಿನಗರದ ಮೂಲಗಳ ಪ್ರಕಾರ ಪ್ರೇಮ್ ಈಗಾಗಲೇ ಕನಿಷ್ಠವೆಂದರೂ ನಾಲ್ಕರಿಂದ ಐದು ಕೋಟಿ ರೂ. ಲಾಭದಲ್ಲಿದ್ದಾರೆ. ಇತ್ತೀಚಿನ ದಿನಗಳಲ್ಲಿ ಯಾವ ಕನ್ನಡ ಸಿನಿಮಾ ಕೂಡ ಬಿಡುಗಡೆಯಾಗುವ ಮೊದಲೇ ಇಷ್ಟು ದೊಡ್ಡ ಲಾಭವನ್ನು ಗಳಿಸಿದ್ದಿಲ್ಲ.

ಆದರೆ 'ಜೋಗಯ್ಯ' ಚಿತ್ರವನ್ನು ಖರೀದಿಸಿರುವ ಹಂಚಿಕೆದಾರರೂ ಲಾಭ ಮಾಡುತ್ತಾರೆಯೇ ಎಂಬ ಪ್ರಶ್ನೆಗೆ ಉತ್ತರ ಸಿಗಬೇಕಾದರೆ ಆ ಚಿತ್ರ ಬಿಡುಗಡೆಯಾಗಬೇಕು.

ಪ್ರೇಮ್‌ನ ಎರಡು ವರ್ಷಗಳ ಕೂಸು

ಅದೇನೇ ಇರಲಿ, ಕಳೆದ ಎರಡು ವರ್ಷಗಳಿಂದ ಪ್ರೇಮ್ ತನ್ನ ತನು-ಮನ-ಧನವನ್ನು 'ಜೋಗಯ್ಯ'ನಿಗೆ ಧಾರೆ ಎರೆದಿದ್ದಾರೆ ಎಂದರೆ ತಪ್ಪಾಗಲಾರದು. ಇದು ಶಿವರಾಜ್‌ಕುಮಾರ್ ಅವರ 100ನೇ ಚಿತ್ರ ಎಂಬುದನ್ನು ಎನ್‌ಕ್ಯಾಶ್ ಮಾಡಿಕೊಳ್ಳುವ ಸಲುವಾಗಿ ಈತ ಗಡಿಬಿಡಿಯಲ್ಲಿ ರೀಲು ಸುತ್ತಲಿಲ್ಲ. ಅಷ್ಟೇ ಅಲ್ಲ, ಕನ್ನಡ ಚಿತ್ರರಂಗದ ಪಾಲಿಗೆ ದುಬಾರಿ ಮತ್ತು ರಿಸ್ಕ್ ಎನಿಸಿರುವ 'ತ್ರಿ-ಡಿ' ತಾಂತ್ರಿಕತೆಯನ್ನು ಸಿನಿಮಾದಲ್ಲಿ ಅಲ್ಲಲ್ಲಿ ಬಳಸಿಕೊಂಡಿದ್ದಾರೆ. ಹಳೇ ಕಾಲದ ಯುದ್ಧವನ್ನು ನೆನಪಿಸುವ ದೃಶ್ಯವೊಂದನ್ನು ರಾಜಸ್ತಾನದ ಮರುಭೂಮಿಯಲ್ಲಿ ಚಿತ್ರೀಕರಿಸಿದ್ದಾರೆ... ಅಂದರೆ ಹಲವಾರು ಸಾಹಸ ಮತ್ತು ಹೊಸತನಗಳ ಮಿಶ್ರಣದಿಂದ 'ಜೋಗಯ್ಯ'ನ ಬಗ್ಗೆ ಪ್ರೇಕ್ಷಕರ ಕುತೂಹಲ ಕೆರಳಿಸುವಂತೆ ಪ್ರೇಮ್ ಮಾಡಿದ್ದಾರೆ.

ಈ ತನಕ ಏಕಕಾಲದಲ್ಲಿ ಅತಿ ಹೆಚ್ಚು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಿರುವ ಕನ್ನಡ ಚಿತ್ರ 'ಜಾಕಿ'. ನಿರ್ಮಾಪಕ ರಾಘವೇಂದ್ರ ರಾಜ್‌ಕುಮಾರ್ 'ಜಾಕಿ'ಯನ್ನು ಏಕಕಾಲದಲ್ಲಿ 140 ಥಿಯೇಟರ್‌ಗಳಲ್ಲಿ ಬಿಡುಗಡೆ ಮಾಡಿದ್ದರು. ಈಗ ಆ ದಾಖಲೆಯನ್ನು ಮುರಿದು ತಮ್ಮ 'ಜೋಗಯ್ಯ'ನನ್ನು ರಾಜ್ಯಾದ್ಯಂತ ಕನಿಷ್ಠ ೨೫೦ ಥಿಯೇಟರ್‌ಗಳಲ್ಲಿ ಏಕಕಾಲದಲ್ಲಿ ಬಿಡುಗಡೆ ಮಾಡಲು ಪ್ರೇಮ್ ಯೋಜನೆ ಹಾಕಿಕೊಂಡಿದ್ದಾರೆ.

ಬೆಂಗಳೂರಿನ ಪ್ರತಿಷ್ಠಿತ ಕೆಂಪೇಗೌಡ ರಸ್ತೆಯಲ್ಲೇ ಎರಡು ಮುಖ್ಯ ಥಿಯೇಟರ್‌ಗಳಲ್ಲಿ ಇದನ್ನು ಬಿಡುಗಡೆ ಮಾಡಲು ಪ್ರೇಮ್ ನಿರ್ಧರಿಸಿದ್ದಾರೆ. ಅದೇ ರೀತಿ ನೆರೆಯ ತಮಿಳುನಾಡು-ಆಂಧ್ರ-ಕೇರಳ-ಮಹಾರಾಷ್ಟ್ರದಲ್ಲೂ 'ಜೋಗಯ್ಯ' ಬಿಡುಗಡೆ ಮಾಡಲು ಹೊರಟಿದ್ದಾರೆ. ಈ ಹಿಂದಿನಂತೆ ವಿದೇಶಗಳಲ್ಲೂ ಬಿಡುಗಡೆ ಮಾಡಲು ಪ್ರೇಮ್ ತಯಾರಿ ನಡೆಸಿದ್ದಾರೆ.

ಮತ್ತೆ ಗಿಮ್ಮಿಕ್‌ಗಳು

ಪಬ್ಲಿಸಿಟಿ ವಿಷಯದಲ್ಲಿ ಈ ಮಂಡ್ಯದ ಗಂಡು ಮೊದಲ್ಲೇ ನಿಸ್ಸೀಮ. ಈಗ ತನ್ನ ಈ ಅದ್ದೂರಿ ಚಿತ್ರಕ್ಕೆ ಇನ್ನೂ ಹೆಚ್ಚಿನ ಪಬ್ಲಿಸಿಟಿ ತಂತ್ರಗಳನ್ನು ಆರಂಭಿಸಿದ್ದಾರೆ. ಮೊನ್ನೆ ಶಿವಣ್ಣನ ಬರ್ತ್‌ಡೇ ಜುಲೈ 12ರಂದು ರಾಜ್ಯಾದ್ಯಂತ ಸುಮಾರು 700ಕ್ಕೂ ಹೆಚ್ಚು ಜಾಹೀರಾತು ಫ್ಲೆಕ್ಸ್‌ಗಳನ್ನು ಹಾಕಿಸಿದರು. ಶಿವಣ್ಣ ಅಭಿಮಾನಿಗಳನ್ನು ಖುಷಿ ಪಡಿಸುವ ಉದ್ದೇಶದಿಂದ ಐವತ್ತು ಸಾವಿರ 'ಜೋಗಯ್ಯ' ಟೀ-ಶರ್ಟ್, ಕ್ಯಾಪ್‌ಗಳನ್ನು ಹಂಚಿದರು. ಆ ಮೂಲಕ ಶಿವಣ್ಣನ ಈ ಚಿತ್ರವನ್ನು ನೋಡುವಂತೆ ಅವರ ಅಭಿಮಾನಿಗಳನ್ನು ಹಲವಾರು ರೀತಿಯಲ್ಲಿ ಪ್ರಚೋದಿಸುವ ಪ್ರಯತ್ನವನ್ನು ಮಾಡಿದರು.

ಈ ಮಧ್ಯೆ 'ಜೋಗಯ್ಯ' ಚಿತ್ರದ 'ತ್ರಿ-ಡಿ' ದೃಶ್ಯಗಳನ್ನು ಪ್ರದರ್ಶಿಸಲು ಥಿಯೇಟರ್ ಮಾಲೀಕರಿಗೆ ಸ್ವತಃ ಪ್ರೇಮ್ ವಿಶೇಷವಾದ ಪ್ರೊಜೆಕ್ಟರ್‌ಗಳನ್ನು ಬಾಡಿಗೆ ರೂಪದಲ್ಲಿ ನೀಡುತ್ತಾರಂತೆ. ಹಾಗೆಯೇ ಪ್ರೇಕ್ಷಕರಿಗೆ 'ತ್ರಿ-ಡಿ' ಕನ್ನಡಕ ನೀಡಲು ವ್ಯವಸ್ಥೆ ಮಾಡುತ್ತಾರಂತೆ.

ಗೆದ್ದರೆ ಎಲ್ಲರಿಗೂ ಸೀರುಂಡೆ

ಈ ಚಿತ್ರ ಗೆದ್ದರೆ ಶಿವರಾಜ್‌ಕುಮಾರ್‌ಗೆ ಎಲ್ಲಿಲ್ಲದ ಮಾರುಕಟ್ಟೆ ಸಿಗಲಿದೆ. ಆದ್ದರಿಂದ 'ಜೋಗಯ್ಯ'ನ ಹ್ಯಾಂಗೋವರ್‌ನಲ್ಲೇ ತಮ್ಮ ಚಿತ್ರವನ್ನು ಬಿಡುಗಡೆ ಮಾಡಬೇಕೆಂದು 'ಶಿವ' ಚಿತ್ರದ ನಿರ್ಮಾಪಕ ಶ್ರೀಕಾಂತ್ ಲೆಕ್ಕಾಚಾರ ಮಾಡುತ್ತಿದ್ದಾರೆ. ಹಾಗೆಯೇ 'ಜೋಗಯ್ಯ' ಅಭೂತಪೂರ್ವ ಯಶಸ್ಸು ಕಂಡರೆ ಶಿವಣ್ಣನ ಕಾಲ್‌ಶೀಟ್‌ಗಾಗಿ ಸ್ಕೆಚ್ ಹಾಕಿಕೊಂಡು ಕುಳಿತಿರುವ ನಿರ್ಮಾಪಕರೂ ಇದ್ದಾರೆ.

ಈ ಚಿತ್ರದ ಯಶಸ್ಸಿನಿಂದ ಪ್ರೇಮ್‌ಗೂ ಮತ್ತೊಮ್ಮೆ ತಾರಾಮೌಲ್ಯ ಸಿಗಲಿದೆ. ಆದರೆ ಪ್ರೇಮ್ ಓರ್ವ ಗಿಮಿಕ್ ಮಾಸ್ಟರ್ ಎಂದೇ ಗಾಂಧಿನಗರದಲ್ಲಿ ಫೇಮಸ್ ಆಗಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಅವರು ಅದೆಷ್ಟೇ ಗಿಮಿಕ್‌ಗಳನ್ನು ಮಾಡಿದ್ದರೂ ಅವರ ನಿರ್ದೇಶನದ ಚಿತ್ರಗಳು ಬಾಕ್ಸಾಫೀಸ್‌ನಲ್ಲಿ ಅಂತಹ ದೊಡ್ಡ ಸಂಪಾದನೆಯನ್ನು ಮಾಡಿಲ್ಲ. ಪರಿಣಾಮವಾಗಿ ಪ್ರೇಮ್ ಮಾತನ್ನು ಇವತ್ತು ಗಾಂಧಿನಗರದ ಜನರಾಗಲಿ, ವಿಮರ್ಶಕರಾಗಲಿ ಅಥವಾ ಪ್ರೇಕ್ಷಕರಾಗಲಿ ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ. ಅದಕ್ಕಿಂತ ಮುಖ್ಯವಾಗಿ ಇಂತಹ ಗಿಮಿಕ್‌ಗಳಿಂದಾಗಿಯೇ ಇವತ್ತು ಪ್ರೇಮ್ ತಮ್ಮ ವರ್ಚಸ್ಸು ಮತ್ತು ತಾರಾ ಮೌಲ್ಯವನ್ನು ಕಳೆದುಕೊಂಡಿದ್ದಾರೆ.

ಇದೆಲ್ಲ 'ಜೋಗಯ್ಯ'ನ ಮೇಲೆ ಎಂತಹ ಪರಿಣಾಮ ಬೀರಬಹುದು?

• ಶೆಣೈ



ಶಿವಣ್ಣ 49



ಈಗಷ್ಟೇ ಪ್ಯಾರಿಸ್ ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಆಗಿ ಬೆಂಗಳೂರು ಸೇರಿರುವ ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ತಮ್ಮ ನಲವತ್ತೊಂಬತ್ತನೇ ಹುಟ್ಟುಹಬ್ಬವನ್ನು ಆಚರಿಸಿಕೊಂಡಿದ್ದಾರೆ.

ನಿನ್ನೆಮೊನ್ನೆ ಚಿತ್ರರಂಗಕ್ಕೆ ಬಂದು ಸಿಕ್ಕಾಪಟ್ಟೆ ಮೆರೆದ ಅಮೂಲ್‌ಬೇಬಿಗಳು, ದೂದ್‌ಪೇಡಾಗಳೆಲ್ಲಾ ಬಂದಷ್ಟೇ ವೇಗದಲ್ಲಿ ಶೆಡ್ಡು ಸೇರಿದ್ದರೂ ಶಿವಣ್ಣ ಮಾತ್ರ ತಮ್ಮ ಖದರನ್ನು ಹಾಗೇ ಮುಂದುವರಿಸಿಕೊಂಡು ಬಂದಿದ್ದಾರೆ.

ಹಾಗೆಂದು ಶಿವಣ್ಣನ ಸಿನಿಮಾಗಳೆಲ್ಲಾ ಹಿಟ್ ಆಗಿಲ್ಲ. ಕಳೆದ ಎರಡು ಮೂರು ವರ್ಷಗಳಲ್ಲಿ ಶಿವಣ್ಣ ಅಭಿನಯಿಸಿದ ಹತ್ತಾರು ಚಿತ್ರಗಳು ತೊಪತೊಪನೆ ಧರೆಗುರುಳಿವೆ. ಇದನ್ನು ಕಂಡು ಬಹಳಷ್ಟು ಜನ 'ಶಿವರಾಜ್‌ಕುಮಾರ್ ಕೇವಲ ದುಡ್ಡಿಗಾಗಿ ಸಿನಿಮಾಗಳನ್ನು ಒಪ್ಪಿಕೊಳ್ಳುತ್ತಾರಾ?" ಎಂದು ಕೇಳುವಂತಾಗಿದೆ.

ಅದಕ್ಕೆ ಸರಿಯಾಗಿ ಬಹಳಷ್ಟು ನಿರ್ದೇಶಕರು ಶಿವಣ್ಣನ ಹೇರ್‌ಸ್ಟೈಲನ್ನು ಇತ್ತಿಂದತ್ತ, ಅತ್ತಿಂದಿತ್ತ ತಿರುಗಿಸಿದರೇ ಹೊರತು ಶಿವಣ್ಣನ ಘನತೆಗೆ, ಪ್ರತಿಭೆಗೆ ಸೂಕ್ತವಾದ, ಅವರ ವೃತ್ತಿಬದುಕಿಗೆ ತಿರುವು ನೀಡುವಂಥ ಒಂದು ಪಾತ್ರವನ್ನೂ ಸೃಷ್ಟಿಸಲಿಲ್ಲ. ಎಲ್ಲ ಚಿತ್ರಗಳಲ್ಲೂ ಒಂದೇ ತೆರನಾದ ಪಾತ್ರಗಳು, ನಟನೆಗೆ ಅವಕಾಶವೇ ಇಲ್ಲದ ಹೊಡಿಬಡಿ ದೃಶ್ಯಗಳು, ಏಕತಾನತೆಯ ಬಾಡಿ ಲಾಂಗ್ವೇಜು, ಡೈಲಾಗುಗಳಂತೂ ನೋಡುಗರ ತಲೆ ಚಿಟ್ಟುಹಿಡಿಸುವಂತಹವು.

ಹಾಗೆ ನೋಡಿದರೆ ಶಿವಣ್ಣನ ವೃತ್ತಿ ಬದುಕು ಇಂತಹ ಏರುಪೇರುಗಳಿಂದಲೇ ಕೂಡಿದೆ. ಅವರ ಚಿತ್ರಗಳು ಒಂದರ ಹಿಂದೆ ಒಂದು ನೆಲಕಚ್ಚುತ್ತಿರುತ್ತವೆ. ಆಗ 'ಶಿವಣ್ಣನ ಜಮಾನಾ ಮುಗೀತು' ಎಂಬ ಕೂಗೂ ಕೇಳಿಬರುತ್ತಿದ್ದಂತೆಯೇ ಅವರ ಚಿತ್ರವೊಂದು ಸೂಪರ್ ಹಿಟ್ ಆಗುತ್ತದೆ. ಆಗ ಶಿವಣ್ಣ ಹತ್ತಾರು ಸಿನೆಮಾಗಳಿಗೆ ಬುಕ್ ಆಗಿ ಮತ್ತೆ ಮೆರೆಯಲಾರಂಭಿಸುತ್ತಾರೆ.

ಹಾಗೆಯೇ ಇತ್ತೀಚೆಗೆ ಶಿವಣ್ಣನಿಗೆ ಸೋಲಿನ ಸರಪಳಿಯಿಂದ ಬಿಡುಗಡೆ ನೀಡಿದ 'ಮೈಲಾರಿ'ಯಿಂದಾಗಿ ಅವರು ಮತ್ತೆ ಎದ್ದು ನಿಂತಿದ್ದಾರೆ. ಈಗ ಶಿವಣ್ಣ ಸಹಿ ಮಾಡಿರುವ ಚಿತ್ರಗಳ ಸಂಖ್ಯೆ ಬರೋಬ್ಬರಿ ಹನ್ನೆರಡು. ಅವುಗಳಲ್ಲಿ 'ಲಕ್ಷ್ಮಿ' ಮತ್ತು 'ಶಿವ' ಚಿತ್ರಗಳ ಶೂಟಿಂಗ್ ಆರಂಭವಾಗಿದ್ದರೆ, ನಾಗೇಂದ್ರ ಪ್ರಸಾದ್ ನಿರ್ದೇಶಿಸಲಿರುವ 'ಪುಣ್ಯವಂತ', ಶ್ರೀವತ್ಸನ 'ವರದ', ಓಂ ಪ್ರಕಾಶ್‌ರ 'ಸಿಂಹ', ನರೇಂದ್ರ ಬಾಬು ಅವರ 'ಸಾರಂಗ', ಮಳವಳ್ಳಿ ಸಾಯಿ ಅವರ 'ಜಂಗಮ' ಸೇರಿದಂತೆ ಇನ್ನೂ ಹೆಸರಿಡದ ಆರು ಚಿತ್ರಗಳು ಶಿವಣ್ಣನ ಡೇಟ್ಸ್‌ಗಾಗಿ ಕಾದು ಕುಳಿತಿವೆ.

ಐವತ್ತರ ಹೊಸ್ತಿಲಲ್ಲಿರುವ ಶಿವರಾಜ್‌ಕುಮಾರ್ ಸಿನಿಮಾ ರಂಗಕ್ಕೆ ಬಂದು ಇಪ್ಪತ್ತೈದು ವರ್ಷ ಕಳೆದಿದ್ದರೂ ಅವರು ತಮ್ಮ ಬೇಡಿಕೆಯನ್ನು ಉಳಿಸಿಕೊಂಡಿರುವುದಕ್ಕೆ ಕಾರಣ ಅವರ ವೃತ್ತಿಪರತೆ, ಶಿಸ್ತು ಮತ್ತು ಸರಳತೆ.

ಇಂಥ ಶಿವಣ್ಣ ಇನ್ನೂ ಅನೇಕ ವರ್ಷ 'ಹೀರೋ' ಆಗೇ ಉಳಿಯಲಿ.

• ಅರು

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, B